ಸಾನಿಯಾ

ತಿಂಗಳ ಪತ್ರಿಕೆ ಮೇ : 1997

* "ಮಹಿಳಾ ಸಶಕ್ತತೆ"ಯೆಂಬ ರಂಗಿನ ಚಾದರ
* ಅಂಗನವಾಡಿ ಕಾರ್ಯಕರ್ತೆಯರ ಹೋರಾಟ - ಸಾಧನೆ
* ಮನೆಗೆಲಸಕ್ಕೆ ಮನ್ನಣೆ ಬೇಡಿ ಸಂಘಟಿತಗೊಂಡವರು
* ಕೆಲಸದ ಹಕ್ಕಿಗಾಗಿ ಸಾಥಿನ್ನರ ಮುಂದುವರೆದ ಹೋರಾಟ
* ಛತ್ತಿಸ್‌ಘರ್‌ನ ಮಹಿಳಾ ಮುಕ್ತಿ ಮೋರ್ಚಾ
* ಕಟ್ಟಡ ಕಾರ್ಮಿಕ ಸಂಘಟನೆಯಲ್ಲಿ ಮಹಿಳೆಯರು

ಮಾನಸ

ತಿಂಗಳ ಪತ್ರಿಕೆ

ಸಂಪುಟ : 12 ಸಂಚಿಕೆ : 5

ಮೇ : 1997

ವಿಳಾಸ :

"ಮಾನಸ" ತಿಂಗಳ ಪತ್ರಿಕೆ

ಪಂಚಾಯಿತಿ ರಸ್ತೆ

ಕಾಡುಗೋಡಿ ಪೋಸ್ಟ್

ಬೆಂಗಳೂರು - 560 067

ಸೂಚನೆ : ಬಿಡಿ ಪ್ರತಿ 3-00 ರೂ.

ವಾರ್ಷಿಕ ಚಂದಾ 40-00 ರೂ.

ಒಂದು ವಿಶೇಷ ಸಂಚಿಕೆಯೊಂದಿಗೆ

ಒಟ್ಟು ಹನ್ನೊಂದು ಸಂಚಿಕೆಗಳು

ಈ ಸಂಚಿಕೆಯಲ್ಲಿ....

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ

ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು - ೫೬೦ ೦೬೭

ಸಂಪಾದಕೀಯ



1995ರ UNDPಯ 'ಮಾನವ ಸಂಪನ್ಮೂಲ ವರದಿ'ಯಲ್ಲಿ ಪ್ರಪಂಚದಾದ್ಯಂತ ಮಹಿಳೆಯರ ಕೆಲಸ ಉತ್ಪಾದನಾ ರಹಿತ ಚಟುವಟಿಕೆಯಾಗಿಯೇ ಪರಿಗಣಿತವಾಗಿರುವುದನ್ನು ಪ್ರಶ್ನಿಸಿ ಅದಕ್ಕೆ ಸೂಕ್ತ ಮನ್ನಣೆ ದೊರಕಬೇಕೆನ್ನುವುದನ್ನು ಪ್ರಸ್ತಾಪಿಸಲಾಗಿದೆ. ಇಲ್ಲಿ ಮಹಿಳೆಯರ ಸಂಬಳವಿಲ್ಲದ ಕೆಲಸದ ವ್ಯಾಪ್ತಿ ಅವರ ಮನೆಕೆಲಸವನ್ನೂ ದಾಟಿದ ಚಟುವಟಿಕೆಗಳಲ್ಲಿರುವುದನ್ನು ಗುರುತಿಸಲಾಗಿದೆ. ಒಟ್ಟಾರೆಯಲ್ಲಿ ಮಹಿಳೆಯರು ಮಾಡುವ ಕೆಲಸ ಪುರುಷರು ಮಾಡುವ ಕೆಲಸಕ್ಕಿಂತ ಎಷ್ಟೋ ಜಾಸ್ತಿಯಿದ್ದರೂ ಮಹಿಳೆಯರ ಕೆಲಸ ಮಾತ್ರ GDP (ರಾಷ್ಟ್ರೀಯ ಉತ್ಪಾದನೆ)ಯಡಿ ಸೇರುವುದಿಲ್ಲ. ಇತ್ತೀಚಿನ ಒಂದು ಸಮೀಕ್ಷೆಯು, ಮಹಿಳೆಯರು ವರ್ಷದ 365 ದಿನಗಳೂ ತಾವು ಮುಖ್ಯವಾಗಿ ಮನೆಕೆಲಸದಲ್ಲಿ ತೊಡಗಿರುವುದಾಗಿ ಗುರುತಿಸಿಕೊಳ್ಳುವುದನ್ನು ತೋರಿಸುತ್ತದೆ, ತಾವು ಬೇರೆ ಉತ್ಪಾದನಾ ಚಟುವಟಿಕೆಯಲ್ಲಿ ತೊಡಗಿದ್ದರೂ ಕೂಡ. ಅಡಿಗೆ, ತೊಳೆದು-ಬಳಿಯುವುದು, ಮಕ್ಕಳನ್ನು ಸಾಕುವುದು (Cooking, Cleaning, Child Care ಎಂಬ 3 "C"ಗಳು) ಇವುಗಳಲ್ಲಡಗಿರುತ್ತದೆ ಇದು. ನೀರು, ಉರುವಲುಗಳ ಸಂಗ್ರಹಣೆ ಅಡುಗೆಯಲ್ಲೇ ಸೇರುತ್ತದೆ. ವಿಪರ್ಯಾಸವೆಂದರೆ, ಇಡೀ ಸಮಾಜದ ಅಸ್ತಿತ್ವಕ್ಕೆ ತಳಪಾಯವಾದ ಇಂತಹ ಚಟುವಟಿಕೆಗಳನ್ನು ಸ್ವತಃ ಹೆಂಗಸರಿಂದ ಹಿಡಿದು ಪಾಲಿಸಿ ನಿರ್ಮಾತೃಗಳವರೆಗೆ ಯಾರೂ ಕೆಲಸ ಎಂದು ಪರಿಗಣಿಸುವುದಿಲ್ಲ.

ಮಹಿಳೆಯರು ಅನಾದಿ ಸಮಯದಿಂದಲೂ ಇಂತಹ ಮನ್ನಣೆ ರಹಿತ ಕೆಲಸಕ್ಕೆ ಒಗ್ಗಿಕೊಂಡು, ಒಪ್ಪಿಕೊಂಡು ಬಂದಿರುವುದನ್ನೇ ರಾಜ್ಯ ವ್ಯವಸ್ಥೆ ಕೂಡ ಅಚ್ಚುಕಟ್ಟಾಗಿ ಬಳಸಿಕೊಂಡಿದೆ. ಬೇರೆಲ್ಲ ಕಡೆಯಂತೆ 'ಮಹಿಳಾ ಅಭಿವೃದ್ಧಿ'ಗೆಂದು ರೂಪಿಸುವ ಕಾರ್ಯಕ್ರಮಗಳನ್ನು ಕೂಡ ಮಹಿಳೆಯರು ತಮ್ಮ 'ಮನೆಕೆಲಸ'ದಂತೆಯೇ ನಡೆಸಿಕೊಂಡು ಹೋಗಬೇಕೆಂದು ನಿರೀಕ್ಷಿಸುತ್ತದೆ. ಇದು ಒಂದು ಕಡೆಯಾದರೆ, ಮತ್ತೊಂದೆಡೆ, ತಮಗೆ ಗೊತ್ತಿರುವ ಒಂದೇ ಕುಶಲತೆಯಾದ ಮನೆಕೆಲಸವನ್ನು ಮಾರಿಕೊಂಡು ಹೊಟ್ಟೆ ಹೊರೆಯಲು ಮುಂದಾಗುವ ಮಹಿಳೆಯರ ಅಪಾರ ಶ್ರಮ ನಾಲ್ಕು ಕಾಸಿಗೆ ಪೋಲಾಗಿ ಹೋಗಿಬಿಡುತ್ತದೆ.

ಮಹಿಳಾ ಚಳುವಳಿ ಮಹಿಳೆಯರ ಯಾವತ್ತೂ ಮನ್ನಣೆ ರಹಿತ ಕೆಲಸಕ್ಕೆ ಮೌಲ್ಯ ದೊರಕಬೇಕೆನ್ನುವ ಪ್ರಶ್ನೆಯನ್ನು ಎತ್ತಿಕೊಂಡು ಶಕ್ತಿಯುತವಾಗಿ ಪ್ರತಿಪಾದಿಸುತ್ತಾ ಬಂದಿರುವುದರ ಪ್ರಭಾವ! ಈ ಹೊತ್ತು ಮಹಿಳೆಯರು ಅಲ್ಲಲ್ಲಿ, ಸಣ್ಣ ಸಣ್ಣ ಪ್ರಯತ್ನಗಳಲ್ಲಾದರೂ, ತಮ್ಮ ಕೆಲಸಕ್ಕೆ ಮೌಲ್ಯ ಸಿಗಬೇಕೆಂಬುದನ್ನು ಮೂಲಭೂತ ಹಕ್ಕಾಗಿ ಪ್ರತಿಪಾದಿಸತೊಡಗಿದ್ದಾರೆ. ಸಾಥಿನ್ನರಾಗಬಹುದು, ಸಹಯೋಗಿನಿಯರಾಗಬಹುದು, ಅಂಗನವಾಡಿ ಕಾರ್ಯಕರ್ತೆಯರು, ಮನೆಕೆಲಸ ಮಾಡುವ ಹೆಂಗಸರು, ಇವರ್‍ಯಾರನ್ನೇ ತೆಗೆದುಕೊಂಡರೂ, ನ್ಯಾಯವಾಗಿ ಮೌಲ್ಯ ಸಿಗಬೇಕಾದ ತಮ್ಮ ಕೆಲಸವನ್ನು ತಿರುಚಿ ವ್ಯಾಖ್ಯಾನಿಸುವುದರ ಮೂಲಕ ಮೌಲ್ಯರಹಿತ ಮನೆಕೆಲಸದ ಚೌಕಟ್ಟಿಗೆ ತಳ್ಳಲು ಪ್ರಯತ್ನಿಸುತ್ತಿರುವುದನ್ನು ಬಲವಾಗಿ ವಿರೋಧಿಸಿ ಹೋರಾಟಕ್ಕಿಳಿದಿದ್ದಾರೆ. ದೊಡ್ಡ ಟ್ರೇಡ್ ಯೂನಿಯನ್‌ಗಳು ಯಾವತ್ತೂ ಎತ್ತದಿದ್ದ ಮಹಿಳೆಯರ ಕೆಲಸದ ಹಕ್ಕಿನ ಪ್ರಶ್ನೆಯನ್ನು ಪ್ರತಿಪಾದಿಸತೊಡಗಿದ್ದಾರೆ.

ಅದೇನೇಯಾದರೂ ಮಹಿಳಾ ಚಳುವಳಿ ಮಹಿಳೆಯರ ಕೆಲಸದ ಹಕ್ಕಿನ ಪ್ರತಿಪಾದನೆಯ ವ್ಯಾಪಕ ಚಳುವಳಿಯಾಗಿ ರೂಪುಗೊಳ್ಳುವುದು ಈ ಹೊತ್ತು ತುಂಬಾ ಮುಖ್ಯವಾಗಿದೆ.

●

"ಮಾನಸ" ಓದುಗರಿಗೆ ಕಾರ್ಮಿಕ ದಿನಾಚರಣೆಯ ಶುಭಾಶಯಗಳು

"ಮಹಿಳಾ ಸಶಕ್ತತೆ"ಯೆಂಬ ರಂಗಿನ ಚಾದರ

ಇದೇ ವರ್ಷದ ಮಾರ್ಚ್ 29-30ರ ದಿನಗಳಲ್ಲಿ ಬೆಂಗಳೂರಲ್ಲಿ ಒಂದು ವಿಶಿಷ್ಟವಾದ, ಕೊಂಚ ವಿಚಿತ್ರವೂ ಎನ್ನಬಹುದಾದ ಸಭೆಯೊಂದು ನಡೆಯಿತು. 'ವಿಚಿತ್ರ' ವೆಂದೇಕೆಂದರೆ, ಗ್ರಾಮೀಣ ಬಡ ಮಹಿಳೆಯರನ್ನು ಸಂಘಟಿಸಿ, ತಮ್ಮ ಸಶಕ್ತತೆಯ ದಾರಿ ಹುಡುಕಿಕೊಳ್ಳಲು ಅವರನ್ನು ಸನ್ನದ್ಧಗೊಳಿಸುವ ದಿನದ ರಾತ್ರಿ-ಹಗಲುಗಳಲ್ಲಿ ನಿರಂತರವಾಗಿ ಕಳೆದ ಏಳು ವರ್ಷಗಳಿಂದ ದುಡಿಯುತ್ತಾ ಬಂದಿರುವ ನಾವೇ ವಯಕ್ತಿಕವಾಗಿ ತೀರಾ ಅಶಕ್ತ ಸ್ಥಿತಿಯಲ್ಲಿರುವೆವಾಗಿ ನಮ್ಮ ಸಶಕ್ತತೆಗೇ ಅವಕಾಶಬೇಕು ಎಂಬ ಹಕ್ಕೊತ್ತಾಯವನ್ನು ಈ ದಿನಗಳಲ್ಲಿ ಒಟ್ಟಾಗಿ ಬಲವಾಗಿ ಪ್ರತಿಪಾದಿಸಿದ್ದೆವು! ಕಳೆದ ವರ್ಷಗಳಲ್ಲಿ ನಮ್ಮ ಗ್ರಾಮೀಣ ಬಡ ಸೋದರಿಯರಿಗಾಗಿ ಸಾವಿರಾರು ಸಂಘಗಳನ್ನು ಕಟ್ಟಿಕೊಟ್ಟಿರುವ ನಾವು ಈಗ ನಮ್ಮದೇ ಸಂಘವನ್ನು ಕಟ್ಟಿಕೊಳ್ಳಬೇಕಾಗಿ ಬಂದಿರುವುದು ಎಂತಹ ವಿಪರ್ಯಾಸವೆಂದು ನಮಗೆ ಅನ್ನಿಸದೇ ಇರಲಿಲ್ಲ! ಇದೆಲ್ಲ ಹೇಗಾಯಿತು? ಯಾಕಾಯಿತು?

ಈ ಸಭೆಯಲ್ಲಿ ಸೇರಿದ್ದ ನಾವು "ಮಹಿಳಾ ಸಮಖ್ಯಾ" ಎನ್ನುವ ಸರ್ಕಾರೀ ಪೋಷಿತ "ಮಹಿಳಾ ಸಶಕ್ತತಾ" ಕಾರ್ಯಕ್ರಮದಲ್ಲಿ ಕೆಲಸ ಮಾಡುತ್ತಿರುವ ಗ್ರಾಮೀಣ ಕಾರ್ಯಕರ್ತೆಯರು ಮತ್ತು ಈ ಕಾರ್ಯಕ್ರಮಕ್ಕೆ ಬೆಂಬಲ ರಚನೆಯಾದ ಜಿಲ್ಲಾ ಮತ್ತು ರಾಜ್ಯ ಕಛೇರಿಗಳಲ್ಲಿ ದುಡಿಯುತ್ತಿರುವ ಕಛೇರಿ ಸಿಬ್ಬಂದಿಗಳು. ಕಳೆದ ಎರಡು ವರ್ಷಗಳ ನಮ್ಮ ಸತತ ಪ್ರಯತ್ನದ ಫಲವಾಗಿ ಹುಟ್ಟಿ ನಿಧಾನಕ್ಕೆ ಬೆಳೆಯುತ್ತಾ ಇಂದು 'ಸಮಖ್ಯಾ'ದಲ್ಲಿ ಕೆಲಸ ಮಾಡುವ ಎಲ್ಲ ಬಗೆಯ, ಪ್ರತಿಯೊಬ್ಬ ಕೆಲಸಗಾರರ ಸದಸ್ಯತ್ವವನ್ನು ಪಡೆದು ಬಲಿಷ್ಟವಾಗಿ ರೂಪಿತಗೊಂಡಿರುವ ಯೂನಿಯನ್ನಿನ ಮುಂದಿನ ಯೋಜನೆಗಳನ್ನು ರೂಪಿಸುವುದು ಅಂದಿನ ದಿನಗಳ ಸಭೆಯ ಉದ್ದೇಶವಾಗಿತ್ತು. 'ಮಹಿಳಾ ಸಶಕ್ತತೆ'ಗಾಗಿ ಅತ್ಯಂತ ವಿಶಾಲವಾದ, ಪ್ರಗತಿಪರ ಧೋರಣೆಯ ತತ್ವದ ಮೇಲೆ ರೂಪುಗೊಂಡ ಈ ಕಾರ್ಯಕ್ರಮ ಕಾರ್ಯತಃ ಇಂದು ತಲುಪಿರುವದಾದರೂ ಎಲ್ಲಿಗೆ? ಎಂಬುದು ನಮ್ಮೆಲ್ಲರ ಆತಂಕಕ್ಕೆ ಕಾರಣವಾಗಿರುವಂತೆಯೇ, "ಗೌರವಧನ"ವೆಂಬ ಟೋಕನ್ ಪುಡಿಗಾಸು ನಮ್ಮ ಬದುಕುಗಳನ್ನು ಅಸಹನೀಯಗೊಳಿಸಿ ತೀವ್ರ ಅಗೌರವಕ್ಕೆ ಪಾತ್ರರನ್ನಾಗಿಸಿರುವುದನ್ನು ಪ್ರತಿಭಟಿಸಬೇಕೆನ್ನುವುದೂ ನಮ್ಮ ಕಾಳಜಿಯಾಗಿತ್ತು.

ಇದು ಮಹಿಳಾ ಸಮಖ್ಯಾ :

ರಾಷ್ಟ್ರೀಯ ಶಿಕ್ಷಣ ಯೋಜನೆ (1986)ರಲ್ಲಿ ಮಹಿಳೆಯರ ಸಶಕ್ತತೆ ಮತ್ತು ಸಮಾನತೆಗೆ ಒತ್ತು ಕೊಟ್ಟಿದ್ದರ ಫಲವಾಗಿ ಹುಟ್ಟಿ ಬಂದದ್ದೇ 'ಮಹಿಳಾ ಸಮಖ್ಯಾ'. "ಮಹಿಳೆಯರು ಸಾಮಾಜಿಕ-ಆರ್ಥಿಕ ಮತ್ತು ಸಾಂಸ್ಕೃತಿಕವಾಗಿ ದಾಸ್ಯಕ್ಕೊಳಪಟ್ಟಿರುವುದೇ ಅವರ ಸಾಕ್ಷರತೆ ಮತ್ತು ಶಿಕ್ಷಣದ ಮಟ್ಟ ತೀರಾ ಹೀನಾಯವಾಗಿರುವುದಕ್ಕೆ ಕಾರಣ. ತಮ್ಮ ಆಸುಪಾಸಿನ, ನಿತ್ಯದ ಆಗುಹೋಗುಗಳಿಗೆ ಮೀರಿದ ಯಾವ ಮಾಹಿತಿಯೂ ಅವರಿಗೆ ದಕ್ಕಲಾರದು. ತೀರ್ಮಾನಗಳು ತೆಗೆದುಕೊಳ್ಳಲ್ಪಡುವ ಪ್ರಕ್ರಿಯೆಯಿಂದ ಸಂಪೂರ್ಣವೇ ಹೊರಗುಳಿಯುವ ಅವರು ಸರ್ಕಾರೀ ಕಾರ್ಯಕ್ರಮಗಳನ್ನು ಮೌನವಾಗಿ ಬರಮಾಡಿ ಕೊಳ್ಳುತ್ತಾರೆ. ಅವರಿಗೆ ತಮ್ಮ ಹಕ್ಕುಗಳ ಅರಿವು

ಗ್ರಾಮೀಣ ಬಡಮಹಿಳೆಯರ ಬದುಕಲ್ಲಿ ಗುಣಾತ್ಮಕ ಬದಲಾವಣೆಯನ್ನು ತರುವ ಉದ್ದೇಶದಿಂದ 'ಮಹಿಳಾ ಸಮಖ್ಯಾ' ಎಂಬ ಹೆಸರಲ್ಲಿ ಪ್ರಾರಂಭವಾದ ಸರ್ಕಾರೀ ಮಹಿಳಾ ಸಶಕ್ತತೆಯ ಕಾರ್ಯಕ್ರಮ ಕಳೆದ ಎಂಟು ವರ್ಷಗಳಿಂದಲೂ ಕರ್ನಾಟಕದಲ್ಲಿ ಯಶಸ್ವಿಯಾಗಿ ನಡೆಯುತ್ತಿದೆ. ಇಂದು ಕರ್ನಾಟಕದ ಐದು ಜಿಲ್ಲೆಗಳಲ್ಲಿ ಸಾವಿರಕ್ಕೂ ಹೆಚ್ಚು ಹಳ್ಳಿಗಳಲ್ಲಿ ಸುಮಾರು 50,000 ಗ್ರಾಮೀಣ ಬಡ ಮಹಿಳೆಯರ ಬದುಕಲ್ಲಿ ಇಂತಹ ಗುಣಾತ್ಮಕ ಬದಲಾವಣೆಯನ್ನು ಕಾಣಬಹುದಾಗಿದೆ. ರಾಜಕೀಯ ಭಾಗವಹಿಕೆ, ಆರ್ಥಿಕ ಸ್ವಾತಂತ್ರ್ಯ, ಆರೋಗ್ಯ ಸ್ಥಿತಿಯ ಸುಧಾರಣೆ, ಸಾಕ್ಷರಗೊಳ್ಳುವಿಕೆಗಳು ಅಲ್ಲದೆ ಕುಟುಂಬ ಮತ್ತು ಸಮಾಜದೊಳಗಿನ ಕ್ರೂರ, ದಮನಕಾರೀ ಪಿತೃಪ್ರಧಾನ ಮೌಲ್ಯಗಳನ್ನು ಮೆಟ್ಟಿ ನಿಲ್ಲುವ ಮಟ್ಟಿಗೂ ಈ ಮಹಿಳೆಯರ ಬದುಕಲ್ಲಿ ಬದಲಾವಣೆಗಳಾಗಿವೆ. ಇಂತಹ ಮೌಲಿಕ ಬದಲಾವಣೆಗೆ ತರಲು ಕಳೆದ ಎಂಟು ವರ್ಷಗಳಿಂದಲೂ ದಿನದ ಹಗಲು-ರಾತ್ರಿಗಳಲ್ಲಿ, ವರ್ಷದ 365 ದಿನಗಳಲ್ಲಿ ಅಪಾರ ಬದ್ಧತೆಯಿಂದ ದುಡಿಯುತ್ತಾ ಬಂದಿರುವವರು ಸಹಯೋಗಿನಿಯರು ಇಲ್ಲದೆ ಸಹಾಯಕಿಯರೇ ಮುಂತಾದ ಇತರರು. ಆದರೆ ತಮ್ಮ ಇಂತಹ ಬೆಲೆ ಕಟ್ಟಲಾಗದ ಸೇವೆಗೆ ನಿಜಾರ್ಥದಲ್ಲೂ ಬೆಲೆಯಿಲ್ಲವೇ ಹೋಗಿರುವುದು, ಅಂದರೆ ತಮ್ಮ ಕೆಲಸಕ್ಕೆ ಸಂಬಳವಿಲ್ಲದಿರುವುದು, 'ಗೌರವಧನ'ವೆಂಬ ಕನಿಷ್ಟ ಕೂಲಿಗೂ ಸಮನಲ್ಲದ ಪುಡಿಕಾಸಿನಲ್ಲಿ ತೃಪ್ತಿಪಟ್ಟು ತಾವು ತ್ಯಾಗಮಯರಾಗಿ ಸೇವೆ ಸಲ್ಲಿಸಬೇಕಾಗಿರುವ ಸ್ಥಿತಿಯನ್ನು ಅವರು ಪ್ರಶ್ನಿಸಿ, ಪ್ರತಿಭಟಿಸತೊಡಗಿದ್ದಾರೆ. ಸಾವಿರಾರು ಮಹಿಳೆಯರನ್ನು 'ಸಶಕ್ತತೆ'ಗೊಳಿಸುವ ತಾವೇ ತೀರಾ ಅಶಕ್ತರಾಗಿರುವ ವಿಪರ್ಯಾಸವನ್ನು ಎತ್ತಿ ಹಿಡಿದಿದ್ದಾರೆ. ಅಲ್ಲದೆ ಮಹಿಳಾ ಸಮಖ್ಯಾ ಗ್ರಾಮೀಣ ಮಹಿಳೆಯರ ಬದುಕುಗಳಿಂದ ಕ್ರಮೇಣವಾಗಿ ದೂರ ಸರಿಯುತ್ತ ನಿಧಾನಕ್ಕೆ ಅರ್ಥಹೀನಗೊಳ್ಳುತ್ತಾ ನಡೆಯುತ್ತಿರುವುದೂ ಅವರ ಅತೀವ ಆತಂಕಕ್ಕೆ ಕಾರಣವಾಗಿದೆ. ಈ ಲೇಖನದಲ್ಲಿ ಮಹಿಳಾ ಸಮಖ್ಯಾದ ಕಾರ್ಯಕರ್ತೆಯರು ತಮ್ಮ ಕೆಲಸದ ಹಕ್ಕಿಗಾಗಿ ಹೋರಾಡಲು ಕಟ್ಟಿಕೊಂಡ ಯೂನಿಯನ್ನಿನ ಅನುಭವಗಳನ್ನು ಅವರದ್ದೇ ಮಾತಿನಲ್ಲಿ ಬಿಡಿಸಿಟ್ಟಿದ್ದಾರೆ. ತಮ್ಮ ಅಪಾರ ಶ್ರಮದಿಂದ ಗ್ರಾಮೀಣ ಬಡ ಮಹಿಳೆಯರ ಬದುಕಿಗೊಂದು ಒತ್ತಾಸೆಯಾಗಿ ರೂಪುಗೊಂಡ ಈ ಕಾರ್ಯಕ್ರಮವನ್ನು ಮತ್ತಷ್ಟು ಅರ್ಥಪೂರ್ಣಗೊಳಿಸುವ ಅವರ ಕಾಳಜಿಯನ್ನು ನಾವಿಲ್ಲಿ ಕಾಣಬಹುದು. 'ಮಾನಸ' ಅವರ ಹೋರಾಟಕ್ಕೆ ಬೆಂಬಲ ಸೂಚಿಸುತ್ತದೆ.

ಕಿಂಚಿತ್ತೂ ಇಲ್ಲವಾಗಿ, ತಮ್ಮ ಹೀನಾಯ ಸ್ಥಿತಿ ಬದಲಾವಣೆ ಸಾಧ್ಯವಿಲ್ಲದಂತದ್ದೆಂದೂ, ಅದು ತಮ್ಮ ಕರ್ಮವೆಂದೂ ಭಾವಿಸುತ್ತಾರೆ. ಇವೆಲ್ಲ ಅಂಶಗಳು ಅವರು ತಮ್ಮನ್ನು ಕ್ಷುದ್ರರೆಂದು ಭಾವಿಸಿ ಕೊಳ್ಳಲು ಒತ್ತಾಸೆಯಾಗುತ್ತದೆಯಾಗಿ ಅವರು ಯಾವತ್ತಿಗೂ ಅವರನ್ನು ಬದಲಾಗಲು ಬಿಡದ ವಿಷ ವರ್ತುಲದಲ್ಲೇ ಸಿಕ್ಕುಬಿಡುತ್ತಾರೆ" ಎಂದು ಗುರುತಿಸುತ್ತದೆ 1986ರ ರಾಷ್ಟ್ರೀಯ ಶಿಕ್ಷಣ ಯೋಜನೆ. ಮಹಿಳೆಯರ ಇಂತಹ ಯಾವತ್ತೂ ಸ್ಥಿತಿಯನ್ನು ಕೈಗೆತ್ತಿಕೊಂಡು, ಮಹಿಳೆಯರು ತಮ್ಮ ಸಮಸ್ಯೆಗಳನ್ನು, ತಮ್ಮದೇ ಆದ್ಯತೆ-ಆಶಯಗಳನ್ನು ಕುರಿತು ಮಾತನಾಡ ತೊಡಗುವುದರ ಮೂಲಕ ಬಲಪಡೆದು ತಮ್ಮನ್ನೂ-ತಮ್ಮ ಕುಟುಂಬಗಳನ್ನು ಬಾಧಿಸುತ್ತಿರುವ ಸ್ಥಿತಿಗೆ ತಾವೇ ಪರಿಹಾರ ಕಂಡುಕೊಳ್ಳುವಲ್ಲಿ ಅವರನ್ನು ಸಶಕ್ತಗೊಳಿಸುವುದಕ್ಕಾಗಿಯೇ 'ಮಹಿಳಾ ಸಮಖ್ಯಾ'ಗೆ ಹುಟ್ಟುಕೊಡಲಾಯಿತು. ಆದ್ದರಿಂದಲೇ ಮಹಿಳಾ ಸಮಖ್ಯಾ, ಮಹಿಳೆಯರಲ್ಲಿ ಜಾಗೃತಿಯನ್ನು ಬಡಿದೆಬ್ಬಿಸಿ ಶೈಕ್ಷಣಿಕ ಮತ್ತು ಅಭಿವೃದ್ಧಿಯ ಮೂಲಗಳಿಗೆ ಕೈಚಾಚಿ ತಮ್ಮದಾಗಿಸಿಕೊಳ್ಳಲು ಅವರಿಗೆ ಸಹಾಯ ಮಾಡುವುದು, ಸಶಕ್ತತೆಯ ಸಾಧನವಾಗಿ ಸಾಕ್ಷರತೆಗೆ ಬೇಡಿಕೆಯನ್ನು ಸೃಷ್ಟಿಸುವುದು ಇತ್ಯಾದಿಗಳ ಮೂಲಕ ತಮ್ಮ ಮತ್ತು ಸಮುದಾಯದ ಕಣ್ಣಲ್ಲಿ ಒಂದು ಶಕ್ತಿಶಾಲೀ, ಆತ್ಮಸ್ಥೈರ್ಯದಿಂದ ತುಂಬಿದ ಮಹಿಳೆಯರ ವ್ಯಕ್ತಿತ್ವವನ್ನು ಬೆಳೆಸುವುದರಲ್ಲಿ ಗಮನ ಕೇಂದ್ರೀಕರಿಸುತ್ತದೆ. ಇಂತಹ ಸಶಕ್ತತಾ ಚಟುವಟಿಕೆಯ ಲಾಭ ಪಡೆಯಲಿಕ್ಕೆ ಸಮಖ್ಯಾ ಗುರುತಿಸಿದ್ದು ಗ್ರಾಮ್ಯದ ಅತ್ಯಂತ ಬಡವರ್ಗದ ಮಹಿಳೆಯರನ್ನು, ಸಾಮಾನ್ಯವಾಗಿ ಯಾವದೇ ಅಭಿವೃದ್ಧಿ ಕಾರ್ಯಕ್ರಮಗಳನ್ನು ದಕ್ಕಿಸಿಕೊಳ್ಳಲಾರದೇ ಹೋಗುವಂತವರನ್ನು. ಇಂತಹ ಅತ್ಯಂತ ಅಮಾಯಕ ಹೆಂಗಸರು ಒಂದೆಡೆ ಕಲೆತು, ಕಲೆಕ್ಟೀವ್‌ಗಳನ್ನು ಮಾಡಿಕೊಂಡು ತಮ್ಮ ಗುರಿಗಳನ್ನ ತಾವೇ ರೂಪಿಸಿಕೊಳ್ಳಲು ಅನುವು ಮಾಡಿಕೊಡುವಂತ "ಸಮಯ ಮತ್ತು ಅವಕಾಶ"ವನ್ನು ಅವರಿಗೆ ಕಲ್ಪಿಸಿಕೊಡಬೇಕು. ಇದೊಂದು ಅದ್ಭುತ ಕಲ್ಪನೆ ಯಲ್ಲವೇ? ಇಷ್ಟು ಸೊಗಸಾದ ಕಲ್ಪನೆ ನಮ್ಮ ಮನೆಗಳ ಬಾಗಿಲನ್ನೇ ಬಡಿದಿತ್ತು! ಕನಸು ನಮ್ಮ ಮನಸುಗಳನ್ನೇ ಹೊಕ್ಕಿತ್ತು! ಅಂದರೆ, 'ಮಹಿಳಾ ಸಮಖ್ಯಾ' ಕಾರ್ಯಕ್ರಮ ಕರ್ನಾಟಕಕ್ಕೇ ಬಂದಿತ್ತು.

ಆಧಾರಕೊಟ್ಟ ಬೆನ್ನಲಬುಗಳೂ, ಕಿರೀಟ ಹೊತ್ತ ತಲೆಗಳು :

ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಮಂತ್ರಾಲಯ 1989ರಲ್ಲಿ ಮೊದಲಿಗೆ ದೇಶದ ಮೂರು ರಾಜ್ಯಗಳಲ್ಲಿ "ಸಮಾನತೆಗಾಗಿ ಶಿಕ್ಷಣ" ಘೋಷಣೆಯೊಂದಿಗೆ 'ಮಹಿಳಾ ಸಮಖ್ಯಾ' ಕಾರ್ಯಕ್ರಮವನ್ನು ಪ್ರಾರಂಭಿಸಿದಾಗ ಕರ್ನಾಟಕವೂ ಅವರಲ್ಲಿ ಒಂದಾಗಿತ್ತು. ಈಗದು 5 ರಾಜ್ಯಗಳಲ್ಲಿ ಕೆಲಸ ಮಾಡುತ್ತದೆ. ಕರ್ನಾಟಕದಲ್ಲಿ ಪ್ರಾರಂಭಕ್ಕೆ ಬೀದರ್, ಬಿಜಾಪೂರ ಮತ್ತು ಮೈಸೂರು ಈ ಮೂರು ಜಿಲ್ಲೆಗಳಲ್ಲಿ ಪ್ರಾರಂಭಿಸಿ 1992ರಲ್ಲಿ ರಾಯಚೂರು-ಗುಲ್ಬರ್ಗಗಳಿಗೆ ವಿಸ್ತರಿಸಲಾಯಿತು. ಈ ವರ್ಷ ಇನ್ನೂ ಎರಡು ಅಥವಾ ಮೂರು ಜಿಲ್ಲೆಗಳಿಗೆ ವಿಸ್ತರಗೊಳ್ಳಲಿದೆ. ಹಳ್ಳಿಯ ಮಟ್ಟದಲ್ಲಿ ಮಹಿಳೆಯರ ಕಲೆಕ್ಟೀವ್‌ಗಳ ರಚನೆ, ಮಹಿಳಾ ಸಶಕ್ತತಾ ಪ್ರಕ್ರಿಯೆಗೆ ಸಮಖ್ಯಾ ಆಯ್ದುಕೊಂಡ ತಂತ್ರೋಪಾಯವಾಗಿತ್ತೆಂದು ಹಿಂದೆಯೇ ಹೇಳಿದೆವಷ್ಟೆ. ಈ ಇಡೀ ಪ್ರಕ್ರಿಯೆಯನ್ನು ಚಾಲೂಗೊಳಿಸಲು ಮಾರ್ಗದರ್ಶಕರು, ಪ್ರೇರಕರು, ಒಟ್ಟಾರೆಯಾಗಿ ಕಾರ್ಯಕ್ರಮದ ಕತೃತ್ವ ಶಕ್ತಿಗಳೆಂದು ಹೇಳಲ್ಪಟ್ಟು ಹತ್ತು ಹಳ್ಳಿಗೊಬ್ಬರಂತೆ 'ಸಹಯೋಗಿನಿ'ಯರನ್ನು ನೇಮಿಸಲಾಯಿತು. ಇಡೀ ಕಾರ್ಯಕ್ರಮಕ್ಕೆ 'ಬೆನ್ನೆಲುಬು' ಎಂದು ಹೇಳಿ ಬಿಡಲ್ಪಟ್ಟ ಸಹಯೋಗಿನಿ ಹಳ್ಳಿಯ ಅಮಾಯಕ ಹೆಂಗಸರನ್ನು ಸಶಕ್ತ ಗೊಳಿಸಲು ಸಲ್ಲಿಸುವ ಸೇವೆ ಅಪಾರ ಗೌರವಕ್ಕೆ ಪಾತ್ರವಾದುದಾದ್ದರಿಂದ ಅದಕ್ಕೆ ಮನ್ನಣೆಯ ರೂಪದಲ್ಲಿ 'ಗೌರವಧನ' ನೀಡುವದಾಗಿಯೂ ಮತ್ತು ಸಹಯೋಗಿನಿಯ ಸೇವೆ ಸಂಪೂರ್ಣ 'ಸ್ವಯಂಸೇವೆ'ಯ ರೂಪದಲ್ಲಿರುವದೆಂದೂ ತೀರ್ಮಾನಿತವಾಯಿತು, ಅಂದರೆ ಹತ್ತು ಹಳ್ಳಿಗಳಲ್ಲಿ ಕೆಲಸ ಮಾಡುವ ಸಹಯೋಗಿನಿಯರಿಗೆ ಪ್ರಾರಂಭಕ್ಕೆ ತಿಂಗಳಿಗೆ 500 ರೂಪಾಯಿಗಳ ಗೌರವಧನ! ಇನ್ನು ಸಹಯೋಗಿನಿಯರಿಗೆ ಎಲ್ಲ ಕೆಲಸಗಳಲ್ಲೂ ಒತ್ತಾಸೆಯಾಗಿ ತಮ್ಮ ಹಳ್ಳಿ ಮಟ್ಟದಲ್ಲಿ ಕೆಲಸ ಮಾಡುವ 'ಸಹಾಯಕಿ'ಯರು ಹಳ್ಳಿಯ ಮಟ್ಟದಲ್ಲೇ ರೂಪುಗೊಳ್ಳುವ 'ನಾಯಕಿ'ಯಾಗುವುದರಿಂದ ಅವರಿಗೆ ಯಾವುದೇ ರೀತಿಯ ಗೌರವ ಧನ ನೀಡಲಾಗುವುದಿಲ್ಲವೆಂದು ಕಾರ್ಯಕ್ರಮ ಯೋಜನೆ ಹೇಳಿತು. ಹಳ್ಳಿಗಳಲ್ಲಿ ಮಹಿಳೆಯರು ಸಂಘಟನೆಗೊಂಡು ಸಂಘಗಳು ಬಲಗೊಂಡ ಹಾಗೆ ಮಹಿಳೆಯರು ಆರ್ಥಿಕ ಚಟುವಟಿಕೆಗಳನ್ನೂ ಒಳಗೊಂಡಂತೆ ವಿಭಿನ್ನ ರೀತಿಯ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವಾಗ ಅವರಿಗೆ ಬೆಂಬಲ ರಚನೆಯಾಗಿ ಹಳ್ಳಿಯೊಂದಕ್ಕೆ ಕ್ರೆಶ್‌ವೊಂದನ್ನು ಸ್ಥಾಪಿಸುವದೆಂದೂ ಮತ್ತು ಅಲ್ಲಿನ ಮಹಿಳೆಯರಲ್ಲೇ ಒಬ್ಬರು ಅಥವಾ ಇಬ್ಬರು ಬೆಳಿಗ್ಗೆಯಿಂದ ಸಂಜೆಯತನಕ ಅಲ್ಲಿ ಕೆಲಸ ಮಾಡುವುದೆಂದೂ ಅವರಿಗೆ ತಿಂಗಳೊಂದಕ್ಕೆ ಇನ್ನೂರೈವತ್ತು ರೂಪಾಯಿಗಳನ್ನು ಕೊಡುವುದಾಗಿ ತೀರ್ಮಾನವಾಗಿತ್ತು. ಹಾಗೆಯೇ ಕಾಲಕ್ರಮೇಣ ರೂಪಗೊಳ್ಳುವ ಅನೌಪಚಾರಿಕ ಶಿಕ್ಷಣ ಕೇಂದ್ರ ಮತ್ತು ವಯಸ್ಕರ ಶಿಕ್ಷಣ ಕೇಂದ್ರಗಳಲ್ಲಿ ಶಿಕ್ಷಕರಾಗಿ ಕೆಲಸ ಮಾಡುವವರಿಗೆ 200 ರೂಗಳ ಗೌರವ ಧನವೆಂದೂ ನಿಗದಿಪಡಿಸಲಾಗಿತ್ತು. ಇದೆಲ್ಲ ಕ್ಷೇತ್ರಮಟ್ಟದಲ್ಲಾದರೆ ಇನ್ನು ಜಿಲ್ಲೆಗೊಂದಂತೆ ಸ್ಥಾಪಿತಗೊಂಡ ಅನುಷ್ಠಾನ ಘಟಕದಲ್ಲಿ ಒಬ್ಬ ಜಿಲ್ಲಾ ಸಂಯೋಜಕಿ, ಇಬ್ಬರು ಸಂಪನ್ಮೂಲ ವ್ಯಕ್ತಿಗಳು, ಒಬ್ಬೊಬ್ಬ ಅಕೌಂಟೆಂಟ್, ಬೆರಳಚ್ಚುಗಾರರು, ಶೀಘ್ರಲಿಪಿಗಾರರು, ಗುಮಾಸ್ತೆ, ಕಛೇರಿ ಸಹಾಯಕರು, ವಾಹನ ಚಾಲಕರು ಮತ್ತು ಇಬ್ಬರು ಮಸೇಂಜರುಗಳು. ಇವರಿಗೆಲ್ಲ ರಾಜ್ಯ ಸರ್ಕಾರದ ವಿವಿಧ ದರ್ಜೆಗನುಸಾರವಾದ ವೇತನ ಶ್ರೇಣಿ ಅನ್ವಯಿಸುವಂತೆಯೂ, ಮತ್ತವರು ಎಲ್ಲ ಬಗೆಯ ಸರ್ಕಾರಿ ಸೌಲಭ್ಯ ಕಟ್ಟಳೆಗಳಿಗೂ ಪಕ್ಕಾಗಿರುವಂತೆಯೂ ತೀರ್ಮಾನಿಸ ಲಾಗಿತ್ತು. ಇಡೀ ಕಾರ್ಯಕ್ರಮದ ಚುಕ್ಕಾಣಿ ಹಿಡಿದವರು ರಾಜ್ಯ ನಿರ್ದೇಶಕರು.

ಮಹಿಳಾ ಸಮಖ್ಯಾ ಸಂಪೂರ್ಣ 'ತಳದಿಂದ ತುದಿಯ' ಧೋರಣೆಯ ಕಾರ್ಯಕ್ರಮವಾಗಿತ್ತು ತತ್ವಶಃದಲ್ಲಿ. ಹಾಗೆಯೇ ಎಲ್ಲ ಮಟ್ಟದಲ್ಲೂ ಸಮಾನತೆ ಮತ್ತು ಭಾಗವಹಿಕೆಗಳು ಈ ಕಾರ್ಯಕ್ರಮದ ಬುನಾದಿಯಾಗಿದ್ದವು. ಹೀಗಾಗಿ ಸಹಯೋಗಿನಿಯರು ಯಾವುದೇ ಕಾರ್ಯಕ್ರಮವನ್ನು ತಮ್ಮ ಹಳ್ಳಿಯ ಹೆಂಗಸರಿಗಾಗಿ ರೂಪಿಸುವಾಗ ಮೊದಲಿಗೆ, ಹಳ್ಳಿಯ ಹೆಂಗಸರೊಟ್ಟಿಗೆ ಅತ್ಯಂತ ನಿಕಟವಾಗಿ, ನಿಧಾನವಾಗಿ ಬೆರೆತು, ಅರಿತು, ಚರ್ಚಿಸಿ, ತೂಗಿನೋಡಿ, ಆ ನಂತರ ಜಿಲ್ಲಾ ಸಂಯೋಜಕಿಯೇ ಮುಂತಾದ ಸಿಬ್ಬಂದಿಗಳ ಸಹಾಯದಿಂದ ಅದನ್ನು ಅನುಷ್ಠಾನಗೊಳಿಸುವುದು ವಾಡಿಕೆಯಾಯಿತು. ಎಲ್ಲ ಹಂತದಲ್ಲೂ ಸಮಾನತೆಯಿದ್ದ ಕಾರ್ಯಕ್ರಮದಲ್ಲಿ "ಪಾತ್ರ ಮಿಶ್ರಣ"ವಿದ್ದು, ಕಛೇರಿ ಸಿಬ್ಬಂದಿಗಳೂ ಅವಕಾಶವಿದ್ದಾಗಲೆಲ್ಲ ಕ್ಷೇತ್ರಕಾರ್ಯದಲ್ಲಿ ಪಾಲ್ಗೊಳ್ಳುತ್ತಿದ್ದರು. ಯಾವುದೇ ಕಾರ್ಯಕ್ರಮಕ್ಕೆ ಖರ್ಚು-ವೆಚ್ಚವನ್ನು ಮೊದಲ್ಗೊಂಡಂತೆ ಪ್ರತಿ ವಿವರಗಳನ್ನೂ ಸಹಯೋಗಿನಿಯರೇ ಮೂಲತಃ ರೂಪಿಸುತ್ತಿದ್ದದ್ದರಿಂದಲೂ ಮತ್ತು ಇಡೀ ಕಾರ್ಯಕ್ರಮದಲ್ಲಿ ಪಾರದರ್ಶಕತೆಯಿರಬೇಕೆಂಬುದು ತತ್ವವಾದದ್ದರಿಂದಲೂ ಜಿಲ್ಲಾ ಘಟಕದ ಇಡೀ ವರ್ಷದ ಆಯ-ವ್ಯಯ ಸಹಯೋಗಿನಿಯರಿಗೆ ಅರಿವಿರುತ್ತಿತ್ತು. ಕ್ಷೇತ್ರದಲ್ಲಿ ಕಾಲಕಾಲಕ್ಕೆ ಏಳುವ ಸಮಸ್ಯೆಗಳನ್ನು ಮತ್ತು ಯಾವತ್ತೂ ಸಾಮಾಜಿಕ ಸಮಸ್ಯೆಗಳನ್ನು ಎತ್ತಿಕೊಂಡು ಕೆಲಸ ಮಾಡುವಾಗ ಸಹಯೋಗಿನಿಯರಿಗೆ ಸಂಪೂರ್ಣ ಬೆಂಬಲ ಜಿಲ್ಲಾ-ರಾಜ್ಯ ಘಟಕಗಳಿಂದ ದೊರೆಯುತ್ತಿತ್ತು. ಪರಿಸ್ಥಿತಿ ಹೀಗೆಲ್ಲ ಇದ್ದಾಗ, ಮಾಡುವ ಕೆಲಸದಲ್ಲಿ ಸಂಭ್ರಮ-ಸಡಗರ-ತೃಪ್ತಿಗಳಿದ್ದು ಗೌರವಧನವೆಂದು ಸಿಗುತ್ತಿದ್ದ 'ಪುಡಿಗಾಸು' ನಮ್ಮ ಬದುಕುಗಳಿಗೆ ಏನೊಂದೂ ಒತ್ತಾಸೆಯಾಗಿರದಿದ್ದಾಗ್ಯೂ, ನಾವದಕ್ಕೆ ಒಂದಿಷ್ಟೂ ಗಮನ ಕೊಡದೆ ಕೇವಲ ಕೆಲಸವೊಂದಕ್ಕೆ ಮಾತ್ರ ಮನಕೊಟ್ಟೆವು. ಸಹಾಯಕಿಯರು ತಮ್ಮ 'ಸಂಪೂರ್ಣ ಸ್ವಯಂಸೇವೆ'ಯಲ್ಲಿ ಇಡಿಯಾಗಿ ತೊಡಗಿಸಿಕೊಂಡು ಅಷ್ಟಿಷ್ಟು ಕೂಲಿ ಸಿಗುವ ಕೆಲಸವನ್ನೂ ಅನೇಕ ಸಾರಿ ಮರೆತಂತಿರುತ್ತಿದ್ದರು. ಹೀಗೆ ನಮ್ಮ ಕೆಲಸ ರಾತ್ರಿ-ಹಗಲುಗಳನ್ನು ಮೀರಿ, ಮಳೆ-ಚಳಿ-ಗಾಳಿಗನ್ನು ಮೆಟ್ಟಿ ನಿಂತು ಅಸಮಾನತೆಯನ್ನು ಹೊಟ್ಟಾಗಿ ತೂರಿದೋಪಾದಿಯಲ್ಲಿ ನಡೆಯುತ್ತಿತ್ತು! (ಅಂದರೆ ಸಹಯೋಗಿನಿಯರ ಕೆಲಸಕ್ಕೆ ನಿರ್ದಿಷ್ಟ ಸಮಯವಿಲ್ಲ. ಹಗಲು-ರಾತ್ರಿಗಳೂ ಸೇರಿದಂತೆ ಇಡೀ ದಿನ ಆವರಿಸುತ್ತದೆ. ದುಡಿವ ಹೆಂಗಸರು ಹಗಲು ಭೇಟಿಗೆ ಸಿಗಲಾರರಾಗಿ ರಾತ್ರಿಯ ಕೆಲಸ ಖಡ್ಡಾಯ. ಬೆಳಿಗ್ಗೆ 6ಕ್ಕೆ ಮನೆ ಬಿಟ್ಟರೆ ದೂರದ ಹಳ್ಳಿಗಳಿಗೆ ಸಿಕ್ಕಿದ ವಾಹನ-ಕಾಲ್ನಡಿಗೆಯಿಂದ ತಲುಪಿ, ಕೆಲಸ ಮುಗಿಯುವ ವೇಳೆಗೆ ರಾತ್ರಿ ಹನ್ನೆರಡು ಮೀರಿರುತ್ತೆ. ಮತ್ತದೇ ಹಳ್ಳಿಯಲ್ಲಿ ತಂಗಿ ಮರುದಿನ ಬೇರೆ ಹಳ್ಳಿಗೆ ಪ್ರವಾಸ). ಸಾಮಾನ್ಯ ಹಳ್ಳಿಯ ಹೆಂಗಸು ಕ್ರಮೇಣ ಸಹಾಯಕಿಯಾಗಿ, ಕಾಲಾಂತರದಲ್ಲಿ ಸಹಯೋಗಿನಿಯ ಪಾತ್ರಕ್ಕೆ ಸರಿದು, ಜಿಲ್ಲಾ ಸಂಯೋಜಕಿಯ ಹುದ್ದೆಯನ್ನೂ ದಾಟಿ ಅಂತಿಮವಾಗಿ ಇಡೀ ಕಾರ್ಯಕ್ರಮದ ಚುಕ್ಕಾಣಿ ಹಿಡಿದಂತ ರಾಜ್ಯ ನಿರ್ದೇಶಕಿಯಾಗಬೇಕು, ಆ ದಿಕ್ಕಿನಲ್ಲಿ ನಮ್ಮಗಳೆಲ್ಲರ ಕೆಲಸ ಸಾಗಬೇಕು ಎಂದು ಪ್ರತಿ ಮೀಟಿಂಗಿನಲ್ಲಿ ಚರ್ಚಿಸುವಾಗ ಇದು ನಮ್ಮೆಲ್ಲರ ಕನಸಾಗಿ ರೂಪುಗೊಳ್ಳತೊಡಗಿತು. ಇಂತಹ ಕನಸು ಸಂಪೂರ್ಣ ಆವರಿಸಿಕೊಂಡ ಸ್ಥಿತಿಯಲ್ಲಿದ್ದ ನಾವು ಬೇರೆ ಬೇರೆ ಜಿಲ್ಲೆಗಳಲ್ಲಿದ್ದ ವಸ್ತು ಸ್ಥಿತಿಯನ್ನು ಮುಟ್ಟಿನೋಡಲು ಸಾಧ್ಯವಾದದ್ದು, ನಮ್ಮದೇ ಜಿಲ್ಲೆಗಳು ಕಾಲಾಂತರದಲ್ಲಿ 'ಸಮಖ್ಯಾ'ದ ಮೂಲತತ್ವಗಳಿಂದ ದೂರ ಸರಿಯುತ್ತಾ ನಡೆದಿರುವುದನ್ನು ಕಂಡುಕೊಂಡದ್ದು ಕೆಲ ವರ್ಷಗಳ ನಂತರವೇ. ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ, 'ಸಮಾನತೆ'ಯೆಂಬ ಅತ್ಯಂತ ಅವಾಸ್ತವಿಕ ಮೂಲತತ್ವದ ಮುಸುಕಿನಡಿ ತಣ್ಣಗೆ ಕೆಲಸ ಮಾಡುತ್ತಿದ್ದ ಅಧಿಕಾರಶಾಹೀ ಪ್ರವೃತ್ತಿ ನಮಗೆ ಗೋಚರವಾಗತೊಡಗಿತ್ತು. ನಮ್ಮನ್ನಾಡಿಸುವ ಸೂತ್ರದ ಬಿಗಿ ಹಿಡಿತ ಮೇಲೆಲ್ಲೋ ಸಿಕ್ಕಿಕೊಂಡಿತ್ತು. ಸಮಖ್ಯಾ ತತ್ವವಾದ 'ಸಮಾನತೆ', 'ಭಾಗವಹಿಕೆ', 'ತಳದಿಂದ ತುದಿ'ಯ ಧೋರಣೆಗಳನ್ನು ನಿರ್ವಹಿಸಲಾಗದ ಜಿಲ್ಲಾ ಸಂಯೋಜಕರುಗಳು, ಸಹಯೋಗಿನಿಯರ ನೇಮಕಾತಿ ಪತ್ರದಲ್ಲಿ ಒಂದು ಕಡೆ ಹೇಳಲಾಗಿರುವಂತೆ, "ಯಾವ ಸಮಯದಲ್ಲಾದರೂ ಕಾರಣ ಕೊಡದೆ ಕೆಲಸದಿಂದ ತೆಗೆದು ಹಾಕುವದನ್ನು" ಅಕ್ಷರಶಃ ಪಾಲಿಸತೊಡಗಿದ್ದರು. ನಿರ್ದಿಷ್ಟ ಶಾಸನ, ಕಾನೂನುಗಳಿಗೆ ಒಳಪಡದ ಸಹಯೋಗಿನಿ ಹುದ್ದೆಯಲ್ಲಿರುವ ಸಡಿಲತೆಯನ್ನು ಉಪಯೋಗಿಸಿಕೊಂಡು, ಸಹಯೋಗಿನಿಯರನ್ನು ಅಲ್ಪಕಾಲಿಕ-ದೀರ್ಘಕಾಲಿಕ ಅನಾಮತ್ತಿನಲ್ಲಿ ಇಡತೊಡಗಿದರು. ಮೀಟಿಂಗುಗಳಿಗೆ ಕೊಂಚ ತಡವಾಗಿ ಬರುವದೂ ಸೇರಿದಂತೆ ತಮ್ಮಿಷ್ಟದಲ್ಲಿ ತಂದ ಕಟ್ಟಳೆಗಳನ್ನು ಮೀರಿದಾಗ ತಾವೇ ನಿಗದಿ ಮಾಡಿದ ರೀತಿಯಲ್ಲಿ ದಂಡ ಶುಲ್ಕಗಳನ್ನು ವಿಧಿಸತೊಡಗಿದರು. ವಯಕ್ತಿಕ ಬದುಕಿನಲ್ಲಿ ವಿಪರೀತ ಪ್ರವೇಶ ಮಾಡುತ್ತಾ ಮಾನಸಿಕ ಹಿಂಸೆಗೆ ಗುರಿಯಾಗಿಸತೊಡಗಿದರು. ಭಾಗವಹಿಕೆಯ ಧೋರಣೆ ಸಂಪೂರ್ಣ ಮಾಯವಾಗಿ ಮೇಲಿನವರು ರೂಪಿಸಿದ ರೀತಿಯಲ್ಲಿ ಮಾತ್ರ ಕಾರ್ಯಕ್ರಮ ನಡೆಯುವಂತಾಯಿತು. ಹೀಗೆ ವಾಸ್ತವ ಕಣ್ಣೆದುರು ಅನಾವರಣಗೊಳ್ಳತೊಡಗಿದಾಗ ನಮಗೆ ಗೋಚರವಾದ ಸತ್ಯಗಳೆಂದರೆ -

- ಸಹಯೋಗಿನಿಯರು, ಸಹಾಯಕಿ, ಕ್ರಶ್ ಕೆಲಸಗಾರ್ತಿಯರು ಮತ್ತಿತರ ಕ್ಷೇತ್ರ ಕೆಲಸಗಾರರು, ಯಾವುದೇ ಕೆಲಸದ ಹಕ್ಕಿಲ್ಲದ, ಶ್ರಮದ ಘನತೆಯಿಲ್ಲದ, ಮೇಲಧಿಕಾರಿಣಿಯರ ಅಧಿಕಾರ ಚಪಲತೆಗೆ ಸುಲಭವಾಗಿ ಬಲಿಪಶುಗಳಾಗಬಲ್ಲ "ಸ್ವಯಂ ಸೇವಕರು".
- ತಾತ್ವಿಕವಾಗಿ 'ತಳದಿಂದ ತುದಿಯ' ಧೋರಣೆಯ ಕಾರ್ಯಕ್ರಮ ವಾಸ್ತವದಲ್ಲಿ 'ತುದಿಯಿಂದ ತಳ' ಮುಖವಾಗಿದ್ದು, ಇಡೀ ಕಾರ್ಯಕ್ರಮದ ಚುಕ್ಕಾಣಿ 'ಕಾರ್ಯಕ್ರಮ ಶಿಲ್ಪಿ'ಗಳೆಂದು ಕರೆಯಲ್ಪಟ್ಟ ಸಹಯೋಗಿನಿಯರಲಿಲ್ಲ, ಮೇಲಧಿಕಾರಿಣಿಯಲ್ಲಿ ಸಿಕ್ಕಿಕೊಂಡಿದೆ. ಅಲ್ಲದೆ ಅವರ ಹುದ್ದೆಗಳಿಗೆ ಕೆಲಸದ ವಿವರ, ಭದ್ರತೆ, ಉತ್ತಮ ಸಂಬಳ ಎಲ್ಲ ಇದ್ದು ತಳಮಟ್ಟದ ನಮಗೆ ಮಾತ್ರ

ಇದ್ಯಾವುದೂ ಇಲ್ಲದ ಸ್ವಯಂಸೇವೆ. ನಮಗೆ ಕೆಲಸದ ಭದ್ರತೆ, ದುಡಿಮೆಯ ಹಕ್ಕು ಏನೊಂದೂ ಇಲ್ಲ.

- ಮಹಿಳಾ ಸಶಕ್ತತಾ ಕಾರ್ಯಕ್ರಮದ ರೂವಾರಿಗಳೆಂದು ಹೇಳಿಬಿಡಲ್ಪಟ್ಟ ನಮ್ಮ ಸ್ಥಿತಿ ಮಾತ್ರ ಯಾವತ್ತೂ ಕಾಸಿನ ಕಿಮ್ಮತ್ತು ಇಲ್ಲದ ಹೆಂಗಸರ ಮನೆಗೆಲಸದ ಮುಂದುವರಿದ ಸ್ಥಿತಿಯಾಗಿಯೇ ಇದೆ. ಮಹಿಳೆಯರ ಸಶಕ್ತತೆ ಎನ್ನುವುದು ನಮಗೆ ಮಾತ್ರ ಅನ್ವಯವಾಗುತ್ತಿಲ್ಲ ಯಾಕೆ?
- ಮೇಲಿನವರಂತಲ್ಲದೆ, ದಿನನಿತ್ಯ ರಾತ್ರಿಯ ವೇಳೆಯಲ್ಲಿ ಖಡ್ಡಾಯವಾಗಿ ದುಡಿಯಬೇಕಾದ ನಾವು ಕೇವಲ ಹೆಂಗಸೆನ್ನುವ ಕಾರಣಕ್ಕಾಗಿಯೇ ಈ ಪಿತೃಪ್ರಧಾನ ಸಮಾಜದಲ್ಲಿ ಅನುಭವಿಸಬೇಕಾದ ಅಪಾಯಗಳು, ಅವಮಾನಗಳು ಅಪಾರ. ಪ್ರಾರಂಭಕ್ಕೆ ಅತಿ ಒತ್ತಾಸೆಯಲ್ಲಿ ನಮ್ಮನ್ನು ಹುರಿದುಂಬಿಸಿಬಿಟ್ಟ 'ಸಮಖ್ಯಾ' ಇದಕ್ಕೆ ಯಾವ ಉತ್ತರವನ್ನೂ ಕೊಡಲಾರದು.
- ಹಳ್ಳಿಗಳಲ್ಲಿ ಸಾಮಾಜಿಕ ಸಮಸ್ಯೆಗಳನ್ನು ಎತ್ತಿಕೊಂಡು ಕೆಲಸ ಮಾಡುವಾಗ ಸಮುದಾಯದ ಬಲಿಷ್ಠ ಶಕ್ತಿಗಳ ಅವಕೃಪೆಗೆ ಒಳಗಾಗಿ ತೀವ್ರ ಅಪಾಯಗಳಿಗೆ ಎದುರಾಗುತ್ತೇವೆ. ನಮ್ಮ ಅಖಂಡತೆ, ಅಷ್ಟೇ ಯಾಕೆ ಬದುಕುಗಳಿಗೂ ಅಪಾಯ ಇದೆ, ನಮ್ಮ ಸಹೋದರಿ ಸಹಯೋಗಿನಿಯೊಬ್ಬರು ಹೀಗೆ ಅತ್ಯಾಚಾರಕ್ಕೂ ಒಳಗಾದದ್ದುಂಟು. ಅತ್ಯಂತ ಪ್ರಾರಂಭದಲ್ಲಿ ನೇರವಾಗಿ ಇಂತಹವುಗಳಿಗೆ ಒತ್ತಾಸೆಯಾಗ ಬಲ್ಲುದೆಂದು ಕಂಡುಬಂದ 'ಸಮಖ್ಯಾ' ಕಾಲಾಂತರದಲ್ಲಿ ಸ್ಪಷ್ಟವಾದ ಅವಜ್ಞೆ ತೋರಿದೆ.
- ಕುಟುಂಬ, ಮಕ್ಕಳು-ಮರಿ ಎಂದೂ ಗಮನಿಸದೆ ಏಕಕಾಲದಲ್ಲಿ ಹತ್ತಾರು ಹಳ್ಳಿಗಳನ್ನು ನೋಡಿಕೊಳ್ಳುವ ಸಹಯೋಗಿನಿಯರಿಗೆ, ಇವರಿಗೆ ಒತ್ತಾಸೆಯಾಗಿ ನಿಲ್ಲುವ ಸಹಾಯಕಿಯರಿಗೆ ಯಾವುದೇ ಬೆಂಬಲ ಸೇವೆ ಇಲ್ಲ. ವಾರದಲ್ಲಿ ಸಂಪೂರ್ಣ ಆರೂ ದಿನಗಳು ಪುಟ್ಟ ಮಕ್ಕಳನ್ನು ಬಿಟ್ಟು ದೂರದ ಹಳ್ಳಿಗಳಿಗೆ ಹೋಗಿರಬೇಕಾದ ಸ್ಥಿತಿಗೆ ಬೇರೇನೂ ಪರಿಹಾರ ಹುಡುಕಲು ಶಕ್ತರಾಗದ ಅನೇಕ ಅದ್ಭುತ ಕಾರ್ಯಕರ್ತೆಯರು ಕೆಲಸವನ್ನೇ ಬಿಟ್ಟು ಹೋಗುವ ಸ್ಥಿತಿ ನಿರ್ಮಾಣವಾಗಿದೆ.

ಪ್ರತಿಭಟಿಸಿದಾಗ :

ಹೀಗೆಯೇ ನಮ್ಮ ಅತ್ಯಂತ ಅತಂತ್ರ ಮತ್ತು ಅಸಹಾಯಕ ಸ್ಥಿತಿಯನ್ನು ಕಂಡುಕೊಳ್ಳುತ್ತಾ ಹೋದ ನಾವು ಇವೆಲ್ಲವನ್ನೂ ಪ್ರತಿಭಟಿಸಿ, 1994ರ ಮಧ್ಯದಲ್ಲಿ ರಾಜ್ಯ ಕಛೇರಿಯ ಮುಂದೆ 10 ದಿನಗಳ ಧರಣಿ ನಡೆಸಿದೆವು. ಅಧಿಕಾರ ದರ್ಪದಲ್ಲಿ ಪಾಳೇಗಾರಳಂತೆ ವರ್ತಿಸುತ್ತಿದ್ದ ಅಂದಿನ ಕಾರ್ಯಕ್ರಮ ನಿರ್ದೇಶಕಿಯನ್ನು ತೆಗೆಯಬೇಕೆಂಬುದೂ ನಮ್ಮ ಬೇಡಿಕೆಗಳಲ್ಲಿ ಒಂದಾಗಿತ್ತು. ಅನೇಕ ಜಿಲ್ಲೆಗಳ ಕ್ಷೇತ್ರಕಾರ್ಯಕರ್ತೆಯರು, ಕಛೇರಿ ಸಿಬ್ಬಂದಿಗಳು ಎಲ್ಲ ಇಲ್ಲಿ ಸೇರಿದ್ದೆವು. ವಿಪರ್ಯಾಸ ವೆಂದರೆ, ನಮ್ಮೊಂದಿಗೆ ಕೆಲ ಜಿಲ್ಲಾ ಸಂಯೋಜಕಿಯರು, ಸಂಪನ್ಮೂಲ ವ್ಯಕ್ತಿಗಳು ಸೇರಿಕೊಂಡಿದ್ದರಿಂದ, ಅವರಲ್ಲಿ ಕೆಲವರು Executive Committeeಯ ಸದಸ್ಯರಾದ್ದರಿಂದ, ಇವರ ಆಸಕ್ತಿಗಳು ರಾಜ್ಯ ವ್ಯವಸ್ಥೆಯ ಆಸಕ್ತಿಯೊಂದಿಗೆ ಸೇರಿ ಹೋಗಿ ನಮ್ಮ ಧರಣಿ ಸಂಪೂರ್ಣ ಮುರಿದು ಬಿತ್ತು. ನಮ್ಮ ಹೋರಾಟ ಇಂತಹ ಶಕ್ತಿಗಳಿಂದ ಮುಕ್ತವಾಗಿ ಬಲವಾಗಿ ರೂಪುಗೊಳ್ಳಬೇಕಾದರೆ ನಮ್ಮದೇ ವೇದಿಕೆಯೊಂದರ ನಿರ್ಮಾಣ ಅತ್ಯಗತ್ಯವೆಂದು ಕಂಡುಕೊಂಡ ನಾವು ಬಲು ಬೇಗದರಲ್ಲೇ ನಮ್ಮದೇ ಆದ ಯೂನಿಯನ್ನನ್ನು ನಿರ್ಮಿಸಿಕೊಂಡೆವು. ಮೊದಲಿಗೆ ಸಹಯೋಗಿನಿಯರು ಮಾತ್ರ ಸದಸ್ಯೆಯರಾಗಿದ್ದು, ನಂತರದಲ್ಲಿ ಕಛೇರಿಯ ಸಿಬ್ಬಂದಿಗಳೆಲ್ಲ ಸದಸ್ಯರಾದರು.

ಯೂನಿಯನ್ನಿನ ಪ್ರಾರಂಭಿಕ ಪ್ರಯತ್ನಗಳು ಮೈಸೂರು ಜಿಲ್ಲೆಯಿಂದಲೇ ನಡೆದದ್ದರಿಂದ ಬಹುತೇಕ ಪದಾಧಿಕಾರಿಗಳು ಮೈಸೂರಿನವರೇ ಆಗಿದ್ದೆವು. ಮೊದಲಿಗೆ ಯೂನಿಯನ್ನಿನ ಕೆಲ ಪದಾಧಿಕಾರಿಗಳು ಎಲ್ಲ ಜಿಲ್ಲೆಗಳಲ್ಲಿ ಓಡಾಡಿ ಪ್ರತಿ ಜಿಲ್ಲೆಯಲ್ಲೂ ಜಿಲ್ಲಾ ಘಟಕವನ್ನು ನಿರ್ಮಿಸಲು ಪ್ರಯತ್ನಿಸಿದೆವು. ರಾಯಚೂರು ಮತ್ತು ಬಿಜಾಪೂರ ಜಿಲ್ಲೆಗಳಲ್ಲಿ ಯೂನಿಯನ್ನಿನ ಜಿಲ್ಲಾ ಮಟ್ಟದ ಘಟಕಗಳು ಯಶಸ್ವಿಯಾಗಿ ನಿರ್ಮಾಣಗೊಂಡುವಾದರೂ ರಾಯಚೂರು ಜಿಲ್ಲೆಯಲ್ಲಿ ಬಿರುಸಿನಿಂದ ಚಟುವಟಿಕೆಗಳು ನಡೆಯಲು ಪ್ರಾರಂಭವಾದವು. ಬೀದರ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ಮೇಲಧಿಕಾರಿಣಿಯರ ಬಿಗಿಹಿಡಿತ ಮತ್ತು ತೀವ್ರ ಬೆದರಿಕೆಗಳಿಂದಾಗಿ ಜಿಲ್ಲಾ ಘಟಕ ರಚನೆ ಮೊದಲಿಗೆ ಯಶಸ್ವಿಯಾಗಲಿಲ್ಲ. ಅದೇನೇಯಾದರೂ, ಎರಡು-ಮೂರು ವರ್ಷಗಳಿಂದ ಬೇರೆ ಜಿಲ್ಲೆಗಳ ಜತೆ ಸಂಪರ್ಕವನ್ನೇ ಕಳೆದುಕೊಂಡು ಮೌನವಾಗಿ ನೋವುಣ್ಣುತ್ತಿದ್ದ ಸಹಯೋಗಿನಿಯರನ್ನು, ಮತ್ತಿತರರನ್ನು ಪದಾಧಿಕಾರಿಗಳು ಭೆಟ್ಟಿಯಾಗಿ ನಡೆಯುತ್ತಿರುವ ಅನ್ಯಾಯಗಳನ್ನು ಹೀಗೆ ದಾಖಲಿಸತೊಡಗಿದೆವು:

- ಮೇಲಧಿಕಾರಿಗಳ ಕಿರುಕುಳಗಳ ವಿವರ.
- ದೀರ್ಘಕಾಲಿಕ, ಅಲ್ಪಕಾಲಿಕ ಅನಾಮತಿಗೆ ಒಳಗಾದವರ ಸಂಖ್ಯೆ, ಕಾಲಾವಧಿ, ಕಾರಣ ಮತ್ತಿತರ ವಿವರಗಳು.
- ಕೆಲಸದಿಂದ ತೆಗೆಯಲ್ಪಟ್ಟವರ ವಿವರ.
- ಸಹಯೋಗಿನಿಯರ ಮೇಲೆ ವಿಧಿಸುತ್ತಿದ್ದ ದಂಡಶುಲ್ಕದ ವಿವರ.
- ಸಹಯೋಗಿನಿಯರಿಗೆ ಸಿಗುವ ರಜೆಯ ಸೌಲಭ್ಯ ಮತ್ತು ರಜೆ ತೆಗೆದುಕೊಂಡು ಗೌರವಧನ ಕಳಕೊಂಡ ಸಹಯೋಗಿನಿಯರ ವಿವರ.
- ಕೆಲಸದಿಂದ ತೆಗೆಯಲ್ಪಟ್ಟ ಕಛೇರಿ ಸಿಬ್ಬಂದಿಗಳ ವಿವರ.
- ಆಂತರಿಕ ಮೌಲ್ಯಮಾಪನಗಳು ಸಹಯೋಗಿನಿಯರ ವಿರುದ್ಧ ತಿರುಗಿಕೊಳ್ಳುತ್ತಿರುವ ವಿವರ.

ಹೀಗೆ ಸಂಗ್ರಹಿಸುವ ಮೂಲಕ ಒಂದು ದೀರ್ಘವಾದ ಮನವಿ ಪತ್ರವನ್ನು (ಮೇಲಿನ ವಿವರಗಳನ್ನೊಳಗೊಂಡ) ರಾಷ್ಟ್ರ

ನಿರ್ದೇಶಕರಿಗೂ, ರಾಜ್ಯ ನಿರ್ದೇಶಕರಿಗೂ, ಕಾರ್ಯಕಾರೀ ಸಮಿತಿಯ ಸದಸ್ಯರಿಗೂ ಕೊಡಲಾಯಿತು. ಅದಕ್ಕೆ ಹಿಂದೆಯೇ 'ಮಹಿಳಾ ಸಮಖ್ಯಾ'ದಂತ ಕಾರ್ಯಕ್ರಮವನ್ನು ಇನ್ನಿತರ ಬಡದೇಶಗಳಲ್ಲಿ ಪ್ರಾರಂಭಿಸುವ ಉದ್ದೇಶದಿಂದ ಬೆಂಗಳೂರಿನಲ್ಲಿ ನಡೆಯುತ್ತಿದ್ದ ಅಂತರರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ನಮ್ಮ ಯೂನಿಯನ್ನಿನ ಪದಾಧಿಕಾರಿಗಳು ಪ್ರವೇಶಿಸಿ, ಮಹಿಳಾ ಸಮಖ್ಯಾದ ಮೂಲಭೂತ ತತ್ವಗಳು ಸಂಪೂರ್ಣ ನಾಶವಾಗಿ, ಪಾಳೆಗಾರಿಕೆಯ ಮೌಲ್ಯಗಳು ತಲೆ ಎತ್ತಿರುವುದನ್ನು ಮತ್ತು ಕ್ಷೇತ್ರ ಕಾರ್ಯಕರ್ತೆಯರು ಕನಿಷ್ಠ ಕೂಲಿಯೂ ಇಲ್ಲದೆ ಪಡುತ್ತಿರುವ ಬವಣೆಯನ್ನು ಕುರಿತು ವಿವರವಾಗಿ ತಿಳಿಸುವ ಮತ್ತು ಮಧ್ಯಪ್ರವೇಶಿಕೆ ಮಾಡುವ ಮನವಿ ಪತ್ರವನ್ನು ಭಾಗವಹಿಸಿದ್ದ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಪ್ರತಿನಿಧಿಗಳಿಗೆಲ್ಲ ಹಂಚಲಾಯಿತು. ಅದೇ ಸಮಯದಲ್ಲಿ, ಇದೇ ಗುಂಪು ದೆಹಲಿಗೆ ಹೋದಾಗ, ಅಲ್ಲಿನ ಸಹೇಲಿಯೆಂಬ ಸ್ವಾಯತ್ತ ಮಹಿಳಾ ಗುಂಪು ನಮ್ಮ ಯೂನಿಯನ್ನನ್ನು ಬೆಂಬಲಿಸಿ ನಮ್ಮ ಬೇಡಿಕೆಗಳ ಈಡೇರಿಕೆಯಲ್ಲಿ ಮಧ್ಯಪ್ರವೇಶ ಮಾಡುವ ಮನವಿಯನ್ನು ಅವರೆಲ್ಲರಿಗೂ ಹಂಚಿತು. ಈ ಘಟನೆಯಿಂದಾಗಿ ಕರ್ನಾಟಕದ ಮಹಿಳಾ ಸಮಖ್ಯಾದಲ್ಲಿ ಪ್ರಾರಂಭವಾದ ಹೋರಾಟ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟಗಳಿಗೆ ಪರಿಚಯವಾಗುವಂತಾಯಿತು.

ಸಿಡಿಮಿಡಿದ ಹಿರಿಯಕ್ಕ! ಛಲಬಿಡದ ಕಿರಿ ತಂಗಿಯರು!

ಇಷ್ಟಾಗುವ ವೇಳೆಗೆ, ತಮ್ಮ ಕೈಕೆಳಗಿನ ಕೆಲಸಗಾರರೆಲ್ಲ ಒಂದಾಗಿ ತಮ್ಮ ಹಕ್ಕುಗಳನ್ನು ಸ್ವತಂತ್ರವಾಗಿ ಪ್ರತಿಪಾದಿಸಲು ತೊಡಗಿದ್ದು ಜಿಲ್ಲ ಮತ್ತು ರಾಜ್ಯ ಮಟ್ಟಗಳಲ್ಲಿನ ಅಧಿಕಾರಿಣಿಯರಿಗೆ ಬೆಂಕಿ ತುಳಿದಂತಾಗಿತ್ತು. ಕಾರಣವಿಲ್ಲದೇ ಇದರಿಂದ ತಮಗೆ ತೀವ್ರ ಬೆದರಿಕೆಯೆಂದು ತಮ್ಮಷ್ಟಕ್ಕೇ ಹೇಗೋ ಅರ್ಥಮಾಡಿಕೊಂಡು ಸದಸ್ಯರನ್ನು ತೀವ್ರವಾಗಿ ಹಿಂಸಿಸ ತೊಡಗಿದರು (ಮುಖ್ಯವಾಗಿ ಮಾನಸಿಕವಾಗಿ). ಎಲ್ಲ ಜಿಲ್ಲೆಗಳಲ್ಲಿ ಕೆಲಸಗಾರರನ್ನು ಒಗ್ಗೂಡಿಸಲು ಓಡಾಡುತ್ತಿದ್ದ ನಮ್ಮ ಪದಾಧಿಕಾರಿಗಳನ್ನು ,ಕೂಡಿ ಹಾಕಿ ಕೈಕಾಲು ಮುರಿಯುವ ಬೆದರಿಕೆ ಹಾಕಿದರು, ಪ್ರತಿ ಸಭೆಗಳಲ್ಲೂ, ಅವಕಾಶವಿದ್ದಲ್ಲೆಲ್ಲಾ ನಮ್ಮನ್ನು ವಯಕ್ತಿಕವಾಗಿ ಕಂಡು ಸಂಘ ಸೇರದಂತೆ ಪುಸಲಾಯಿಸತೊಡಗಿದರು, ಬಗ್ಗದಿದ್ದಾಗ ಕೆಲಸದಿಂದ ತೆಗೆಯುವ ಬೆದರಿಕೆ ಹಾಕತೊಡಗಿದರು. ಪ್ರಾರಂಭದಿಂದಲೂ ಸಮಖ್ಯಾದಲ್ಲಿ "ಸಹೋದರಿಯತ್ವ"ದ ಕಲ್ಪನೆಗೆ ಪಕ್ಕಾಗಿದ್ದ ನಮಗೆ ಇದೆಲ್ಲವನ್ನೂ ನಿಭಾಯಿಸಿಕೊಂಡು ಕೆಲಸದ ಹಕ್ಕಿನ ಪ್ರತಿಪಾದನೆಗೆ ಒಂದಾಗಿ ಮುನ್ನಡೆಯುವುದು ಅತ್ಯಂತ ಕಷ್ಟದ ಸಂಗತಿಯಾಗಿದ್ದಿತು. ಹಿರಿಯಕ್ಕನೊಂದಿಗೆ ಜಗಳಕ್ಕಿಳಿದ ವಿಚಿತ್ರ ಅನುಭವ!

ಹೀಗಾಗಿ ಪ್ರಾರಂಭದ ಹಂತಗಳಲ್ಲಿ ನಮ್ಮ ಸಂಘ ಕಂಡ ಏಳು-ಬೀಳು (ಏಳಿಗಿಂತ ಬೀಳು) ಅಪಾರ! ಅದೇನೇಯಾದರೂ ಈ ವೇಳೆಗಾಗಲೇ ಯೂನಿಯನ್ನಿನ ಸತತ ಪ್ರಯತ್ನದಿಂದ ಕೆಲ 'ಸಾಧನೆ'ಗಳಾಗಿದ್ದವು.

- ತನ್ನ ಹುದ್ದೆಯಿಂದರೆ ತಾನು ತೋರಬಲ್ಲ ದರ್ಪ ಅಧಿಕಾರಗಳಷ್ಟೇ ಎಂಬ ಮೌಢ್ಯದಲ್ಲಿ ಪಾಳೇಗಾರಳಂತೆ ವರ್ತಿಸುತ್ತಿದ್ದ ಡೈರೆಕ್ಟರರ ಬದಲಾವಣೆ.
- ರಾಯಚೂರಿನಲ್ಲಿ ಸಹಯೋಗಿನಿಯರ ಮೇಲೆ ಅನ್ಯಾಯವಾಗಿ ವಿಧಿಸಿದ್ದ ದಂಡ ಶುಲ್ಕಗಳನ್ನು ಹಿಂದಿರುಗಿಸಿರುವುದು.
- ಗುಲ್ಬರ್ಗಾ ಬೀದರಗಳಲ್ಲಿ ಸಹಯೋಗಿನಿ ಮತ್ತಿತರರ ಮೇಲೆ ಮನ್ಸೋಯಿಚ್ಛೆ ಕಟ್ಟಳೆಗಳನ್ನು ಹೇರುತ್ತಾ ಹಿಂಸಿಸುತ್ತಿದ್ದ ಜಿಲ್ಲಾ ಸಂಯೋಜಕಿ ಮತ್ತು ಸಂಪನ್ಮೂಲ ವ್ಯಕ್ತಿಯ ಬದಲಾವಣೆ. ಬೀದರ ಮತ್ತು ಗುಲ್ಬರ್ಗಾ ಜಿಲ್ಲೆಯ ಕೆಲಸಗಾರರು ಆಗಿನ್ನೂ ಯೂನಿಯನ್ನಿನ ಸದಸ್ಯರಾಗದೇ ಇದ್ದರಾದರೂ, ಯೂನಿಯನ್ನಿನ ಪದಾಧಿಕಾರಿಗಳು ಅವರ ಮೇಲಾಗುತ್ತಿದ್ದ ಕಿರುಕುಳಗಳ ವಿವರಗಳನ್ನು ಸಂಗ್ರಹಿಸಿ ಬೇರೆ ಬೇರೆ ಹಂತದ ನಿರ್ವಾಹಕ ರಚನೆಗಳಿಗೆ ತಿಳಿಸಿ ಅವರ ಮೇಲೆ ಬದಲಾವಣೆಗೆ ಒತ್ತಾಯ ಹೇರುವುದೇ ಅಲ್ಲದೆ, ತಮ್ಮದೇ ಆದ ರೀತಿಯಲ್ಲಿ ಅಲ್ಲಿನ ಕೆಲಸಗಾರರನ್ನು ಅನ್ಯಾಯದ ವಿರುದ್ಧ ಸೊಲ್ಲೆತ್ತಲು ಪ್ರೇರೇಪಿಸಿದ್ದರು.
- ಮೈಸೂರಿನಲ್ಲಿ ಕೆಲ ಸಹಯೋಗಿನಿಯರನ್ನು ತೆಗೆಯಲೆಂದೇ ಹಮ್ಮಿಕೊಂಡಿದ್ದ ಆಂತರಿಕ ಮೌಲ್ಯಮಾಪನವನ್ನು ಕೈಬಿಟ್ಟದ್ದು. ಯಾವತ್ತಿನಂತೆ ಮೌಲ್ಯಮಾಪನವನ್ನು ಯೋಜಿಸುವಾಗ ಸಹಯೋಗಿನಿಯರನ್ನು ಒಳಗೊಳ್ಳಿಸಿಕೊಳ್ಳದೆ, ಜಿಲ್ಲ ಸಂಯೋಜಕಿ ತನ್ನ ಇಷ್ಟಾನುಸಾರ ಮೌಲ್ಯಮಾಪನ ಪ್ರಾರಂಭಿಸಿದಾಗ ಅದರಲ್ಲಿ ಸಹಕರಿಸದೆ ಪ್ರತಿಭಟಿಸಿದ್ದೇ ಅಲ್ಲದೆ ತಕ್ಷಣ ನಿಲ್ಲಿಸುವಂತೆ ಒತ್ತಾಯಿಸಿ ಎಲ್ಲ ಮಟ್ಟಗಳಿಗೆ ಮನವಿ ಸಲ್ಲಿಸಲಾಯಿತು. ನಮ್ಮ ಒತ್ತಾಯಕ್ಕೆ ಮಣಿದು ಕೈಬಿಟ್ಟರೂ ಕೂಡ, ಆ ವೇಳೆಗಾಗಲೇ ನಡೆಸಿದ್ದ ಕೆಲ ಕ್ಷೇತ್ರಗಳ ವರದಿಯನ್ನೇ ಇಡೀ ಮೌಲ್ಯಮಾಪನದ ವರದಿಯೆಂದು ಹೊರತಂದಾಗ ಅದನ್ನು ತಿರಸ್ಕರಿಸಿ 'ಸರಿಯಾದ' ಮೌಲ್ಯಮಾಪನಕ್ಕೆ ಕೇಳಿಕೊಳ್ಳಲಾಯಿತು.
- ಅಲ್ಲದೆ DAಗೆ ಸಂಬಂಧಿಸಿದಂತೆ, ಭಾನುವಾರ ಕೆಲಸ ಮಾಡುವುದಕ್ಕೆ ಸಂಬಂಧಿಸಿದಂತೆ, ತಿಂಗಳ ಸಭೆಗಳಿಗೆ ಸಂಬಂಧಿಸಿದಂತೆ, ಊಟಕ್ಕೆ ಸಂಬಂಧಿಸಿದಂತೆ ಆಗಿಂದಾಗ್ಗೆ ಸಹಯೋಗಿನಿಯರ ಕೆಡುಕಿಗಾಗಿಯೇ ಹೇರುವ ಕಾನೂನು-ಕಟ್ಟಳೆಗಳನ್ನು ಬಲವಾಗಿ ತಿರಸ್ಕರಿಸುತ್ತಾ ಅವನ್ನೆಲ್ಲ ನಿರರ್ಥಕಗೊಳಿಸಿದ್ದವು.

ಸಂಪರ್ಕ ಕೊಂಡಿಗಳು, ಸಹಭಾಗಿತ್ವದಲ್ಲಿ ನೀಡಿದ ಕೈಗಳು :

ಮಹಿಳಾ ಸಮಖ್ಯಾದಲ್ಲೊಂದು ಯೂನಿಯನ್ ಕಟ್ಟಿಕೊಳ್ಳಬೇಕೆನ್ನುವಂತ ಕಲ್ಪನೆಗೆ ಮೂರ್ತ ರೂಪ ಕೊಟ್ಟವರು ಅನೇಕರು. ವಿಶೇಷವಾಗಿ AITUCಯ ಕಾರ್ಮಿಕ ಮುಖಂಡರುಗಳ ಸಂಗಾತಿಗಳ ಸಲಹೆ-ಸಹಕಾರ ಅತಿ ಮೌಲ್ಯದ್ದು. ಈ ಹಿರಿಯರ ಅಪಾರ ಅನುಭವ ಮತ್ತು ಜ್ಞಾನಗಳೇ ಯೂನಿಯನ್ನಿಗೆ ಆಧಾರ ಕೊಟ್ಟದ್ದೆಂಬುದು ನಿಜವಾದರೂ, ನಮ್ಮ ಯೂನಿಯನ್ನು ಹೊರಗಡೆಯ ನಾಯಕತ್ವದ ಮೇಲೆ ಅವಲಂಭಿಸಿಕೊಂಡಂತೆ ರೂಪುಗೊಂಡಿಲ್ಲ. ಹಿಂದೆ ಮಹಿಳಾ ಸಮಖ್ಯಾದಲ್ಲಿ ಎರಡು ವರ್ಷ ಕೆಲಸ ಮಾಡಿ ರಾಜೀನಾಮೆ

ನೀಡಿಹೋದ ಸ್ವಾಯತ್ತ ಮಹಿಳಾ ಚಳುವಳಿಯ ಜತೆಗಿರುವ ಸದಸ್ಯೆಯೊಬ್ಬರು ನಮ್ಮ ಪದಾಧಿಕಾರಿಗಳಲ್ಲೊಬ್ಬರಾಗಿರುವುದನ್ನು ಬಿಟ್ಟರೆ ಉಳಿದೆಲ್ಲ ಪದಾಧಿಕಾರಿಗಳು ಸಮುಖ್ಯಾದಲ್ಲಿರುವ ಕ್ಷೇತ್ರ ಕಾರ್ಯಕರ್ತೆಯರೇ! (ಇತ್ತೀಚೆಗೆ ಕಛೇರಿ ಸಿಬ್ಬಂದಿಗಳ ಪರವಾಗಿ ಒಬ್ಬರು ಪದಾಧಿಕಾರಿಯಾಗಿದ್ದಾರೆ). ಅಲ್ಲದೆ ಯೂನಿಯನ್ನಿನ ಪ್ರತಿಯೊಬ್ಬ ಸದಸ್ಯೆಯೂ ಅದರ ರೂಪು-ರೇಷೆ, ಗುರಿ-ಸಿದ್ಧಾಂತಗಳನ್ನು ಅರ್ಥಮಾಡಿಕೊಂಡು ಆಗುಹೋಗುಗಳಿಗೆ ಕೇವಲ ಮೂಕಪ್ರೇಕ್ಷಕರಂತಿರದೆ, ಇಡಿಯಾಗಿ ಭಾಗವಹಿಸುವಂತಾಗಿಸಲು ಪ್ರಾರಂಭದಿಂದಲೂ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಾ ಬಂದಿದ್ದೇವೆ. ನಮ್ಮ ಪ್ರಯತ್ನದಲ್ಲಿ ಕೈಜೋಡಿಸಿರುವವರು ಅನೇಕರು. ರಾಜಾಸ್ತಾನದ ಸಾಥಿನರ ಸಂಘ ಮತ್ತು ರಾಜ್ಯದ ಅಂಗನವಾಡಿ ಕಾರ್ಯಕರ್ತೆಯರ ಸಂಘಗಳು ತಮ್ಮ ಪೂರ್ಣ ಬೆಂಬಲ, ಸಹಕಾರ ನೀಡಿ ನಮ್ಮೊಟ್ಟಿಗಿವೆ. ಕರ್ನಾಟಕ ಮಾತ್ರವಲ್ಲದೆ ದೂರದ ದೆಹಲಿಯವರೆಗಿನ ಮಹಿಳಾ ಗುಂಪುಗಳು ನಮ್ಮ ಪ್ರಯತ್ನಕ್ಕೊಂದು ಬೆಂಬಲ ರಚನೆಯಾಗಿಯೇ ರೂಪುಗೊಂಡಿವೆ. ಬೇರೆ ಬೇರೆ ಮಟ್ಟಗಳಲ್ಲಿ ನಮಗೆ ಸಂಪರ್ಕ ಕಲ್ಪಿಸಲು, ನಮ್ಮ ಅರೆಕೊರೆಗಳನ್ನು ತಿದ್ದಲು ಸಹಾಯ ಮಾಡುತ್ತಿವೆ. ಹಾಗೆಯೇ ಜನಪರ ಚಳುವಳಿಗಳು, ಮಾನವ ಹಕ್ಕುಗಳ ಗುಂಪುಗಳು, ಕೆಲ ಸ್ವಯಂಸೇವಾ ಸಂಸ್ಥೆಗಳು ನಮ್ಮ ಪ್ರಯತ್ನಕ್ಕೆ ಬೆಂಬಲ ನೀಡುತ್ತಾ ಬಂದಿವೆ. ಇಂತಹ ಪ್ರಜಾತಾಂತ್ರೀಯ ಗುಂಪುಗಳೆಲ್ಲ ಒಂದಾದ ಒಂದು ಬಲಿಷ್ಠ ಬೆಂಬಲ ರಚನೆಯನ್ನು ಯೂನಿಯನ್ನಿಗೆ ರೂಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೇವೆ, ಸದ್ಯದಲ್ಲೇ. ಹಾಗೆಯೇ ದೂರ ದೂರದ ಜಿಲ್ಲೆಗಳಲ್ಲಿ ಹರಿದು- ಹಂಚಿಹೋದಂತಿರುವ ಸದಸ್ಯೆಯರ ಮಧ್ಯೆ ಕೊಂಡಿ ಬೆಳೆಸಲು ಮತ್ತು ದಿನ ನಿತ್ಯದ ಕೆಲಸದ ಮಧ್ಯೆ ಯೂನಿಯನ್ನಿಂದ ಸಂಪರ್ಕ ಕಳೆದು ಹೋದವರಂತೆ ಆಗಿಬಿಡುವುದನ್ನು ತಪ್ಪಿಸಲು ಪ್ರತಿ ಜಿಲ್ಲೆಯ ಮಟ್ಟದಲ್ಲಿ ಮೇಲೆ ಹೇಳಿದಂತಾ ಬೆಂಬಲ ರಚನೆ ಸೃಷ್ಟಿಸುವ ಪ್ರಯತ್ನ ಪ್ರಾರಂಭವಾಗಿದೆ. ಅಲ್ಲದೆ ಪ್ರತಿ ತಿಂಗಳೂ ತಪ್ಪದೇ ಯೂನಿಯನ್ನಿನ ಪದಾಧಿಕಾರಿಗಳು ಯಾವದಾದರೊಂದು ಜಿಲ್ಲೆಯಲ್ಲಿ ಸಭೆ ಸೇರಿ ಆಗು ಹೋಗುಗಳನ್ನ, ಮುಂದಿನ ರೂಪುರೇಷಗಳನ್ನ ಕೂಲಂಕುಶವಾಗಿ ಚರ್ಚಿಸುತ್ತೇವೆ. ಅದರ ಜತೆಗೇ 'ಹೊಸ ಅರಿವಿನ' ಶಕ್ತಿಯನ್ನು ಹುಟ್ಟು ಹಾಕುವ ಸಲುವಾಗಿ ತಿಂಗಳಿಗೊಮ್ಮೆ ಕಾರ್ಯಕರ್ತೆಯರ ಶಿಬಿರಗಳನ್ನು ಪ್ರಾರಂಭಿಸಿದ್ದೇವೆ. ತೀವ್ರ ಸ್ವರೂಪದ ಎರಡು ದಿನಗಳ ಶಿಬಿರಗಳಿವು.

ಈ ಹೊತ್ತು ಮತ್ತು ನಾಳೆ: ಈ ಹೊತ್ತು ನಮ್ಮ ಯೂನಿಯನ್ನು ಇಡೀ ಕರ್ನಾಟಕದ ಎಲ್ಲಾ 5 ಜಿಲ್ಲೆಗಳಲ್ಲಿ 'ಮಹಿಳಾ ಸಮಖ್ಯ'ದಲ್ಲಿ ಕೆಲಸ ಮಾಡುವ ಪ್ರತಿಯೊಬ್ಬ ಕ್ಷೇತ್ರ ಕಾರ್ಯಕರ್ತೆಯ ಮತ್ತು ಕಛೇರಿ ಸಿಬ್ಬಂದಿಗಳ ಸಂಪೂರ್ಣವಾದ ಸದಸ್ಯತ್ವ ಹೊಂದಿದೆ. ಈ ವರ್ಷದ ಮಾರ್ಚ್ ಕೊನೆಗೆ ಸಮುಖ್ಯಾ ಕಾರ್ಯಕ್ರಮದ ಎರಡನೇ ಹಂತ ಮುಗಿದು ಮೂರನೇ ಹಂತ ಪ್ರಾರಂಭವಾಗುವಾಗ ಅನೇಕ ಕೆಲಸಗಾರರ (ಮುಖ್ಯವಾಗಿ ಕಛೇರಿ ಸಿಬ್ಬಂದಿಗಳ) ಕೆಲಸದ ಸ್ಥಿತಿಗತಿಗೆ ಬಲವಾದ ಪೆಟ್ಟು ಬೀಳುವದಿತ್ತು. ಸರ್ಕಾರೀ ವೇತನ ಶ್ರೇಣಿಯಲ್ಲಿರುವ ಖಾಯಂ ನೌಕರರಾದ ಇವರನ್ನು ಕಾರ್ಯಚ್ಯುತಿಗೊಳಿಸಿ ಸಣ್ಣ ಅವಧಿಗಳಿಗೆ, ಕನ್‌ಸಾಲಿಡೇಟೆಡ್ ಸಂಬಳದ ಮೇಲೆ ನೇಮಿಸಿಕೊಳ್ಳುವ ದಿಕ್ಕಿನಲ್ಲಿ ಪ್ರಯತ್ನಗಳು ನಡೆಯತೊಡಗಿದವು. ಈ ಹಿನ್ನಲೆಯಲ್ಲಿ ಕಾರ್ಯನಿರತಗೊಂಡ ಯೂನಿಯನ್ ಸಮುಖ್ಯಾದಲ್ಲಿ ಕೆಲಸ ಮಾಡುವ ಪ್ರತಿಯೊಬ್ಬ ಕೆಲಸಗಾರರ ಕೆಲಸದ ಸಂಪೂರ್ಣ ವಿವರಗಳನ್ನು ಪಟ್ಟಿ ಮಾಡಿ, ಇವರೆಲ್ಲರ ಕೆಲಸದ ಸ್ಥಿತಿಗತಿಗೆ ಯಾವುದೇ ಧಕ್ಕೆ ಬರದಿರುವಂತೆ ಒತ್ತಾಯಿಸಿ ಲೇಬರ್ ಕಮಿಷನರಿಗೂ, ಸಮುಖ್ಯಾದ ನಿರ್ದೇಶಕರಿಗೂ ಮನವಿ ಸಲ್ಲಿಸಿತು. ಇದು ಯಾವದೇ ಕೆಲಸಗಾರರ ಕೆಲಸಕ್ಕೆ ಉಂಟಾಗುವ ಅಪಾಯಕ್ಕೆ ಒಂದು ತಾತ್ಕಾಲಿಕ ಸ್ಟೇ ಇದ್ದಂತೆ. ಈಗ ತ್ರಿಮುಖೀನ (ಯೂನಿಯನ್, ಸಮುಖ್ಯಾ ಮ್ಯಾನೇಜ್‌ಮೆಂಟ್, ಸಂಧಾನಾಧಿಕಾರಿ) ರಾಜಿ ಸಂಧಾನ ಪ್ರಾರಂಭವಾಗಿದ್ದು ಇಂತಹ ನಾಲ್ಕು ಸಭೆಗಳು ಮುಗಿದಿವೆ. ಎಲ್ಲರ ಕೆಲಸಗಳನ್ನು ಖಾಯಂಗೊಳಿಸುವ, ಸೂಕ್ತ ಸೇವೆಯ ಸ್ಥಿತಿಯನ್ನು ಒದಗಿಸುವ ಮತ್ತು ಈಗಾಗಲೇ ಉತ್ತಮ ಸೇವಾಸ್ಥಿತಿಯಲ್ಲಿ ಕೆಲಸ ಮಾಡುತ್ತಿರುವವರ ಸೇವೆಯ ರೂಪು-ರೇಷೆಗಳಲ್ಲಿ ಬದಲಾವಣೆ ತರದಿರುವಂತಹ ವಿಷಯಗಳ ಸುತ್ತಲೂ ರಾಜಿ-ಸಂಧಾನ ನಡೆಯುತ್ತಿದೆ. ಮುಂದಿನ ಹಂತದಲ್ಲಿ ಸಹಯೋಗಿನಿಯರ 'ಗೌರವಧನ'ದಲ್ಲಿ ಗಮನಾರ್ಹ ಹೆಚ್ಚಳ ತರುವುದೂ ಅಲ್ಲದೆ ಅವರ ಸೇವಾ ಸ್ಥಿತಿಗತಿಯಲ್ಲಿ ಸುಧಾರಣೆ ತರುವುದಾಗಿ ಮ್ಯಾನೇಜ್‌ಮೆಂಟ್ ಆಶ್ವಾಸನೆ ನೀಡಿದೆ.

ಮಹಿಳಾ ಸಮುಖ್ಯಾ ಹಳ್ಳಿಯ ಬಡ ಹೆಂಗಸರಿಗೆ ಅತ್ಯಂತ ಅರ್ಥಪೂರ್ಣ, ಉಪಯುಕ್ತ ಕಾರ್ಯಕ್ರಮವಾಗಿ ಮುಂದುವರಿಯಬೇಕು. ಇಂತಹ ಮೌಲಿಕ ಕೆಲಸಗಳಲ್ಲಿ ತೊಡಗಿರುವವರಿಗೆ ಉತ್ತಮ ಸೇವಾ ಸ್ಥಿತಿ ನಿರ್ಮಿಸಬೇಕು - ಇವೆರಡು ವಿಶಾಲ ಅಂಶಗಳನ್ನಾಧರಿಸಿ ಒಂದು ತುಂಬಾ ವಿಶಿಷ್ಟವಾದ ಬೇಡಿಕೆಯ ಪಟ್ಟಿಯನ್ನು ಯೂನಿಯನ್ ತಯಾರಿಸುತ್ತಿದೆ. ಅತ್ಯಂತ ಶೀಘ್ರದಲ್ಲೇ ಅದನ್ನು ಮ್ಯಾನೇಜ್‌ಮೆಂಟಿಗೂ, ಲೇಬರ್ ಕಮಿಷನರಿಗೂ ಸಲ್ಲಿಸಲಾಗುತ್ತಿದೆ.

ಯೂನಿಯನ್ನಿನ ಹುಟ್ಟು ಮತ್ತು ಬೆಳವಣಿಗೆಯಿಂದಾಗಿ ಸಮುಖ್ಯಾದ ಕೆಲಸಗಾರರಲ್ಲಿ ಒಂದು ಹೊಸಬಗೆಯ ಜಾಗೃತಿ ಮೂಡಿದೆ. ಮಹಿಳಾ ಕೆಲಸಗಾರರ ಕೆಲಸದ ಹಕ್ಕನ್ನು ಪ್ರತಿಪಾದಿಸುವ ಅರಿವು ಇದು. ಇದೇ ಸಮಯದಲ್ಲಿ ಗ್ರಾಮೀಣ ಮಹಿಳೆಯರ ಸಶಕ್ತತೆಗಾಗಿನ ಈ ಕಾರ್ಯಕ್ರಮವನ್ನು ನಿಜಾರ್ಥದ ಸಶಕ್ತತಾ ಕಾರ್ಯಕ್ರಮವಾಗಿ ಮುಂದುವರಿಸಿಕೊಂಡು ಹೋಗುವ ಅಪಾರ ಜವಾಬ್ದಾರಿ ಕೂಡ ಸದಸ್ಯೆಯರ ಮೇಲಿದೆ. ಈ ಹಾದಿಯಲ್ಲಿಯೇ ನಾಳೆಗಳು ಸಾಗಬೇಕಿದೆ.

ಮಹಿಳಾ ಸಮಖ್ಯಾ ಕರ್ನಾಟಕ ಎಂಪ್ಲಾಯೀಸ್ ಅಸೋಸಿಯೇಷನ್. (ರಿ)

ಅಂಗನವಾಡಿ ಕಾರ್ಯಕರ್ತೆ - ಸಹಾಯಕಿಯರ ಹೋರಾಟ - ಸಾಧನೆ

ಪ್ರಾಥಮಿಕ ಹಂತದಲ್ಲಿ ಆರೋಗ್ಯ ಸುಧಾರಣೆ, ಶಿಶು ಮರಣ ತಪ್ಪಿಸಲು ಸರಕಾರ ಹೆಚ್ಚಿನ ಗಮನ ನೀಡುವ ನಿಟ್ಟಿನಲ್ಲಿ ಸಮಗ್ರ ಶಿಶು ಅಭಿವೃದ್ಧಿ ಯೋಜನೆಗಳು ಜಾರಿಗೆ ಬಂದವು. ೧೯೭೫ರಲ್ಲಿ ಅಸ್ತಿತ್ವಕ್ಕೆ ಬಂದ ಈ ಯೋಜನೆಯ ಕೇಂದ್ರಬಿಂದು 'ಅಂಗನವಾಡಿ' ಕೇಂದ್ರಗಳಾದರೆ ಯೋಜನೆಗಳ ಬೆನ್ನೆಲುಬು ಕಾರ್ಯಕರ್ತೆಯರು ಮತ್ತು ಸಹಾಯಕಿಯರು.

ಮೊದಲಿಗೆ ಈ ಯೋಜನೆ ಪ್ರಾಯೋಗಿಕವಾಗಿ ದೇಶದ ಆಯ್ದ ತಾಲ್ಲೂಕುಗಳಲ್ಲಿ ಜಾರಿಗೆ ಬಂದುದು ಕ್ರಮೇಣ ದೇಶಾದ್ಯಂತ ಎಲ್ಲಾ ತಾಲ್ಲೂಕುಗಳಿಗೆ ವಿಸ್ತರಿಸಿತು. ರಾಜ್ಯ ಮತ್ತು ಕೇಂದ್ರ ಸರಕಾರಗಳ ಜಂಟಿ ಸಹಯೋಗದಲ್ಲಿ ಇವು ನಡೆಯುತ್ತಿದ್ದರೆ, ಆಯ್ದ ಯೋಜನೆಗಳಿಗೆ 'ಕೇರ್' ಎಂಬ ಸ್ವಯಂ ಸೇವಾ ಸಂಸ್ಥೆ ಪೂರಕ ಆಹಾರ ಒದಗಿಸುತ್ತಿತ್ತು. 'ಯೂನಿಸೆಫ್' ನೆರವೂ ಈ ಯೋಜನೆಗಿತ್ತು.

ನಗರ ಪ್ರದೇಶಗಳ ಕೊಳೆಗೇರಿಗಳಲ್ಲಿ ಬಹುತೇಕ ಗ್ರಾಮಾಂತರ ಪ್ರದೇಶಗಳಲ್ಲಿ, ಗುಡ್ಡಗಾಡು ಪ್ರದ್ದೇಶಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರು ಮಕ್ಕಳ ಯೋಗಕ್ಷೇಮ, ಪೌಷ್ಟಿಕ ಆಹಾರ ನೀಡಿಕೆ, ಹಾಡು, ನೃತ್ಯ, ಆಟಗಳ ಮೂಲಕ ಶಾಲಾಪೂರ್ವ ಶಿಕ್ಷಣ ನೀಡುವ ಜವಾಬ್ದಾರಿ ಹೊಂದಿದ್ದಾರೆ.

ಕನಿಷ್ಠ ಸಾವಿರದಿಂದ ಎರಡು ಸಾವಿರ ಜನಸಂಖ್ಯೆ ಇರುವ ಪ್ರದೇಶದಲ್ಲಿ ಕೇಂದ್ರ ತೆರೆಯಲು ಸರ್ಕಾರ ಮುಂದಾಗುತ್ತದೆ. ಪ್ರತಿ ಅಂಗನವಾಡಿಯಲ್ಲಿ ೩೦ರಿಂದ ೪೦ ಮಕ್ಕಳಿರುತ್ತಾರೆ. ಈ ಅಂಗನವಾಡಿಗಳಲ್ಲಿ ಕೇಂದ್ರದ ಉಸ್ತುವಾರಿ ನೋಡಿಕೊಳ್ಳಲು ಒಬ್ಬ ಕಾರ್ಯಕರ್ತೆ, ಸಹಾಯಕಿ ಇರುತ್ತಾರೆ.

ಆಯಾ ಯೋಜನೆಗಳ ನಿಗದಿತ ಪ್ರದೇಶಗಳಲ್ಲಿ ಕೇಂದ್ರಗಳನ್ನು ತೆರೆಯುವ ಪಟ್ಟಿ ಸಿದ್ಧಪಡಿಸಿದ ನಂತರ ಇಲಾಖೆಯ ಯೋಜನಾ ಮಟ್ಟದ ಉಸ್ತುವಾರಿ ನೋಡಿಕೊಳ್ಳುವ ಸಮಗ್ರ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಾಯಕ ನಿರ್ದೇಶಕರು ಹಾಗೂ ಸ್ಥಳೀಯ ಶಾಸಕರನ್ನೊಳಗೊಂಡ ಆಯ್ಕೆ ಸಮಿತಿಯ ಮೂಲಕ ಕಾರ್ಯಕರ್ತೆಯರ ಆಯ್ಕೆ ನಡೆಯುತ್ತದೆ. ಎಸ್. ಎಸ್. ಎಲ್.ಸಿ. ವಿದ್ಯಾರ್ಹತೆಯೇ ಹುದ್ದೆಗಿರುವ ಕನಿಷ್ಠ ಅರ್ಹತೆ.

ಅಂಗನವಾಡಿಯ ಕಾರ್ಯಕರ್ತೆಯ ದಿನಚರಿಯ ಪ್ರಾರಂಭ ಬೆಳಿಗ್ಗೆ ೯ ಗಂಟೆಗೆ. ಕೇಂದ್ರದಲ್ಲಿ ತಾಯಂದಿರಿಗೆ ಮತ್ತು ಮಕ್ಕಳಿಗೆ ಪೂರಕ ಪೌಷ್ಟಿಕ ಆಹಾರ ನೀಡಿಕೆ, ಮಧ್ಯಾಹ್ನ ಮೂರರಿಂದ ಆರರವರೆಗೆ ಮಕ್ಕಳಿಗೆ ಶಾಲಾಪೂರ್ವ ಶಿಕ್ಷಣ, ಬಳಿಕ ಹಾಜರಾತಿ, ತಾಯಂದಿರ ಸಭೆಯ ಹಾಜರಾತಿ ಇತ್ಯಾದಿಗಳನ್ನು ದಾಖಲಿಸುವ ಕಾರ್ಯವಿರುತ್ತದೆ. ಈ ನಡುವೆ ಸಮುದಾಯದ ಮನೆಗಳಿಗೆ ತೆರಳಿ ಗರ್ಭಿಣಿ, ಬಾಣಂತಿಯರಿಗೆ ಸಲಹೆ-ಮಾರ್ಗದರ್ಶನ.

ತಿಂಗಳ ನಿಗದಿತ ದಿನಗಳಲ್ಲಿ ನಡೆಯುವ ತಾಯಂದಿರ ಸಭೆಗಳಲ್ಲಿ ತರಕಾರಿ, ಸೊಪ್ಪು, ಕಾಳುಗಳಲ್ಲಿರುವ ಪೌಷ್ಟಿಕಾಂಶ ಮತ್ತು ಅವುಗಳ ಬಳಕೆಯ ಬಗ್ಗೆ ಪ್ರಾತ್ಯಕ್ಷಿಕೆ ಕಾರ್ಯಕ್ರಮ ನಡೆಯುತ್ತದೆ. ಅಂಗನವಾಡಿ ಕಾರ್ಯಕರ್ತೆಯರ ಇತರ ಕಾರ್ಯಗಳಲ್ಲಿ ಸಣ್ಣ ಉಳಿತಾಯದ ಬಗ್ಗೆ ಮಾಹಿತಿ ನೀಡುವುದು, ಅಂಗವಿಕಲರಿಗೆ ಸರ್ಕಾರದ ಸೌಲಭ್ಯಗಳ ಕುರಿತು ವಿವರ. ನೇತ್ರ ಚಿಕಿತ್ಸಾ, ಕೃತಕ ಅಂಗಾಂಗ ಜೋಡಣೆ ಶಿಬಿರಗಳಿಗೆ ಗ್ರಾಮಸ್ಥರನ್ನು ಕರೆದೊಯ್ಯುವುದು ಸೇರಿದೆ. ಜನಸಂಖ್ಯಾ ನಿಯಂತ್ರಣ ಕಾರ್ಯಕ್ರಮಗಳ ಕುರಿತು ಮಹಿಳೆಯರಲ್ಲಿ ಜಾಗೃತಿ ಮೂಡಿಸಲು ಸಮಸ್ಯೆಗಳನ್ನು ಎದುರಿಸಿ, ಮೂಢ ನಂಬಿಕೆಗಳನ್ನು ತೊಲಗಿಸಲು ಸಾಕಷ್ಟು ಹೆಣಗಾಡಬೇಕಾಗುತ್ತದೆ. ಅಲ್ಲದೆ ಸಾಕ್ಷರತಾ ಕಾರ್ಯಕ್ರಮ, ಸಾಮಾಜಿಕ ಪಿಡುಗುಗಳಾದ ವರದಕ್ಷಿಣೆ ಪದ್ಧತಿ, ಬಾಲ್ಯ ವಿವಾಹ, ದೇವದಾಸಿ ಪದ್ಧತಿಗಳ ವಿರುದ್ಧ ಜನಾಭಿಪ್ರಾಯ ಮೂಡಿಸುವ ಜವಾಬ್ದಾರಿಯೂ ಇವರ ಮೇಲಿದೆ.

ಗ್ರಾಮೀಣ ಮಟ್ಟದಲ್ಲಿ ಈ ಕಾರ್ಯಕರ್ತೆಯರು ನಡೆಸುವ ಕಾರ್ಯಗಳು ತುಂಬಾ ಮಹತ್ವದ್ದು. ಆದರೆ ದಿನದ ಎಂಟು ಗಂಟೆಗಳಿಗೂ ಅಧಿಕ ಕಾಲ ದುಡಿಯುವ ಈ ಮಹಿಳೆಯರ ಬಗ್ಗೆ ಸರ್ಕಾರದ ಬಳಿ ಇರುವುದು ಕೇವಲ ಆಶ್ವಾಸನೆಗಳು ಮಾತ್ರ.

ಈ ಕಾರ್ಯಕರ್ತೆಯರು ಸರ್ಕಾರದ ಖಾಯಂ ಕೆಲಸಗಾರರಾಗಿರದೇ ಕೇವಲ ಗೌರವ ಧನ ಕಾರ್ಯಕರ್ತೆಯರಾಗಿ ತಿಂಗಳಿಗೆ ೩೫೦ರಿಂದ ೫೦೦ ರೂ.ಗಳ ಗೌರವ ಧನ ಪಡೆಯುತ್ತಿದ್ದಾರೆ.

ಇವರಿಗೆ ನೀಡಲಾಗುತ್ತಿರುವ ಸವಲತ್ತುಗಳ ಬಗ್ಗೆ ಬೇರೆ ಹೇಳಬೇಕಾಗಿಲ್ಲ. ವರ್ಷಕ್ಕೆ ಕೇವಲ ೨೦ ಸಾಮಾನ್ಯ ರಜೆ ಇರುವ ಇವರಿಗೆ ಸರ್ಕಾರದ ಶಿಶುವಿಹಾರಗಳು-ಶಾಲೆಗಳಿಗೆ ದಸರಾ, ಬೇಸಿಗೆ ರಜೆಗಳಿದ್ದಾಗಲೂ ಅಂಗನವಾಡಿ ಕೇಂದ್ರಗಳು ತೆರೆದೇ ಇರಬೇಕಾಗಿದೆ. ಯಾವುದೇ ವೈದ್ಯಕೀಯ ಭತ್ಯೆ ಇವರಿಗಿಲ್ಲ. ಕನಿಷ್ಠ ವೈದ್ಯಕೀಯ ರಜೆ ಕೂಡಾ ಇಲ್ಲ. ಸ್ವಚ್ಛತಾ ಕಾರ್ಯ, ಪೌಷ್ಟಿಕ ಆಹಾರ ಸಿದ್ಧಪಡಿಸುವ ಅಂಗನವಾಡಿ ಸಹಾಯಕಿ ಇಂದು ಪಡೆಯುತ್ತಿರುವ ಗೌರವ ಧನ ಕೇವಲ ೨೦೦ ರೂಪಾಯಿಗಳು. ಇಂದಿನ ದಿನಗಳಲ್ಲಿ ಈ ಹಣ ಎರಡು ಹೊತ್ತಿನ ಊಟಕ್ಕೂ ತೊಂದರೆ ತಂದಿದೆ. ಇತ್ತ ದಿನಗೂಲಿಗಳೂ ಅಲ್ಲದ ಅತ್ತ ಕಾಯಂ ನೌಕರರೂ ಅಲ್ಲದ ಕಾರ್ಯಕರ್ತೆಯರದು ಅತಂತ್ರ ಸ್ಥಿತಿ.

ಕರ್ನಾಟಕ ರಾಜ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 40 ಸಾವಿರಕ್ಕೂ ಅಧಿಕ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ

ರಾಜ್ಯ ಸರ್ಕಾರದ ಸಹಾಯ ಧನದಿಂದ ಗೌರವಧನ ಹೆಚ್ಚಿಸುವುದಾಗಿ, ರಜಾ ಸೌಲಭ್ಯ ವಿಸ್ತರಿಸುವುದಾಗಿ, ಕ್ಷೇಮಾಭಿವೃದ್ಧಿ ನಿಧಿ ಸ್ಥಾಪಿಸುವುದಾಗಿ ಅಂಗನವಾಡಿ ಮಕ್ಕಳಿಗೂ ಸರ್ಕಾರದಿಂದ ಉಚಿತವಾಗಿ ಹಾಲು ಪೂರೈಸುವುದಾಗಿ, ನಿವೇಶನ ರಹಿತ ಕಾರ್ಯಕರ್ತೆಯರಿಗೆ ಆಶ್ರಯ ಯೋಜನೆ ಅಡಿ ನಿವೇಶನ ಮತ್ತು ಮನೆ, ಕಾರ್ಯಕರ್ತೆಯರಿಗೆ ಪಡಿತರ ಚೀಟಿ ದೊರಕಿಸುವುದಾಗಿ 1993ರ ಮಾರ್ಚ್ 3ರಂದು ಮುಖ್ಯಮಂತ್ರಿ ವೀರಪ್ಪ ಮೊಯ್ಲಿಯವರು ಕಾರ್ಯಕರ್ತೆಯರ ಪ್ರತಿನಿಧಿಗಳಿಗೆ ಭರವಸೆ ನೀಡಿದ್ದರು. ಇವುಗಳಲ್ಲಿ ಕೆಲವು ಆಶ್ವಾಸನೆಗಳನ್ನು ವಿಧಾನ ಸಭಾ ಅಧಿವೇಶನದಲ್ಲೂ ನೀಡಲಾಗಿತ್ತು. ಆದರೆ ಬಹುತೇಕವು ಆಶ್ವಾಸನೆಗಳಾಗೇ ಉಳಿದಿವೆ.

ದೇಶಾದ್ಯಂತ 7 ಲಕ್ಷ ಮತ್ತು ಕರ್ನಾಟಕದಾದ್ಯಂತ 80 ಸಾವಿರ ಸಂಖ್ಯೆಯಲ್ಲಿರುವ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಸಂಘಟನೆ ಇಂದು ತುಂಬಾ ಬಲಿಷ್ಠವಾಗಿದೆ. AITUC ನೇತೃತ್ವದ ಕರ್ನಾಟಕದ ಯೂನಿಯನ್ ಇತ್ತೀಚೆಗೆ KAT (Karnataka Administrative Tribunal)ನಲ್ಲಿ ಈ ಕಾರ್ಯಕರ್ತೆಯರನ್ನು ಸರ್ಕಾರೀ ನೌಕರರೆಂದು ಪರಿಗಣಿಸಿ ಪ್ರೈಮರಿ ಶಾಲಾ ಶಿಕ್ಷಕಿಯರ ವೇತನ ಶ್ರೇಣಿ ಇವರಿಗೆ ಅನ್ವಯಿತವಾಗಬೇಕೆಂಬ ವಾದವನ್ನು ಗೆದ್ದಿತು. (ಬಾಕ್ಸ್ ನೋಡಿ) ಅತ್ಯಂತ ವ್ಯಾಪಕವಾಗಿ ನಡೆಯುತ್ತಿರುವ ಈ ಕಾರ್ಯಕರ್ತೆಯರ ಹೋರಾಟದ ವಿವರಗಳನ್ನು ಪಡೆದುಕೊಳ್ಳಲು ಕರ್ನಾಟಕ ಮಟ್ಟದಲ್ಲಿ ಕೆಲಸ ಮಾಡುತ್ತಿರುವ ಮತ್ತೊಂದು ಯೂನಿಯನ್, "ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸಂಘ"ದ ಪ್ರಧಾನ ಕಾರ್ಯದರ್ಶಿ, ಕೆ. ಸಿ. ಬಸವರಾಜ್ ಅವರನ್ನು ಭೇಟಿ ಮಾಡಲಾಯಿತು. ಕಳೆದ 8 ವರ್ಷಗಳಿಂದಲೂ ಕೆಲಸ ಪ್ರಾರಂಭಿಸಿ ಕಳೆದ 4 ವರ್ಷಗಳಿಂದ ನೋಂದಿತಗೊಂಡು ಹೋರಾಟ ಬಲ ಪಡಿಸಿರುವ ಇವರು ತಮ್ಮ ಬೇಡಿಕೆಗಳನ್ನು ಮೂರು ಹಂತಗಳಲ್ಲಿ ಇಟ್ಟಿರುವುದಾಗಿ ಹೇಳಿದರು. 1) ರಾಷ್ಟ್ರ ಮಟ್ಟ, 2) ರಾಜ್ಯ ಮಟ್ಟ, 3) ಜಿಲ್ಲ ಮತ್ತು ತಾಲೂಕು ಮಟ್ಟ.

ರಾಷ್ಟ್ರ ಮಟ್ಟದಲ್ಲಿ ಅತ್ಯಂತ ಮುಖ್ಯ ಬೇಡಿಕೆಯೆಂದರೆ ಸೇವೆಯ ಖಾಯಂಗೊಳಿಸುವಿಕೆ; ಸೇವಾ ಭದ್ರತೆ ನೀಡಿ ಕನಿಷ್ಠ ವೇತನ ನೀಡುವುದು ಮತ್ತು ಖಾಸಗೀಕರಣ ಪ್ರಯತ್ನವನ್ನು ಕೈಬಿಡುವುದು.

ಅತ್ಯಂತ ಶೋಷಿತ ಮಹಿಳೆಯರಿದ್ದಾರೆ ಈ ಅಂಗನವಾಡಿ ಕಾರ್ಯಕರ್ತೆ - ಸಹಾಯಕಿಯರಲ್ಲಿ. ವಿಧವೆಯರು, ಅಂಗವಿಕಲರು, ಹೀಗೆ. ಕಳೆದ ಇಪ್ಪತ್ತು ವರ್ಷಗಳಿಂದ ಕೆಲಸ ಮಾಡುತ್ತಿರುವ ಇವರಿಗೆ ಒಂದು ಕಡೆ ಬೇರೆ ನೌಕರಿಗೆ ಹೋಗಲು ವಯಸ್ಸು ಕೂಡ ಮೀರಿದೆ, ಇನ್ನೊಂದು ಕಡೆ ನಿರುದ್ಯೋಗದ ಕಾರಣ ಪಿಯುಸಿ ಮುಗಿಸಿರು ವಂತವರೂ ಈ ಕೆಲಸಕ್ಕೆ ಬರುತ್ತಾರೆ. 'ಸಮಾಜ ಸೇವಕಿ'ಯರಾದ ಇವರಿಗೇ ಕನಿಷ್ಠ ಭದ್ರತೆ ಇಲ್ಲ. ಬೇರೆಯವರಿಗೆ ಪೌಷ್ಟಿಕ ಆಹಾರದ ಪಾಠ ಕಲಿಸುತ್ತಾರೆ. ತಮಗೆ ಮಾತ್ರ ಎರಡು ಹೊತ್ತಿನ ಊಟವೂ ಇಲ್ಲ. ಹಾಗಾಗಿ ಇಲ್ಲಿ 'ಸಮಾನ ಕೆಲಸಕ್ಕೆ ಸಮಾನ ವೇತನ'ವೆಂಬ ಘೋಷಣೆ ನಮ್ಮಲಾಗಿದೆ ಎನ್ನುತ್ತಾರೆ ಸಂಘದವರು. ಅಂಗನವಾಡಿಗಳನ್ನು ಸ್ವಯಂಸೇವಾ ಸಂಸ್ಥೆಗಳಿಗೆ ಒಪ್ಪಿಸುವುದರ ಮೂಲಕ ಖಾಸಗೀಕರಣಕ್ಕೆ ಮುಂದಾಗಿರುವುದನ್ನು ರಾಷ್ಟ್ರಮಟ್ಟದಲ್ಲಿ ಪ್ರಭಲವಾಗಿ ವಿರೋಧಿಸಲಾಗುತ್ತಿದೆ. ಜಾಗತೀಕರಣದ ಇವತ್ತಿನ ಸಂದರ್ಭದಲ್ಲಿ ಸಮಾಜ ಕಲ್ಯಾಣ ಕಾರ್ಯಕ್ರಮಗಳ ಖಾಸಗೀಕರಣಕ್ಕೆ ಸರ್ಕಾರ ಕಂಡುಕೊಳ್ಳುತ್ತಿರುವ ದಾರಿಯೆಂದರೆ ಸ್ವಯಂಸೇವಾ ಸಂಸ್ಥೆಗಳು.

ರಾಜ್ಯಮಟ್ಟದಲ್ಲಿ ಮುಂದಿಟ್ಟಿರುವ ಬೇಡಿಕೆಗಳೆಂದರೆ : (1) ಕಾರ್ಯಕರ್ತೆಯರ ಕ್ಷೇಮಾಭಿವೃದ್ಧಿ ನಿಧಿ ಸ್ಥಾಪಿಸಬೇಕು. (2) ಮಕ್ಕಳಿಗೆ ಹಾಲು ಒದಗಿಸಬೇಕು. (3) ಬೇಸಿಗೆ ರಜೆ - ಕನಿಷ್ಟ 20 ದಿನಗಳಾದರೂ ಕೊಡಬೇಕು. ದಸರಾ ರಜೆ ಕೂಡ. (4) ಸಮರ್ಥ

1996ರ ಆಗಸ್ಟ್ 9ರಂದು ಕರ್ನಾಟಕ ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯುನಲ್ ಅಂಗನವಾಡಿ ಕಾರ್ಯಕರ್ತೆಯರ ಸೇವೆಗೆ ಸಂಬಂಧಿಸಿದಂತೆ ಒಂದು ಚಾರಿತ್ರಿಕವಾದ ತೀರ್ಪನ್ನು ನೀಡಿತು. AITUCಯ ಪರಿಯಿಂದ ಮಾನ್ಯ ವಕೀಲರಾದ ಶ್ರೀ ಎಂ. ಸಿ. ನರಸಿಂಹನ್ ಅವರು ವಾದಿಗಳಾಗಿದ್ದ ಈ ತೀರ್ಪಿನಲ್ಲಿ ಅಂಗನವಾಡಿ ಕಾರ್ಯಕರ್ತೆಯರನ್ನು ಸರ್ಕಾರೀ ನೌಕರರೆಂದು ಪರಿಗಣಿಸಿ ಅವರನ್ನು ಪ್ರೈಮರಿ ಶಾಲಾ ಶಿಕ್ಷಕರ ವೇತನ ಶ್ರೇಣಿಯಲ್ಲಿ ತರಬೇಕು ಎಂದು KAT ಹೇಳಿತು. "ಅವರಿಗೆ ಕೊಡುತ್ತಿರುವ ಗೌರವಧನ ಅವರು ಸಲ್ಲಿಸುತ್ತಿರುವ ಸೇವೆಗೆ ಯಾವ ರೀತಿಯಲ್ಲೂ ಸರಿದೂಗಲಾರದು ಮತ್ತದು ಕನಿಷ್ಠ ಕೂಲಿಗೂ ಕಡಿಮೆಯಿದೆ. ಆದ್ದರಿಂದ ಇಂತಹ ಸೇವೆ ಒತ್ತಾಯದ ಶ್ರಮ (Forced Labour) ವೆಂದಾಗುತ್ತದೆ. ಮತ್ತು ಸಂವಿಧಾನದ 23ನೇ ಪರಿಚ್ಛೇದ ಇದನ್ನು ನಿಷೇಧಿಸುತ್ತದೆ. ಇದು ಶಿಕ್ಷಾರ್ಹ ಅಪರಾಧ. ಅಂಗನವಾಡಿ ಕಾರ್ಯಕರ್ತೆಯರನ್ನು ಮತ್ತು ಹೆಲ್ಪರ್‌ಗಳನ್ನು ಸಿವಿಲ್ ಸರ್ವೆಂಟ್‌ಗಳೆಂದು ಪರಿಗಣಿಸಬೇಕು; ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯಲ್ಲಿ ಇವರನ್ನು ಖಾಯಂ ನೌಕರರಾಗಿ ನೇಮಿಸಿಕೊಳ್ಳಬೇಕು; ಪ್ರೈಮರಿ ಶಾಲಾ ಶಿಕ್ಷಕರು ಅಥವಾ ಎರಡನೇ ದರ್ಜೆ ಗುಮಾಸ್ತರು ಅಥವಾ ಇದಕ್ಕೆ ಸಮನಾದ ಯಾವುದೇ ಸರ್ಕಾರೀ ನೌಕರರ ವೇತನ ಶ್ರೇಣಿಯಲ್ಲಿ ಇವರನ್ನು ತರಬೇಕು" ಎಂಬುದು AITUCಯ ಪ್ರತಿಪಾದನೆಯಾಗಿತ್ತು.

ಕರ್ನಾಟಕ ಸರ್ಕಾರ KATಯ ಈ ತೀರ್ಪನ್ನು ಪ್ರಶ್ನಿಸಿ ಇದೀಗ ಸುಪ್ರೀಂಕೋರ್ಟಿನಲ್ಲಿ ದಾವೆ ಹೂಡಿದೆ. •

ಕಾರ್ಯಕರ್ತೆಯರನ್ನು ಸೂಪರ್‌ವೈಸರ್ ಹುದ್ದೆಗಳಿಗೆ ತಗೋಬೇಕು. ಇಲ್ಲಿ ನೂರಕ್ಕೆ ನೂರುಪಾಲು ಮೀಸಲಾತಿ ಬೇಕು. (5) ಹೆರಿಗೆ ರಜೆ ಎರಡಕ್ಕೆ ಏರಿಸಬೇಕು.

ಜಿಲ್ಲಾ-ತಾಲ್ಲೂಕು ಮಟ್ಟದಲ್ಲಿ (1) ಅಂಗನವಾಡಿಯಲ್ಲಿ ಆಹಾರ ತಯಾರಿಸಲು ಉರುವಲಿಗೆ ಹಣ ಕೊಡಬೇಕು. (2) ತಾಲೂಕು ಕೇಂದ್ರಗಳಿಂದ ಆಹಾರ ಹೊತ್ತು ತಂದು ಹಾಕಬೇಕು. (3) ಸ್ವಚ್ಛತೆಯ ಸಲಕರಣೆಗಳನ್ನು ಒದಗಿಸಬೇಕು, ಮಕ್ಕಳಿಗೆ ಆಟಿಕೆ, ದಾಖಲೆ ಇಡಲಿಕ್ಕೆ ವ್ಯವಸ್ಥೆ ಮಾಡಿಕೊಡಬೇಕು ಮತ್ತು ಎಲ್ಲಕ್ಕಿಂತ ಮುಖ್ಯವಾಗಿ (5) ಕಟ್ಟಡ ಒದಗಿಸಬೇಕು ಎಂಬುದು ಟೀಕೆಗಳು, ಈಗ 75% ಅಂಗನವಾಡಿಗಳು ದೇವಸ್ಥಾನ, ಮಸೀದಿಗಳಲ್ಲಿ; ಮರದಡಿಗಳಲ್ಲಿ ನಡೆಯುತ್ತಿವೆ. ಕಳೆದ ವರ್ಷ 5 ಕೋಟಿ ರೂಪಾಯಿ ರಾಜ್ಯದಲ್ಲಿ ಇದಕ್ಕಾಗಿ ಮಂಜೂರಾಗಿದೆಯೆಂದು ತಿಳಿದುಬಂದಿದ್ದರೂ ಏನೂ ಕ್ರಮ ತಗೊಂಡಿಲ್ಲ.

ಇತ್ತೀಚಿನ ದಿನಗಳಲ್ಲಿ ಸಂಘದ ನಿರಂತರ ಹೋರಾಟದಿಂದ ಕೆಲ ಸೌಕರ್ಯಗಳು ದೊರೆತಿವೆ. ಕಾರ್ಯಕರ್ತೆಯರೇ ಕೈಯಿಂದ ಹಣ ಹಾಕುತ್ತಿದ್ದ ಉರುವಲಿಗೆ ಈ ಪ್ರತಿ ಅಂಗನವಾಡಿಗೆ 75ರೂ. ಸಿಗುವಂತಾಗಿದೆ. ಸ್ವಚ್ಛತೆಯ ಸಲಕರಣೆಗಳಿಗೆಂದು ವರ್ಷಕ್ಕೆ 180ರೂ ದೊರೆಯುತ್ತಿದೆ. ಕೆಲ ಜಿಲ್ಲೆಗಳಲ್ಲಿ (ಉದಾ. ಶಿವಮೊಗ್ಗ) ದಾಖಲೆ ಇಡಲಿಕ್ಕೆ ಕುರ್ಚಿ, ಟೇಬಲ್ಲು ಇತ್ಯಾದಿ ನೀಡಲು ತೀರ್ಮಾನವಾಗಿದೆ. ಅನೇಕ ಕಡೆ ಕಟ್ಟಡಗಳ ಕೆಲಸ ಪ್ರಾರಂಭವಾಗಿದೆ. ರಜೆ ಸೌಲಭ್ಯಗಳೇ ಮುಂತಾದ ಅನೇಕ ಬೇಡಿಕೆಗಳನ್ನೂ ಪೂರೈಸಲು ಸರ್ಕಾರ ಸಿದ್ಧವಾಗಿದ್ದರೂ, KAT (ಕರ್ನಾಟಕ ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯುನಲ್) ನಲ್ಲಿ ಕೇಸಿರೋದ್ರಿಂದ ತೊಡಕಾಗಿದೆಯೆಂದು ಹೇಳಲಾಗುತ್ತಿದೆ.

ರಾಷ್ಟ್ರಮಟ್ಟದ ಎಲ್ಲ ಯೂನಿಯನ್‌ಗಳು ಒಂದಾಗಿ ಸೇರಿ "ಅಖಿಲಭಾರತ ಅಂಗನವಾಡಿ ಕಾರ್ಯಕರ್ತೆಯರ ಸಂಯುಕ್ತ ಸಂಘರ್ಷ ಸಮಿತಿ"ಯನ್ನು ರಚಿಸಿಕೊಂಡು ಇತ್ತೀಚೆಗೆ ಹಣಕಾಸು ಸಚಿವ ಚಿದಂಬರಂ, ಮಧು ದಂಡವತೆ, ದೇವೇಗೌಡ (ಪ್ರಧಾನಿಯಾಗಿದ್ದಾಗ) ಎಸ್. ಆರ್. ಬೊಮ್ಮಾಯಿ ಇವರನ್ನೆಲ್ಲ ಭೇಟಿಯಾಗಿದೆ. ಬೊಮ್ಮಾಯಿಯವರು ಕಾರ್ಯಕರ್ತೆಯರ ಗೌರವಧನ ಹೆಚ್ಚಿಸುವುದಾಗಿ ಘೋಷಿಸಿದ್ದಾರೆ. ಅದೇನೇಯಾದರೂ ಗೌರವಧನದಲ್ಲಿನ ಹೆಚ್ಚಳ ಖಾಯಂ ಪರಿಹಾರ ಅಲ್ಲ. ಕೆಲಸ ಖಾಯಂಗೊಳಿಸುವುದೇ ಗುರಿ. ಈ ನಿಟ್ಟಿನಲ್ಲಿ ಈಗ ಸುಪ್ರೀಂ ಕೋರ್ಟಿನಲ್ಲಿ ಪ್ರಶ್ನಿಸಲಾಗಿರುವ KATಯ ಖಾಯಂಗೊಳಿಸುವ ತೀರ್ಮಾನಕ್ಕೆ ಎಲ್ಲ ಸಂಘಗಳೂ ಒಂದಾಗಿ ಬೆಂಬಲ ಸೂಚಿಸಲು ನಿರ್ಧರಿಸಿವೆ.

ಇತ್ತೀಚೆಗೆ ದಿನಾಂಕ 26.4.97ರಂದು ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸಂಘದ ಪದಾಧಿಕಾರಿಗಳು ನೀಡಿದ ಬೇಡಿಕೆಗಳ ಬಗ್ಗೆ ಚರ್ಚಿಸಲಾಯಿತು.

ಖಾಸಗೀಕರಣ ಕುರಿತಂತೆ, ಈಗಾಗಲೇ ಬೆಂಗಳೂರಿನ 'ಸುಮಂಗಲೀ ಸೇವಾಶ್ರಮ' ಸಂಸ್ಥೆಗೆ ಅಂಗನವಾಡಿಯ ಜವಾಬ್ದಾರಿ ಕೊಡಲಾಗಿದೆ. ಆದರೆ ಈ ಸಂಸ್ಥೆ ಆಹಾರ ಖರೀದಿ, ಸಾಗಾಣಿಕೆ, ಕಾರ್ಯಕರ್ತೆಯರ ಆಯ್ಕೆ ಮುಂತಾದ ಯಾವದೇ ವಿಷಯಗಳಲ್ಲಿ ಸರ್ಕಾರದ ಆದೇಶವನ್ನು ಪಾಲಿಸುತ್ತಿಲ್ಲವೆಂದು ಸಂಘ ತಿಳಿಸಿತು. ಈ ಬಗ್ಗೆ ಬೆಂಗಳೂರು ನಗರ ಜಿಲ್ಲೆಯ ಸಹಾಯಕ ನಿರ್ದೇಶಕರಿಂದ ವಿವರವಾದ ತಪಾಸಣೆ ನಡೆಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದು ಇಲಾಖೆಯ ಕಾರ್ಯದರ್ಶಿಗಳು ತಿಳಿಸಿದರು.

ಅಂಗನವಾಡಿ ಕೇಂದ್ರಗಳಿಗೆ ಬೇಸಿಗೆಯ ರಜೆ ನೀಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದ್ದು ಕಾನೂನು ಇಲಾಖೆಯ ಅಭಿಪ್ರಾಯಕ್ಕೆ ಕಳುಹಿಸಲಾಗಿದೆಯೆಂದೂ ಈಗಾಗಲೇ KATಯಿಂದ ಹುದ್ದೆಯ ಬಗ್ಗೆ ಆದೇಶ ಹೊರಡಿಸುವ ಹಿನ್ನಲೆಯಲ್ಲಿ ಕಾನೂನು ಇಲಾಖೆಯ ಅಭಿಪ್ರಾಯ ಬಂದ ನಂತರ ಮುಂದಿನ ಕ್ರಮ ಕೈಗೊಳ್ಳುವದಾಗಿ ಕಾರ್ಯದರ್ಶಿಗಳು ತಿಳಿಸಿದರು. ಸಂಘದ ಪದಾಧಿಕಾರಿಗಳ ಅಪೇಕ್ಷೆಯಂತೆ ಇತರ ರಾಜ್ಯಗಳಲ್ಲಿ ಕಾರ್ಯಕರ್ತೆಯರಿಗೆ ನೀಡುವ ರಜೆಯ ವಿವರಗಳನ್ನು ತರಿಸುವದೆಂದು ತೀರ್ಮಾನಿಸಲಾಯಿತು.

ಅಂಗನವಾಡಿ ಕೇಂದ್ರಗಳಿಗೆ ಉರುವಲಿಗಾಗಿ ಹಣ ಒದಗಿಸುವ ವಿಚಾರದಲ್ಲಿ, ಪ್ರತಿ ತಿಂಗಳು ಗ್ರಾಮ ಪಂಚಾಯತಿಯಿಂದ 75 ರೂ. ನೀಡಬೇಕೆಂದು ತೀರ್ಮಾನಿಸಲಾಗಿದ್ದರೂ ಈ ಹಣ ಸರಿಯಾಗಿ ತಲುಪುತ್ತಿಲ್ಲ. ಈ ಹಿನ್ನಲೆಯಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ಕೊಡುತ್ತಿರುವಂತೆ ಈ ಹಣವನ್ನು ಕಾರ್ಯಕರ್ತೆಯರ ಗೌರವಧನದೊಂದಿಗೇ ನೀಡುವ ವ್ಯವಸ್ಥೆ ಮಾಡಬೇಕೆಂದು ಇಲಾಖಾ ಕಾರ್ಯದರ್ಶಿಗಳು ಸೂಚಿಸಿದರು. ಅಲ್ಲದೆ, ಅಂಗನವಾಡಿ ಕೇಂದ್ರಗಳಿಗೆ ಶಾಲಾಪೂರ್ವ ಶಿಕ್ಷಣದ ಪುಸ್ತಕಗಳನ್ನು ನೀಡಲು ಕಾರ್ಯಕರ್ತೆಯರಿಂದ 45 ರೂಗಳನ್ನು ಅನೇಕ ಕಡೆ ವಸೂಲಿ ಮಾಡುತ್ತಿರುವುದು, ಕೆಲಸದ ಮೇಲೆ ಪ್ರಯಾಣದಲ್ಲಿದ್ದ ಕಾರ್ಯಕರ್ತೆಗೆ ಉಂಟಾದ ರೈಲು ಅಪಘಾತಕ್ಕೆ ಪರಿಹಾರ ನೀಡದಿರುವುದೇ ಮುಂತಾದ ಅನೇಕ ಇತರೇ ವಿಚಾರಗಳ ಬಗ್ಗೆಯೂ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಎಲ್ಲರೂ ಹೆಂಗಸರಾದ್ದರಿಂದ ಮತ್ತು ಅವರು ಅತ್ಯಂತ ಬಡಕುಟುಂಬಗಳಿಂದ ಬರುವಂತವರಾದ್ದರಿಂದ ಅವರು ಸ್ಥಳೀಯ ಶಕ್ತಿಗಳಿಂದ ಅನುಭವಿಸುವ ಕಿರುಕುಳ, ಹಿಂಸೆ ಅಪಾರ. ಇವರು "ಸುಳಭವಾಗಿ ಕೈಗೆಟುಕುವವರು" ಎಂಬ ಭಾವನೆ ಇರುವುದರಿಂದ ಇವರ ಮೇಲಾಗುವ ಲೈಂಗಿಕ ಶೋಷಣೆಗೆ ಎಣೆಯಿಲ್ಲ. ಯೂನಿಯನ್ ಅಂತಹ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳಲು ಪ್ರಯತ್ನಿಸುತ್ತದೆ. ಕೆಲ ವರ್ಷಗಳ ಹಿಂದೆ ರಾಯಚೂರಿನ ಕುಷ್ಟಗಿಯಲ್ಲಿ 'ಶರಣಮ್ಮ' ಎಂಬ ಸಣ್ಣ ವಯಸ್ಸಿನ ಅಂಗನವಾಡಿ ಕಾರ್ಯಕರ್ತೆಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿ ಕೊಲೆ ಮಾಡಿದ್ದನ್ನು ಪ್ರತಿಭಟಿಸಿ ರಾಜ್ಯಾದ್ಯಂತ ವ್ಯಾಪಕ ಪ್ರತಿಭಟನೆ ನಡೆಸಲಾಯಿತು.

ಅಲ್ಲದೆ, ಕಾರ್ಯಕರ್ತೆಯರು ತಮ್ಮ ಕೇಂದ್ರಗಳಿಗೆ ಬರುವ ಆಹಾರ ಪದಾರ್ಥಗಳನ್ನು "ತಿನ್ನುತ್ತಾರೆ" ಎನ್ನುವ ಅಪಾದನೆ ಅವರ ಮೇಲೆ ಯಾವಾಗಲೂ ವ್ಯಾಪಕವಾಗಿದೆ. ಅನೇಕ ಸಂದರ್ಭಗಳಲ್ಲಿ ಈ ಬಗೆಯ ಪೂರ್ವಾಗ್ರಹಿತ ಭಾವನೆಯಿಂದ ಜನ ಅವರಿಗೆ ಬೆಂಬಲಿಸಲು ಹಿಂಜರಿಯುವುದೂ ಉಂಟು. ಇದನ್ನು ತೀವ್ರವಾಗಿ ಅಲ್ಲಗಳೆಯುವ ಸಂಘವು, ದುರುಪಯೋಗ ನಡೆಯುವುದೇ ಯಾವದೋ ಮಟ್ಟಗಳಲ್ಲಿ, ಕರ್ನಾಟಕದಾದ್ಯಂತ 25 ಕೋಟಿ ರೂ. ಹೀಗೆ 'ದೊಡ್ಡ ಮಟ್ಟ'ಗಳಲ್ಲಿ ಆಹಾರ ಖರೀದಿಯಲ್ಲಿ ದುರುಪಯೋಗ ಆಗಿರುವುದರ ಬಗ್ಗೆ CBI ತನಿಖೆ ನಡೆಸಲು ಸದನ ಸಮಿತಿಯಲ್ಲಿ ತೀರ್ಮಾನಿಸಲಾಗಿರುವುದನ್ನು ಪ್ರಸ್ತಾಪಿಸುತ್ತಾ, ಕಾರ್ಯಕರ್ತೆ-ಸಹಾಯಕಿಯರಿಗೆ ಹೊಟ್ಟೆ ತುಂಬಾ ಊಟ ಕೊಡದೆ, ಅವರು 'ತಿಂದರೆಂದು' ಆಪಾದಿಸುವುದು ಎಂತಹ ಕ್ರೌರ್ಯ" ಎನ್ನುತ್ತದೆ.

ಕರ್ನಾಟಕದಾದ್ಯಂತ (ಹಾಗೆಯೇ ದೇಶದಲ್ಲೂ) ಹರಿದು ಹಂಚಿಹೋಗಿರುವ ಕಾರ್ಯಕರ್ತೆಯರನ್ನು ಸಂಘಟಿಸುವುದು ಖಂಡಿತಾ ಸುಲಭದ ಕೆಲಸವಲ್ಲ. ಸೆಂಟ್ರಲ್ ಯೂನಿಯನ್‌ಗಳು, ಉತ್ತಮ ಒಳರಚನೆಗಳಿರುವುದರಿಂದ ಹೇಗೋ ನಿಭಾಯಿಸುತ್ತಾರೆ. ಆದರೆ "ಕರ್ನಾಟಕ ರಾಜ್ಯ ಅಂ. ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸಂಘ"ದಂತ ಸ್ವತಂತ್ರ ಯೂನಿಯನ್ ಎದುರಿಸುವ ಸಮಸ್ಯೆಗಳು ಅಪಾರ. ಈಗಾಗಲೇ ಅನೇಕ ಯೂನಿಯನ್‌ಗಳಿರುವುದರಿಂದ (ಮುಖ್ಯವಾಗಿ AITUC, CITU, ಶಿವಶಂಕರ್ ನೇತೃತ್ವದ ಯೂನಿಯನ್ ಮತ್ತು ಮೇಲಿನ ಸಂಘ)ಸದಸ್ಯರು ಒಂದು ಬಿಟ್ಟು ಮತ್ತೊಂದನ್ನು ಸೇರುವ "ಬೆದರಿಕೆ" ಹಾಕುತ್ತಾರೆ. ಮುಂಚೆಯೆಲ್ಲ ಹಂಚಿಕೊಂಡು ಸಹಭಾಗಿತ್ವದೊಂದಿಗೆ ಕೆಲಸ ಮಾಡುತ್ತಿದ್ದ ಈ ಎಲ್ಲ ಯೂನಿಯನ್‌ಗಳು ಇಂದು ಆ ಮಟ್ಟದ ಸಹಭಾಗಿತ್ವ ಹಂಚಿಕೊಳ್ಳದಿದ್ದರೂ ವಿಸ್ತಾರ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳುವಾಗ ಒಂದಾಗಿ ಬರುವುದುಂಟು. ಆದರೂ ಹೆಚ್ಚಿನ ಸಹಭಾಗಿತ್ವದ ಅಗತ್ಯವಿದೆ. ಅಲ್ಲದೆ ಮಹಿಳೆಯರನ್ನು ಅವರ ಕುಟುಂಬದ ಜವಾಬ್ದಾರಿಗಳಿಂದಾಗಿ ಸಭೆ ಸೇರಿಸುವುದು ತುಂಬಾ ಕಷ್ಟ. ಅಧಿಕಾರಿಗಳ ಬೆದರಿಕೆಯ ಮಾತಿಗೆ ತುಂಬಾ ಹೆದರುತ್ತಾರೆ. ಒತ್ತಡಗಳಿಗೆ ಬಲುಬೇಗ ತುತ್ತಾಗುತ್ತಾರೆ. ಅಲ್ಲದೆ ಸರ್ಕಾರದ ಯೂನಿಯನ್‌ಗಳು (ಮ್ಯಾನೇಜ್‌ಮೆಂಟ್ ರಚಿಸಿದ) ಒಂದಾದ ಶಕ್ತಿಯನ್ನು ಮುರಿಯುವಲ್ಲಿ ಕೆಲಸ ಮಾಡುತ್ತವೆ.

ಅದೇನೇಯಾದರೂ ಲಕ್ಷಾಂತರ ಬಡಮಹಿಳೆಯರನ್ನು ಕೆಲಸದ ಹಕ್ಕಿಗಾಗಿ ಹೋರಾಡುವಂತೆ ಸಂಘಟಿಸಿ ಅನೇಕ ಮಹತ್ತರ ಸಾಧನೆಗಳನ್ನು ಮಾಡಿರುವ ಹಿರಿಮೆ ಈ ಎಲ್ಲ ಸಂಘಗಳಿಗಿದೆ.

(ಈ ಲೇಖನವನ್ನು "ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸಂಘ (ರಿ)" ಜತೆ ಸಮಾಲೋಚಿಸಿ ಸಿದ್ಧಪಡಿಸಲಾಗಿದೆ.)

ಕಳೆದ ಸಂಚಿಕೆಯಲ್ಲಿ ಡಾ. ವಿಜಯಾ ಅವರಿಗೆ ಅವರ 'ಬಂದರೊ ಬಂದರು' ಕೃತಿಗೆ ರಾಜ್ಯ ನಾಟಕ ಅಕಾಡೆಮಿಯ ಪ್ರಶಸ್ತಿ ಸಿಕ್ಕಿತೆಂದು ತಪ್ಪಾಗಿ ಪ್ರಕಟಿಸಿದ್ದೇವು. ಬಂದರೂ ಬಂದರು ಕೃತಿಗೆ ಬಹಳ ಹಿಂದೆಯೆ ರಾಜ್ಯ ಅಕಾಡೆಮಿಯ ಪ್ರಶಸ್ತಿ ದೊರೆತಿತ್ತು. ಇತ್ತೀಚೆಗೆ ಡಾ. ವಿಜಯಾ ಅವರಿಗೆ ಅವರು ರಂಗಭೂಮಿಗೆ ಸಲ್ಲಿಸಿರುವ ಸೇವೆಯನ್ನು ಗುರುತಿಸಿ ರಾಜ್ಯ ನಾಟಕ ಅಕಾಡೆಮಿಯು ಫೇಲೊಶಿಪ್ ನೀಡಿ ಗೌರವಿಸಿದೆ. ತಪ್ಪಾಗಿ ಪ್ರಕಟಿಸಿದ್ದಕ್ಕೆ ಮಾನಸ ಬಳಗವು ಓದುಗರಲ್ಲಿ ಕ್ಷಮೆ ಕೋರುತ್ತದೆ.

ಕಳೆದ ಸಂಚಿಕೆಯಲ್ಲಿ 'ಸಮಾನ ನಾಗರೀಕ ಸಂಹಿತೆ - ಪ್ರತಿಯೊಬ್ಬ ಮಹಿಳೆಯ ಪ್ರಾಥಮಿಕ ಹಕ್ಕು' ಎಂಬ ಅನುವಾದಿತ ಲೇಖನವು ಮೂಲವಾಗಿ 'ಸಹೇಲಿ' ಮಹಿಳಾ ಸಂಪನ್ಮೂಲ ಸಂಸ್ಥೆಯವರದು ಹೆಸರು ಬಿಟ್ಟು ಹೋಗಿರುವುದಕ್ಕೆ ಕ್ಷಮೆ ಕೋರುತ್ತೇವೆ.

- ಸಂ. ಮಂ.

ಓದುಗರಲ್ಲಿ

ಪತ್ರಿಕೆ ನಿಮ್ಮ ಕೈ ಸೇರಿದೊಡನೆ ಆ ಸಂಚಿಕೆಯಲ್ಲಿ ಪ್ರಕಟವಾದ ಲೇಖನ, ಇತ್ಯಾದಿಗಳ ಬಗ್ಗೆ ಓದುಗರಿಂದ ಪ್ರತಿಕ್ರಿಯೆಯನ್ನು ಆಹ್ವಾನಿಸುತ್ತಿದ್ದೇವೆ. ಈ ಪ್ರತಿಕ್ರಿಯೆಗಳನ್ನು "ಓದುಗರ ವಿಭಾಗದಲ್ಲಿ" ಪ್ರಕಟಿಸಲಾಗುವುದು.

- ಸಂ. ಮಂಡಳಿ

ಮನೆಕೆಲಸಕ್ಕೆ ಮನ್ನಣೆ ಬೇಡಿ ಸಂಘಟಿತಗೊಂಡವರು

ವೇಗವಾಗಿ ಬೆಳೆಯುತ್ತಿರುವ ಬೆಂಗಳೂರಿನಂತ ನಗರದಲ್ಲಿ ಕೆಲಸ ಅರಸುತ್ತಾ ಬರಪೀಡಿತ ಪ್ರದೇಶಗಳಿಂದ ವಲಸೆ ಬರುತ್ತಿರುವವರ ಸಂಖ್ಯೆ ದಿನೇ ದಿನೇ ಉಲ್ಬಣಗೊಳ್ಳುತ್ತಿದ್ದಂತೆ ಅವರ ಅಗ್ಗದ ಶ್ರಮವನ್ನು ಹೇಗೆಂದರಾಗೆ ಬಳಸಿಕೊಳ್ಳುವ ಪ್ರವೃತ್ತಿಯೂ ತೀವ್ರವಾಗುತ್ತಿದೆ. ಮುಖ್ಯವಾಗಿ ಕೃಷಿ ಕೂಲಿ ಹಿನ್ನಲೆಯಿಂದ ಬರುವ ಬಡಜನ ವಿಶೇಷ ಕುಶಲತೆಯುಳ್ಳ ಕೆಲಸಗಳನ್ನ ತೆಗೆದುಕೊಳ್ಳುವ ಸ್ಥಿತಿಯಲ್ಲಿರದೆ ತಮ್ಮ ದೈಹಿಕ ಶ್ರಮವನ್ನು ಮಾತ್ರ ಮಾರಿಕೊಳ್ಳಲು ಮುಂದಾಗುತ್ತಾರೆ. ಬೆಂಗಳೂರು ಕಾಂಕ್ರೀಟ್ ನಗರವಾಗುತ್ತಿರುವ ಇಂದಿನ ಸಂದರ್ಭದಲ್ಲಿ ತುಂಬಾ ನೇರವಾಗಿ ಇವರು ತೊಡಗಿಕೊಳ್ಳಲು ಅವಕಾಶವಿರುವುದು ಕಟ್ಟಡ ನಿರ್ಮಾಣ ಕೆಲಸದಲ್ಲಿ. ಅದೇ ಸಮಯದಲ್ಲಿ ಹೆಂಗಸರು ತಮಗೆ ಒಂದೇ ಒಂದು ಪರಿಣಿತಿಯಿರುವ ಕೆಲಸವಾದ ಮನೆಕೆಲಸದಲ್ಲಿ ತೊಡಗಿಕೊಳ್ಳುವುದು ಸರ್ವೇ ಸಾಮಾನ್ಯ. ಹೆಂಗಸರು ತಮ್ಮ ಮನೆಗಳಲ್ಲಿ ಬಿಟ್ಟಿಗೆ ದುಡಿಯುವುದೂ ಮತ್ತು ಬಡ ಹೆಂಗಸರು ಶ್ರೀಮಂತರ ಮನೆಗಳ ಕೆಲಸಗಳನ್ನೂ ಮಾಡಿ ಸ್ವಲ್ಪ ಹಣ ಗಳಿಸುವುದೂ ಅನಾದಿ ಕಾಲದಿಂದಲೂ ಬೆಳೆದು ಬಂದಿರುವ ಪ್ರವೃತ್ತಿ. ಹಿಂದಿನ ಫ್ಯೂಡಲ್ ಸಮಾಜಗಳಲ್ಲಿ ತಮ್ಮ ಮನೆಯ ಕೆಲಸಗಳನ್ನು ಮಾಡಲು ಇತರರನ್ನು ನೇಮಿಸಿಕೊಳ್ಳುವ ಸಾಮರ್ಥ್ಯ/ಅವಕಾಶವಿದ್ದದ್ದು ಕೆಲವೇ ಶ್ರೀಮಂತ ಕುಟುಂಬಗಳಿಗೆ. ಅದು ಕುಟುಂಬದ ಪ್ರತಿಷ್ಟೆಯ ದ್ಯೋತಕ ಕೂಡ ಆಗಿದ್ದಿತು. ಆದರೆ ಇಂದಿನ ಮಾರುಕಟ್ಟೆಮುಖಿ ಬೆಳವಣಿಗೆಯ ಸಂದರ್ಭದಲ್ಲಿ, ಅದೂ ಬೆಂಗಳೂರಂತಾ ದೈತ್ಯ ನಗರಗಳಲ್ಲಿ ತೀರಾ ಸಾಮಾನ್ಯ ಮಧ್ಯಮವರ್ಗಿಗಳ ಕುಟುಂಬಗಳಲ್ಲೂ ತಮ್ಮ ಮನೆಕೆಲಸ ಮಾಡಲು "ಕೆಲಸದವಳನ್ನು" ನೇಮಿಸಿಕೊಳ್ಳುವುದು ಪ್ರವೃತ್ತಿಯಾಗಿದೆ. ದುಡಿಯುವ ಕೈಗಳಿಗೆ ಕೆಲಸ ಅರಸುತ್ತಾ ಸಿಕ್ಕ ನಾಲ್ಕು ಕಾಸಿನಲ್ಲಿ ಮಕ್ಕಳು ಮರಿ-ಕುಟುಂಬದ ಹೊಟ್ಟೆ ಪಾಡು ನಡೆಯಲೆಂದು ಆಶಿಸುತ್ತಾ ನಗರ ಸೇರುವ ಬಡವರ ಶ್ರಮ ಎಷ್ಟು ಅಗ್ಗಕ್ಕೆ ಸಿಗುತ್ತದೆಂದರೆ, ತಿಂಗಳಿಗೆ ನೂರು ರೂಪಾಯಿಗಳಿಗೂ ಕಡಿಮೆ ದುಡ್ಡಿನಲ್ಲಿ ಮನೆಕೆಲಗಳನ್ನು ಮಾಡಿಕೊಂಡು ಬಿಡಬಹುದು! ಮನೆ ಗುಡಿಸಿ ಒರೆಸುವುದು, ಬಟ್ಟೆ ಒಗೆಯುವುದು, ಮುಸುರೆ ತಿಕ್ಕುವುದು, ಕಸ ಚೆಲ್ಲಿ ಬರುವುದು, ಅಂಗಡಿಯಿಂದ ಸಾಮಾನು ತರುವುದು, ಬಾತ್‌ರೂಂ ತೊಳೆಯುವುದು, ಹೂತೋಟಕ್ಕೆ ನೀರಾಕುವುದು, ಚಿಕ್ಕ ಮಕ್ಕಳನ್ನು ನೋಡಿಕೊಳ್ಳುವುದು, ಮನೆ ಕಾಯುವುದು, ಹಿಟ್ಟಿನ ಗಿರಣಿಗೆ ಹೋಗುವುದು..... ಹೀಗೆ ಪಟ್ಟಿ ಮಾಡುತ್ತಾ ಹೋದರೆ ಕೊನೆಯಿಲ್ಲ. ಇವನ್ನೆಲ್ಲಾ ಗಂಟೆಗಳಲ್ಲಿ ಲೆಕ್ಕ ಹಾಕಿದರೆ ಒಮ್ಮೊಮ್ಮೆ ಇಡೀ ದಿನ ಆಗುವುದುಂಟು. ಒಂದು ಸಮೀಕ್ಷೆಯ ಪ್ರಕಾರ ಇವರ ಎರಡರಿಂದ ಹದಿನೈದು ಗಂಟೆಗಳ ಕೆಲಸಕ್ಕೆ ಇವರಿಗೆ ತಿಂಗಳಿಗೆ ಸಿಗುವುದು 60ರಿಂದ 450 ರೂಪಾಯಿಗಳು ಮಾತ್ರ. ಅಲ್ಲದೆ "ಮನೆ ಕೆಲಸದವಳು" ಎಂದೇ ನಾಮಾಂಕಿತಗೊಂಡ ಇವರನ್ನು ನೋಡುವ ದೃಷ್ಟಿ ಅತ್ಯಂತ ಹೀನಾಯವಾದದ್ದು. ಜತೆಗೆ ಕೆಲಸ ಮಾಡುವ ಸಮಯದಲ್ಲಿ ಇವರಿಗೆ ಅನೇಕ ಅಪಘಾತಗಳಾಗುವುದುಂಟು. ಇತ್ತೀಚಿನ ದಿನಗಳಲ್ಲಿ ಮನೆಕೆಲಸಕ್ಕೆ ಪೂರಕವಾದ ಅನೇಕ ಮೆಷಿನ್ನುಗಳನ್ನು ಇವರು ಉಪಯೋಗಿಸ ಬೇಕಾಗಿರುವುದರಿಂದ ಅಪಘಾತದ ಪ್ರಮಾಣ ಹೆಚ್ಚಾಗಿದೆ. ಜತೆಗೆ ರಾಸಾಯನಿಕಗಳ ಮಯವಾದ ಪಾತ್ರೆ ತೊಳೆಯುವ ಪುಡಿ, ಬಟ್ಟೆ ಒಗೆಯುವ ಸೋಪು ಪುಡಿಗಳಿಂದ ಇವರ ಕೈಕಾಲುಗಳಿಗೆ ವಿಚಿತ್ರ ಚರ್ಮರೋಗ ತಗಲಿಕೊಳ್ಳುತ್ತದೆ. ಇದು ಸಾಲದೆಂಬಂತೆ ಮನೆಕೆಲಸದವರೆಂದರೆ ಕಳ್ಳರು ಎಂಬ ನಂಬಿಕೆ ಸರ್ವವ್ಯಾಪಿಯಾಗಿದೆ. ತಿಂಡಿ-ತಿನಿಸುಗಳಿಂದ ಹಿಡಿದು ಒಡವೆ-ವಸ್ತ್ರಗಳವರೆಗೂ ಮನೆಯಲ್ಲಿ ಏನೊಂದು ಕಾಣೆಯಾದರೂ ಕೆಟ್ಟ ನೋಟ ಮೊದಲಿಗೆ ನಾಟುವುದು ಇವರ ಮೇಲೆ (ಇತ್ತೀಚೆಗೆ ಪತ್ರಿಕೆಗಳಲ್ಲಿ ಬಾರಿ ಪ್ರಚಾರ ಪಡೆದ 'ಕಾವೇರಿ'ಯ ಪ್ರಕರಣವನ್ನು ನೆನಪಿಸಿಕೊಳ್ಳಬಹುದು ಇಲ್ಲಿ). ಇನ್ನು ಪಟ್ಟಣಗಳ ಮನೆಗಳಲ್ಲಿ ಕೆಲಸ ಮಾಡಲು ದೂರ ದೂರುಗಳಿಂದ ಮಾರಿಕೊಳ್ಳಲ್ಪಟ್ಟ ಸಣ್ಣ ವಯಸ್ಸಿನ ಮಕ್ಕಳ (ಬಹುಪಾಲು ಹೆಣ್ಣು ಮಕ್ಕಳು) ಸ್ಥಿತಿಯಂತೂ ಶೋಚನೀಯ. ತಮ್ಮದೇ ವಯಸ್ಸಿನ ಮಕ್ಕಳನ್ನು ನೋಡಿಕೊಳ್ಳುವುದರಿಂದ ಹಿಡಿದು ಮನೆಯ ಪ್ರತಿಯೊಂದು ಕೆಲಸವನ್ನೂ ತೂಗಿಸಿಕೊಂಡು ಹೋಗಬೇಕಾದ ಈ ಕಂದಮ್ಮಗಳು ಮನೆ ಮಾಲೀಕರಿಗೆ ಖರೀದಿ ಮಾಡಿದ ವಸ್ತುಗಳಷ್ಟೇ ಆಗಿರುತ್ತಾರೆ. ಒಟ್ಟಾರೆಯಲ್ಲಿ ಇವರ ಮೇಲೆ ನಡೆಯುವ ದೌರ್ಜನ್ಯ ಯಾರ ಗಮನಕ್ಕೂ ಬಾರದೆ ಹೋಗಿಬಿಡುತ್ತದೆ. ತೀವ್ರ ಅಸಂಘಟಿತ ಸ್ವರೂಪದ ಇವರನ್ನು ಯಾವ ಟ್ರೇಡ್ ಯೂನಿಯನ್‌ಗಳೂ ಸಂಘಟಿಸಿ ಅವರ ಕೆಲಸದ ಹಕ್ಕುಗಳನ್ನು ಪ್ರತಿಪಾದಿಸುವ ಪ್ರಯತ್ನ ಮಾಡಿರಲಿಲ್ಲ. ಆದರೆ ಈಗ್ಗೆ ಕೆಲವು ವರ್ಷಗಳಿಂದ ಬೆಂಗಳೂರಿನಲ್ಲಿ ಇವರನ್ನು ಸಂಘಟಿಸುವ ಎರಡು ಪ್ರತ್ಯೇಕ ಪ್ರಯತ್ನಗಳು ನಡೆದಿರುವುದು ತುಂಬಾ ಸಂತೋಷದ ಸಂಗತಿ.

1989ರಲ್ಲಿ ನೋಂದಣಿಗೊಂಡಿರುವ "ಬೆಂಗಳೂರು ಗೃಹ ಕಾರ್ಮಿಕರ ಸಂಘ (ರಿ)" ಎನ್ನುವ ಮನೆಕೆಲಸಗಾರರ ಯೂನಿಯನ್ 8,000 ಮನೆ ಕೆಲಸಗಾರರು ಬೆಂಗಳೂರಿನ ಕೊಳಚೆ, ಅರೆ ಕೊಳಚೆ ಪ್ರದೇಶಗಳಲ್ಲಿ ಇರುವುದನ್ನು ಗುರುತಿಸಿದ್ದರೆ ಅಖಿಲ ಭಾರತ ಮಟ್ಟದ ವ್ಯಾಪ್ತಿ ಹೊಂದಿರುವ "ಗೃಹ ಕಾರ್ಮಿಕರ ಒಕ್ಕೂಟ" ಎನ್ನುವ ಮತ್ತೊಂದು ಯೂನಿಯನ್ ಮನೆಕೆಲಸಗಾರರ ಒಂದು ಸಮೀಕ್ಷೆಯನ್ನೇ ನಡೆಸಿದೆ. ಮನೆಕೆಲಸದವರು ಮಾಡುವ ಕೆಲಸದ ವಿವರ, ಅದಕ್ಕೆ ತಗುಲುವ ವೇಳೆ, ಅವರಿಗೆ ದೊರೆಯುವ ವೇತನ, ಕೆಲಸದ ಪರಿಸ್ಥಿತಿ ಈ ಎಲ್ಲ ವಿವರಗಳನ್ನುಳ್ಳ ಅತಿ ಉಪಯುಕ್ತ ಸಮೀಕ್ಷೆ ಇದು. ಇವೆರಡೂ ಯೂನಿಯನ್‌ಗಳು ಇತ್ತೀಚೆಗೆ ಮೇ ದಿನದ ಅಂಗವಾಗಿ ಬೆಂಗಳೂರಿನಲ್ಲಿ ಸಮಾವೇಶ ಮತ್ತು ರ್‍ಯಾಲಿಗಳನ್ನು ನಡೆಸಿದವು.

ದಿನಾಂಕ 28.5.97ರಂದು NGO ಭವನದಲ್ಲಿ "ಬೆಂಗಳೂರು ಗೃಹ ಕಾರ್ಮಿಕರ ಸಂಘ (ರಿ)" ನಡೆಸಿದ ಸಮಾವೇಶದಲ್ಲಿ ಸದಸ್ಯರು

ಕಿಕ್ಕಿರಿದು ತುಂಬಿದ್ದರು. ಕೂರಲು, ನಿಲ್ಲಲು ಸ್ಥಳವಿಲ್ಲದೆ ಹೊರಗಡೆಯೇ ನಿಂತು ಭಾಗವಹಿಸಿದ್ದರು. ಸಂಘದ ಮುಖಂಡರು, ಕಾರ್ಮಿಕ ನಾಯಕರು. ಮಾನವ ಹಕ್ಕುಗಳ ಕಾರ್ಯಕರ್ತರು ಮಾತನಾಡಿದ ಈ ಸಭೆಯಲ್ಲಿ ಕಾರ್ಮಿಕ ರಾಜ್ಯ ಸಚಿವ ಶ್ರೀ ಸತ್ಯನಾರಾಯಣ ಅವರು ಉಪಸ್ಥಿತರಿದ್ದರು. ಸಂಘದ ಅಧ್ಯಕ್ಷೆ ಮನೆಕೆಲಸಗಾರಳೇ ಆದ 'ಸರೋಜಮ್ಮ' ಸಚಿವರಿಗೆ ಬೇಡಿಕೆಗಳನ್ನೊಳಗೊಂಡ ಮನವಿಯನ್ನು ಸಲ್ಲಿಸಿ ಅತ್ಯಂತ ಭಾವುಕವಾಗಿ ಮಾತನಾಡಿದರು. "ನಾವು ಇಡೀ ಮನೆಯನ್ನು ಥಳಥಳಿಸುವಂತೆ ಮಾಡುತ್ತೇವೆ, ನಮ್ಮನ್ನು ಕೆಲಸದವಳು ಅಂತ ತುಚ್ಛೀಕರಿಸುತ್ತಾರೆ. ನಮ್ಮನ್ನ ಕಳ್ಳಿ ಅಂತಾರೆ, ಆದರೆ ನಾವು ಕದಿಯಲು ಹೋಗುವುದಿಲ್ಲ. ನಮ್ಮ ಹೊಟ್ಟೆ, ಮಕ್ಕಳು ಮರಿ ಹೊಟ್ಟೆ ತುಂಬಿಸಲಿಕ್ಕೆ ದುಡಿಯಲು ಹೋಗುತ್ತೇವೆ, ತಿಂಗಳೆಲ್ಲ ದುಡಿದರೆ ಕೊನೆಯಲ್ಲಿ ಕೈಯಿಗೆ ಪುಡಿಗಾಸು. ಯಾತಕ್ಕೂ ಸಾಲುವುದಿಲ್ಲ" ಎಂದ ಆಕೆ ತಾನು ಕಾವೇರಿಯನ್ನು ನೋಡಲು ಹೋದ ಸನ್ನಿವೇಶವನ್ನು ವಿವರಿಸುವಾಗ ಗದ್ಗದರಾದರು. ಆಕೆಯ ಮನವಿ ಸ್ವೀಕರಿಸಿದ ಕಾರ್ಮಿಕ ಸಚಿವರು ತಾವೂ ಭಾವುಕರಾಗೇ ಮಾತನಾಡಿ 'ಮನೆಕೆಲಸ'ವನ್ನು ಈ ಹಿಂದಿನಂತೆ ಕನಿಷ್ಠ ಕೂಲಿಯ ಷೆಡ್ಯೂಲ್‌ಗೆ ಸೇರಿಸಲು ತಾವು ಪ್ರಯತ್ನಿಸುವದಾಗಿ ಭರವಸೆ ನೀಡಿದರು. (ಈ ಹಿಂದೆ ಬಿ. ಎಸ್. ಕಾಂತಾ ಎಂಬ ಕಾರ್ಮಿಕ ಸಚಿವರಿದ್ದ ಸಂದರ್ಭದಲ್ಲಿ ಮನೆಕೆಲಸವನ್ನು ಕನಿಷ್ಠ ಕೂಲಿಯ ಷೆಡ್ಯೂಲ್‌ಗೆ ಸೇರಿಸಿದ್ದರು. ಆದರೆ ಎರಡೇ ವರ್ಷಗಳಲ್ಲಿ ಯಾರ ಗಮನಕ್ಕೂ ಬಾರದ ರೀತಿಯಲ್ಲಿ ಇದನ್ನು ಷೆಡ್ಯೂಲ್‌ನಿಂದ ತೆಗೆದು ಹಾಕಲಾಯಿತು)

ದಿನಾಂಕ 30.5.97ರಂದು 'ಗೃಹ ಕಾರ್ಮಿಕರ ಒಕ್ಕೂಟ' ಹಮ್ಮಿಕೊಂಡಿದ್ದ ರ್‍ಯಾಲಿಯಲ್ಲಿ ಕೂಡ ಅನೇಕ ಮನೆಕೆಲಸಗಾರರು ಭಾಗವಹಿಸಿದ್ದರು. ಸಿಲ್ವರ್ ಜ್ಯೂಬಲಿ ಪಾರ್ಕ್‌ನಿಂದ ಕೆ. ಆರ್. ವೃತ್ತದವರೆಗೆ ಬಂದ ಮೆರವಣಿಗೆಯ ಉದ್ದಕ್ಕೂ ಹೆಂಗಸರು ತಮ್ಮ ದುಡಿಮೆಗೆ ಮಾನ್ಯತೆ ದೊರೆಯಬೇಕೆಂದು ನಿರಂತರವಾಗಿ ಘೋಷಣೆ ಕೂಗುತ್ತಿದ್ದರು. ಕೆ. ಆರ್. ವೃತ್ತದಲ್ಲಿ ಸಭೆ ಸೇರಿ ಕಾರ್ಮಿಕ ಮುಖಂಡರು ಮಾತನಾಡಿದ ನಂತರ ಸಚಿವರಿಗೆ ಬೇಡಿಕೆಗಳ ಮನವಿ ಸಲ್ಲಿಸಲಾಯಿತು.

ಇವೆರಡೂ ಯೂನಿಯನ್‌ಗಳ ಮುಖ್ಯ ಬೇಡಿಕೆಗಳೆಂದರೆ -

(1) ಮನೆಕೆಲಸಗಾರರನ್ನು ಈ ಹಿಂದಿನಂತೆ, ಕನಿಷ್ಠ ವೇತನ ಕಾಯಿದೆಯ ಪರಿವ್ಯಾಪ್ತಿಯಲ್ಲಿ ಅಳವಡಿಸಿ ಸೂಕ್ತ ಕನಿಷ್ಠ ವೇತನ ನಿಗದಿಪಡಿಸಬೇಕು.

(2) ಮನೆಕೆಲಸಗಾರರು ದುಡಿಯುವ ಸ್ಥಳಗಳಲ್ಲಿ, ಮನೆಗಳಲ್ಲಿ ಅವರ ಮೇಲೆ ನಡೆಯುವ ಹಿಂಸೆ, ದೌರ್ಜನ್ಯ, ಶೋಷಣೆಗಳನ್ನು ತಡೆಯಲು ಮತ್ತು ಕಳ್ಳತನದ ಅಪಾದನೆಯ ನೆವದಲ್ಲಿ ಪೋಲೀಸರಿಂದ ನಡೆಯುವ ಅಮಾನುಷ ಹಿಂಸೆ-ಕಿರುಕುಳಗಳನ್ನು ನಿಯಂತ್ರಿಸುವ ಸಮರ್ಪಕ ಕಾನೂನುಗಳನ್ನು ಅನುಷ್ಠಾನಗೊಳಿಸಬೇಕು.

(3) ಕೆಲಸದ ಸಮಯದಲ್ಲಿ ಉಂಟಾಗುವ ಅಪಘಾತ-ಅನಾಹುತಕ್ಕೆ ಸೂಕ್ತ ಪರಿಹಾರ ಒದಗಿಸಬೇಕು.

(4) ಮನೆ ಕೆಲಸಗಾರರ ಸೇವೆಯನ್ನು ನಿಯಂತ್ರಿಸಲು ಮತ್ತು ಇವರನ್ನು ಕಾನೂನಿನ ಚೌಕಟ್ಟಿನಡಿ ತಂದು ಸಂರಕ್ಷಿಸಲು ಅನುವಾಗುವಂತೆ ಅವರ ಸಂಘದ ಪ್ರತಿನಿಧಿಗಳು ಮತ್ತು ಕಾರ್ಮಿಕ ಇಲಾಖೆಯ ಅಧಿಕಾರಿಗಳನ್ನು ಒಳಗೊಂಡ 'ದ್ವಿ ಸದಸ್ಯ' ಮಂಡಳಿಯನ್ನು ರಚಿಸಬೇಕು.

(5) 'ದ್ವಿ ಸದಸ್ಯ' ಮಂಡಳಿ ನಿರ್ದೇಶಿಸುವ ಮತ್ತು ಸಮನ್ವಯಗೊಳಿಸುವ ಸಾಮಾಜಿಕ ಸುರಕ್ಷಾ ಕಾರ್ಯಕ್ರಮಗಳನ್ನು ಈ ಕೆಲಸಗಾರರಿಗೆ ದಕ್ಕುವಂತೆ ಮಾಡಬೇಕು ಮತ್ತು ಅದಕ್ಕಾಗಿ ಸರ್ಕಾರವು ಕಲ್ಯಾಣನಿಧಿಯೊಂದನ್ನು ಸ್ಥಾಪಿಸಬೇಕು.

(6) ರಾಜ್ಯ ಮಟ್ಟದಲ್ಲಿ ಮನೆ ಕೆಲಸಗಾರರ ಸ್ಥಿತಿಗತಿಯ ಬಗ್ಗೆ ಕೂಲಂಕುಷ ಅಧ್ಯಯನ ನಡೆಸಲು ಸರ್ಕಾರಿ ಸಮಿತಿ ಯೊಂದನ್ನು ರೂಪಿಸಬೇಕು.

(7) ನಾಗರೀಕ ಸೌಲಭ್ಯಗಳಾದ ವಸತಿ, ನೀರು, ವಿದ್ಯುತ್, ಶೌಚಾಲಯ ಇವರಿಗೂ ದೊರೆಯುವಂತಾಗಬೇಕು.

ಮನೆಕೆಲಸಗಾರರಿಗೆ ಕನಿಷ್ಠ ವೇತನವನ್ನು ನಿಗದಿ ಪಡಿಸುವಲ್ಲಿ "ಬೆಂಗಳೂರು ಗೃಹ ಕಾರ್ಮಿಕರ ಸಂಘ (ರಿ)" ಕೆಲವು ಉಪಯುಕ್ತ ಸಲಹೆಗಳನ್ನು ಕೊಟ್ಟಿದೆ :

15ನೇ ಅಖಿಲ ಭಾರತ ಕಾರ್ಮಿಕ ಸಮಾವೇಶದಲ್ಲಿ ಅಗತ್ಯ ಕನಿಷ್ಟ ಕೂಲಿಯನ್ನು ನಿಗದಿಪಡಿಸಲು ತಜ್ಞ ನ್ಯೂಟ್ರಿಷನಿಸ್ಟ್ ಡಾ. ಐಕ್ರಾಯ್ಡ್ ಅವರು ರೂಪಿಸಿದ ಸಮತೋಲನ ಆಹಾರದ ಫಾರ್ಮುಲಾ, ಬಟ್ಟೆ, ವಸತಿ ಮತ್ತು ಇತರೆ ಖರ್ಚುಗಳನ್ನಾಧರಿಸಿದ ಪಟ್ಟಿಯನ್ನು ಮಂಡಿಸಲಾಯಿತು ಮತ್ತು ಇದನ್ನು ಸುಪ್ರೀಂಕೋರ್ಟ್ ಅಂಗೀಕರಿಸಿತು. ಇದರ ಪ್ರಕಾರ (1) ಕನಿಷ್ಟ ಕೂಲಿ ನಿಗದಿಪಡಿಸುವಾಗ ಕುಟುಂಬವೊಂದಕ್ಕೆ ಇಬ್ಬರು ದೊಡ್ಡವರು ಮತ್ತು ಇಬ್ಬರು ಮಕ್ಕಳು ಎಂದು ಪರಿಗಣನೆಗೆ ತೆಗೆದುಕೊಳ್ಳಬೇಕು. (2) ಪ್ರತಿ ವ್ಯಕ್ತಿಗೆ 2,700 ಕ್ಯಾಲರಿಗಳ ಆಹಾರ ಸಿಗಬೇಕು (ಇದಕ್ಕೆ ವಿಸ್ತಾರವಾದ ವಿವರಗಳಿವೆ). (3) ಬಟ್ಟೆ-ವ್ಯಕ್ತಿಯೊಬ್ಬರಿಗೆ 18 ಗಜ ಅಥವಾ 4 ಜನರ ಕುಟುಂಬಕ್ಕೆ 72 ಗಜ. (4) ವಸತಿ - ಸರ್ಕಾರೀ ಕೈಗಾರಿಕಾ ವಸತಿ ನೀತಿಯನ್ನನುಸರಿಸಿ ಬಾಡಿಗೆ. (5) ಎಣ್ಣೆ, ಇಂಧನ, ವಿದ್ಯುಚ್ಛಕ್ತಿ ಮತ್ತು ಇನ್ನಿತರ ಖರ್ಚುಗಳಿಗೆ ಮೂಲವೇತನದ 20%. (6) ಮಕ್ಕಳ ಶಿಕ್ಷಣ, ವೈದ್ಯಕೀಯ ಸೇವೆ, ಮದುವೆ, ನಿವೃತ್ತಿ, ಮನರಂಜನೆ, ಹಬ್ಬ-ಹರಿದಿನ ಮುಂತಾದವುಗಳಿಗೆ ಮೂಲವೇತನದ 25%, (ರೆಪ್ಟಾಕೋಸ್ ಬ್ರೆಟ್ ಮೊಕದ್ದಮೆಯಲ್ಲಿ ನ್ಯಾಯಾಲಯ ಇದನ್ನು ಅನುಮೋದಿಸಿತ್ತು).

ಮೇಲಿನ ಫಾರ್ಮುಲಾವನ್ನಾಧರಿಸಿಯೇ 'ರಾಷ್ಟ್ರೀಯ ಕಾರ್ಮಿಕ ಕೇಂದ್ರ'ವು 1996ರ ಬೆಲೆಯ ಸೂಚ್ಯಾಂಕದ ಪ್ರಕಾರ ದಿನವೊಂದಕ್ಕೆ 125 ರೂಗಳನ್ನು ಅಗತ್ಯ ಕನಿಷ್ಟ ಕೂಲಿಯಾಗಿ ತೀರ್ಮಾನಿಸಿತು. ಇದೇ ಆಧಾರದಲ್ಲಿ ಮನೆಕೆಲಸಗಾರರಿಗೂ ಕನಿಷ್ಟ ವೇತನ ನಿಗದಿ ಪಡಿಸಬೇಕೆಂದು ಸಂಘ ಒತ್ತಾಯಿಸುತ್ತದೆ. ಈ ಪ್ರಕಾರ ಅವರಿಗೆ ಗಂಟೆಯೊಂದರ ಕೆಲಸಕ್ಕೆ 15 ರೂಗಳನ್ನು ನಿಗದಿಪಡಿಸಬೇಕು. ಅವರು ಅಲ್ಪಾವಧಿಯ ಕೆಲಸಗಾರರಾದ್ದರಿಂದ ಇದರ ಪ್ರಾಮುಖ್ಯತೆ ಇಮ್ಮಡಿಸುತ್ತದೆ. ಹಗಲು ಕಳೆದು ಬೆಳಗಾಗುವುದರೊಳಗೆ ಈ ಹೆಚ್ಚಳ ತರಲು ಸಾಧ್ಯವಾಗದಿದ್ದರೆ ಬೇರೆ ಬೇರೆ ತುಟ್ಟಿ ಭತ್ಯೆಗಳನ್ನು ನೀಡುವ ಮೂಲಕ ಇದನ್ನು ಸರಿದೂಗಿಸ ಬೇಕು. ಕನಿಷ್ಟ ಮೂರು ವರ್ಷಗಳಲ್ಲಿ ಇದು ಪೂರ್ಣ ಜಾರಿಯಾಗಬೇಕು. ಮತ್ತು ಕನಿಷ್ಟ 2 ವರ್ಷಗಳಿಗೊಮ್ಮೆ ಇದು ಪರಿಷ್ಕರಣಗೊಳ್ಳಬೇಕು. ಅಥವಾ ಕನ್ಸ್ಯೂಮರ್ ಪ್ರೈಸ್ ಇಂಡೆಕ್ಸ್ ಪ್ರಕಾರ 50% ಏರಿಕೆಯಾಗಬೇಕು.

'ವೀಜಿ'

ಮಾನಸ ವರದಿ

ಹಕ್ಕುಗಳಿಗಾಗಿ ಮುನ್ನಡೆಯೋಣ - ಸಾತಿನ್ನರ ಸಾರ್ವಜನಿಕ ಸಭೆಯ ವರದಿ

"ಹಳ್ಳಿಯಿಂದ ಪಟ್ಟಣದವರೆಗೂ ಮಹಿಳೆಯರು ಅರಿವನ್ನು ಪಡೆದುಕೊಂಡಿದ್ದಾರೆ. ಈಗ ಸರ್ಕಾರಕ್ಕೆ ಅರಿವು ಮೂಡಿಸುವ ಸಮಯ ಬಂದಿದೆ"

"ನಿಮ್ಮ ಕಿವಿ ತೆರೆದು ಕೇಳಿಸಿಕೊಳ್ಳಿ ಭೈರನ್ ಸಿಂಗ್, ಮಹಿಳೆಯರ ದನಿ ಕೇಳಿಸಿಕೊಳ್ಳಿ"

ಈ ಹೋರಾಟದ ದನಿಗಳು ಕೇಳಿಸಿದ್ದು 3.4.97ರಿಂದ 7.4.97ರ ವರೆಗೆ ಜೈಪುರದ ಚೌಪಾಡ್‌ನಲ್ಲಿ ಸಾತಿನ್ನ ಕರ್ಮಚಾರಿ ಸಂಘದವರು ನಡೆಸಿದ ಸಾರ್ವಜನಿಕ ಸಭೆ ಹಾಗು ಧರಣಿಯಲ್ಲಿ, ಮತ್ತೊಮ್ಮೆ ಸಾತಿನ್ನರು ತಮ್ಮ ನ್ಯಾಯಯುತ ಬೇಡಿಕೆಗಳಿಗಾಗಿ ಒತ್ತಾಯಿಸಿದ್ದಾರೆ. ರಾಜಾಸ್ತಾನದ ಮಹಿಳಾ ಅಭಿವೃದ್ಧಿ ಯೋಜನೆಯಡಿ ಗ್ರಾಸ್ ರೂಟ್ ಮಟ್ಟದಲ್ಲಿ ಕೆಲಸ ಮಾಡುತ್ತಿರುವ ಸಾತಿನ್ನರು, ತಾವು ಸಂಪ್ರದಾಯಬದ್ಧ ಕೌಟುಂಬಿಕ ಚೌಕಟ್ಟುಗಳನ್ನು ಮುರಿದು ಸಾರ್ವಜನಿಕ ಜೀವನದಲ್ಲಿ ಕಾಲಿರಿಸಿದ್ದೇವೆ ಎಂಬುದನ್ನು ಧರಣಿಯ ಮೂಲಕ ಸಾಬೀತು ಪಡಿಸಿದ್ದಾರೆ.

ಸಾತಿನ್ನರು ನ್ಯಾಯಯುತ ವೇತನ ಹಾಗು ಕೆಲಸದ ಸ್ಥಿತಿಯಲ್ಲಿ ಭದ್ರತೆಗಾಗಿ ನಡೆಸುತ್ತಿರುವ ಹೋರಾಟಕ್ಕೆ 'ಮಾನಸ' ನಿರಂತರವಾಗಿ ತನ್ನ ಬೆಂಬಲ ಸೂಚಿಸುತ್ತಾ ಬಂದಿದೆ. ಇತ್ತೀಚಿನ ಸಂಚಿಕೆಯಲ್ಲಿ (ಮಾನಸ ಫೆ. 97) ಸಾತಿನ್ನರ ಹೋರಾಟವನ್ನು ಮುರಿಯಲು ರಾಜ್ಯ ಸರ್ಕಾರವು ತೆಗೆದುಕೊಂಡಿರುವ ಸಾತಿನ್ ವಿರೋಧಿ ವಿಧಾನವನ್ನು ಕುರಿತು ಪ್ರಕಟಿಸಿದ್ದೆವು. ಮಹಿಳೆಯರನ್ನು ಸಶಕ್ತಗೊಳಿಸಲು ಪ್ರಾರಂಭಗೊಂಡ ಯೋಜನೆಯಿಂದ ಸಾತಿನ್ನರು ತಮ್ಮ ಮೇಲಿನ ಶೋಷಣೆಯನ್ನು ವಿರೋಧಿಸುವಷ್ಟು ಸಶಕ್ತರಾಗಿದ್ದಾರೆ. ಮಹಿಳಾ ಅಭಿವೃದ್ಧಿ ಯೋಜನೆಯ ಯಶಸ್ಸು ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದುಕೊಂಡಿತು. ಈ ಖ್ಯಾತಿಯ ಹಿಂದೆ ಇಡೀ ಯೋಜನೆಯ ಬೆನ್ನೆಲುಬಾಗಿ ದುಡಿವ ಸಾತಿನ್ನರ ಹಕ್ಕುಗಳು ನಿರಾಕರಿಸಲ್ಪಟ್ಟಿತ್ತು ಎಂಬುದು ನಿಜಕ್ಕೂ ಅವಮಾನದ ವಿಷಯ ಕೇವಲ 250/-ರೂ.ಗೆ ದುಡಿಸಿ ಕೊಂಡದ್ದಲ್ಲದೆ ಈಗ ಯೋಜನೆಯಿಂದ 'ಸಾತಿನ್ ಮಾದರಿ'ಯನ್ನೆ ಕೈ ಬಿಡಬೇಕೆಂದು ರಾಜ್ಯ ಸರ್ಕಾರವು ಪ್ರಯತ್ನಿಸುತ್ತಿದೆ, ಅದು ಸರ್ಕಾರವೆ ಸ್ಥಾಪಿಸಿರುವ ರಾಷ್ಟ್ರೀಯ ಮಹಿಳಾ ಆಯೋಗವೆ ಸಾತಿನ್ ಮಾದರಿಯನ್ನು ಕೈಬಿಡಬಾರದೆಂದು ವರದಿ ಸಲ್ಲಿಸಿದ ಮೇಲೂ.

ಸರ್ಕಾರದ ಸಾತಿನ್ ವಿರೋಧಿ ನಿಲುವನ್ನು ವಿರೋಧಿಸಿ ರಾಜಾಸ್ತಾನದ ಮೂಲೆ ಮೂಲೆಯಿಂದಲೂ ಬಂದ ಸಾತಿನ್ನರು ಜೈಪುರದ ಬಡಿಚೌಪಟ್‌ನಲ್ಲಿ ಸೇರಿ ಏಪ್ರಿಲ್ 3ರಿಂದ 7ರವರೆಗೆ ಧರಣಿ ನಡೆಸಿದರು. ತಮ್ಮ ದೃಢ ನಿಶ್ಚಯ ಹಾಗು ಶಕ್ತಿಯನ್ನು ಪರಿಚಯಿಸಿದರು. ಕಷ್ಟಕರ ಪರಿಸ್ಥಿತಿಯನ್ನೆದುರಿಸಿಯೂ ತಾವು ಸರ್ಕಾರದ ನಿಲುವಿಗೆ ಬಗ್ಗುವುದಿಲ್ಲವೆಂದು ತೋರಿಸಿದರು. ಒಂದೇ ಸಮನೆ ಆಲಿಕಲ್ಲಿನೊಂದಿಗೆ ಸುರಿದ ಮಳೆ, ಬಸ್ ಮತ್ತು ಟೆಂಟ್ ಹೌಸ್‌ಗಳ ಮುಷ್ಕರ, ಅವಶ್ಯಕ ವಸ್ತುಗಳ ಅಭಾವ, ಕುಟುಂಬದ ಜವಾಬ್ದಾರಿ ಜೊತೆಗೆ ಮಕ್ಕಳ ಪರೀಕ್ಷೆ, ಫಸಲಿನ ಕಟಾವು, ನಿತ್ಯ ಕೂಲಿಯ ಖೋತಾ - ಇವಾವುದನ್ನು ಲೆಕ್ಕಿಸದೆ ಸಾತಿನ್ನರು ಧರಣಿ ನಡೆಸಿದರು. ಅವರೊಂದಿಗೆ ಹಳ್ಳಿಯ ಮಹಿಳೆಯರು, ಪುರುಷರು, ಕುಟುಂಬದ ಸದಸ್ಯರು ಅಲ್ಲದೆ ಜೈಪುರದ ಜನತೆ, ಅನೇಕ ಸಂಘಟನೆಗಳು, ಟ್ರೇಡ್ ಯೂನಿಯನ್‌ಗಳು, ಪತ್ರಕರ್ತರು, ಕಲಾವಿದರು ಅವರ ಹೋರಾಟವನ್ನು ಸಂಪೂರ್ಣವಾಗಿ ಬೆಂಬಲಿಸಿದರು. ಅನೇಕ ಪ್ರಮುಖ ವ್ಯಕ್ತಿಗಳು ಸಭೆಯಲ್ಲಿ ಭಾಗವಹಿಸಿದರು. 1996ರ ಜ್ಞಾನಪೀಠ ಪ್ರಶಸ್ತಿ ವಿಜೇತೆ ಮಹಾಶ್ವೇತಾ ದೇವಿಯವರು, ದೆಹಲಿ ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಾಧೀಶರಾದ ರಾಜೇಂದ್ರ ಸಾಚರ್, ರಾಷ್ಟ್ರೀಯ ಮಹಿಳಾ ಆಯೋಗದ ಪದ್ಮಾ ಸೇಠ್, ಸಮಾಜವಾದಿ ಮಹಿಳಾ ಸಮಿತಿಯ ಪ್ರಮಿಳಾ ದಂಡವತೆ, ಶ್ರಮಿಕ ಪ್ರಬಂಧ್ ಕೇಂದ್ರದ ಶ್ರೀ ಡಿ. ತಂಕಪ್ಪನ್‌ರವರುಗಳು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಶ್ರೀಮತಿ ಮಹಾಶ್ವೇತಾದೇವಿಯವರು ಸಾತಿನ್ನರ ಹೋರಾಟಕ್ಕೆ ತಮ್ಮ ಸಂಪೂರ್ಣ ಒಪ್ಪಿಗೆ ನೀಡಿದರು. ಸಭೆಯನ್ನು ಉದ್ದೇಶಿಸುತ್ತಾ ಅವರು ರಾಜಾಸ್ತಾನದಲ್ಲಿ 37,000 ಹಳ್ಳಿಗಳಿವೆ. ಪ್ರತಿ ಹಳ್ಳಿಗೂ ಕನಿಷ್ಟ ಒಬ್ಬರಾದರು ಸಾತಿನ್ನರ ನೇಮಿಸಬೇಕು. ಮಹಿಳೆಯರ ಮೇಲಿನ ದೌರ್ಜನ್ಯ, ಅನಕ್ಷರತೆ, ಪಾಳೆಗಾರಿಕೆ ಪ್ರವೃತ್ತಿ, ಬಡತನ ಇವೆಲ್ಲವನ್ನು ಹೋಗಲಾಡಿಸಲು ಇನ್ನೂ ಸಾಕಷ್ಟು ಕೆಲಸ ನಡೆಯಬೇಕಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಸಾತಿನ್ನ ಮಾದರಿಯನ್ನು ಕೈ ಬಿಡುವ ಯೋಚನೆ ಸರ್ಕಾರಕ್ಕೆ ಬಂತಾದರೂ ಹೇಗೆ? ಎಂದು ಪ್ರಶ್ನಿಸಿದರು. ಪಶ್ಚಿಮ ಬಂಗಾಳ ಹಾಗು ಬಿಹಾರದ ಆದಿವಾಸಿ ಹಾಗು ಜೀತದಾಳುಗಳ ಹೋರಾಟದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಮಹಾಶ್ವೇತಾ ದೇವಿಯವರು, ಸಾತಿನ್ನರಿಗೆ ಕನಿಷ್ಟ ವೇತನವನ್ನು ಖಡಾಖಂಡಿತವಾಗಿ ನೀಡಬೇಕೆಂದು ಒತ್ತಿ ಹೇಳಿದರು. ಸರ್ಕಾರಕ್ಕೂ ಸಾಧ್ಯವಾಗದಂತಹ ಕೆಲಸಗಳನ್ನು ಸಾತಿನ್ನರು ಮಾಡುತ್ತಿದ್ದಾರೆ ಎಂದ ಅವರು "ರಾಜಾಸ್ತಾನದ ಸಾತಿನ್ನರ ಕುರಿತು ಒಂದು Status Report'ಅನ್ನು ಸಿದ್ದಪಡಿಸುವುದಾಗಿ ಹೇಳಿದರು. ಇದು ನಾನು ಲೇಖಕಿಯಾಗಿ ಮಾಡುವ ಉತ್ತಮ ಕೆಲಸ. ಆ ಮೂಲಕ ನನ್ನ ಕಾಳಜಿ ವ್ಯಕ್ತಪಡಿಸುವೆನೆಂದರು.

ನ್ಯಾಯಮೂರ್ತಿ ರಾಜೇಂದ್ರ ಸಚಾರ್ ಅವರು - ಸಾತಿನ್ನರ ಹೋರಾಟವು ಕೇವಲ ವೇತನ ಹೆಚ್ಚಳಕ್ಕೆ ಸೀಮಿತವಾಗಿರದೆ, ಮಹಿಳೆಯರ ಘನತೆಗೂ ಸಂಬಂಧಪಟ್ಟಿದೆ. ಹೆಚ್ಚಿನ ಸಾಮಾಜಿಕ ವಿಸ್ತೀರ್ಣತೆಯನ್ನು ಹೊಂದಿರುವ ಸಾತಿನ್ನರಿಗೆ ಕನಿಷ್ಟ ವೇತನವು ಅನ್ವಯಿಸುವುದೋ ಇಲ್ಲವೊ ಎಂದು ಕಾನೂನಿನ ತಾಂತ್ರಿಕತೆಗಳನ್ನು ಹುಡುಕುವುದು ಸರಿಯಲ್ಲ. ಸಾತಿನ್ನರ ವಿರುದ್ಧ ನಡೆಯುತ್ತಿರುವ ಅನ್ಯಾಯವನ್ನು ಮಾನವ ಹಕ್ಕುಗಳ ಉಲ್ಲಂಘನೆಯೆಂದೂ ಪರಿಗಣಿಸಬಹುದು ಎಂದು ಹೇಳಿದರು.

ಶ್ರೀಮತಿ ಪ್ರಮಿಳಾ ದಂಡವತೆಯವರು ಸಾತಿನ್ ಮಾದರಿಯನ್ನು ಕೈಬಿಡುವ ಬದಲು ದೇಶಾದ್ಯಂತ ವಿಸ್ತರಿಸಬೇಕು ಹಾಗು ಸಾತಿನ್ನರಿಗೆ ಬೆಲೆಯೇರಿಕೆಯ ಪ್ರಕಾರ ಸಂಬಳವನ್ನು ನೀಡಬೇಕು ಎಂದರು.

ಮಹಾಶ್ವೇತಾದೇವಿಯವರ ಮುಂದಾಳತ್ವದಲ್ಲಿ 8 ಜನರ ನಿಯೋಗವೊಂದು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿತು. ಸರ್ಕಾರದ ಸಾತಿನ್ ವಿರೋಧಿ ನಿಲುವಿನ ಬಗ್ಗೆ, ಸಾತಿನ್ನರಿಗೆ ನೀಡುತ್ತಿರುವ ಅತಿ ಕಡಿಮೆ ಗೌರವ ಧನ ಕುರಿತು ಮುಖ್ಯಮಂತ್ರಿಗಳಿಗೆ ಹೇಳಲಾಯಿತು.

ಸಾತಿನ್ನರ ಮೇಲಿನ ನಿಷೇಧವನ್ನು ಹಿಂತೆಗೆದುಕೊಳ್ಳಬೇಕು, ಸಾತಿನ್ನರ ಕೆಲಸಕ್ಕೆ ತಕ್ಕ ಗೌರವ ಸಿಗಬೇಕೆಂದು ಕೋರಿದ್ದ ಮನವಿ ಪತ್ರವನ್ನು ಮು.ಮಂ.ಗಳಿಗೆ ನೀಡಲಾಯಿತು.

ಮು.ಮಂ. ಶೇಖಾವತ್ ಅವರು - ಹಳ್ಳಿಗಳಲ್ಲಿ ಬದಲಾವಣೆಗಳನ್ನು ತರುವಲ್ಲಿ ಸಾತಿನ್ನರು ಸಫಲರಾಗಿಲ್ಲವೆಂದು ಮೊದಲಿಗೆ ಹೇಳಿದರು. ನಂತರ ಅವರಿಗೆ ನೀಡುತ್ತಿರುವ ಸಹಾಯ ಧನ ಕಡಿಮೆ ಎಂದು ಒಪ್ಪಿಕೊಂಡರು. ಸಾತಿನ್ನರು ಸರ್ಕಾರಕ್ಕೆ ಕೆಲಸ ಮಾಡುತ್ತಿಲ್ಲ ಹಾಗೆಯೇ ಸರ್ಕಾರಕ್ಕೆ ಅವರ ಕುರಿತು ಯಾವ ಜವಾಬ್ದಾರಿಗಳು ಇಲ್ಲ. ಆದರೆ ಕೆಲ ವಿಷಯಗಳಿಗೆ ಸಂಬಂಧಿಸಿದಂತೆ ಹಳ್ಳಿಗಳಲ್ಲಿ ಸಾಮಾಜಿಕ ಅರಿವು ಮೂಡಿಸಿದ್ದಾರಷ್ಟೆ ಎಂದು ಹೇಳಿದರು. ಸಾಕಷ್ಟು ಚರ್ಚೆಯ ನಂತರ ಅವರು ಈಗಿರುವ ಸಾತಿನ್ನರನ್ನು ತೆಗೆಯುವುದಿಲ್ಲವೆಂದೂ ಹೇಳಿದರೂ ನೇಮಕಾತಿ ಹೆಚ್ಚಿಸುವ ಬಗ್ಗೆ ರಾಜಿ ಮಾಡಿಕೊಳ್ಳಲೇ ಇಲ್ಲ. ಗೌರವಧನ ಹೆಚ್ಚಿಸುವ ಬಗ್ಗೆ - ಸರ್ಕಾರವು ಸಂಕಷ್ಟದಲ್ಲಿದೆ, ಸರ್ಕಾರದ ಬಳಿ ಹಣವಿಲ್ಲ, ಮೇ ನಂತರ ಗೌರವ ಧನವನ್ನು ಹೆಚ್ಚಿಸಲಾಗುವುದುದೆಂದು ಹೇಳಿದರು.

ಸಾತಿನ್ನ ಕರ್ಮಚಾರಿ ಸಂಘದ ಆರತಿ ಸಾಹ್ನಿಯವರು - ಸಾತಿನ್ನರು ಗೊಬ್ಬರ ತಯಾರಿಸುವ, ಕೈ ಪಂಪು ಹಾಕಿಸುವ ಕೆಲಸದಿಂದ ಹಿಡಿದು ನಿರೋಧ್ ಹಾಗು ಗರ್ಭ ನಿರೋಧಕ ಗುಳಿಗೆಗಳನ್ನು ಹಂಚುವವರೆಗೆ ಸುಮಾರು 64 ಕೆಲಸಗಳನ್ನು ನಿರ್ವಹಿಸುತ್ತಾರೆ ಎಂಬುದನ್ನು ಗಮನಕ್ಕೆ ತಂದರು. ತಮ್ಮ 12 ವರ್ಷಗಳ ದುಡಿಮೆಯನ್ನು ಗುರುತಿಸದ ಮುಖ್ಯಮಂತ್ರಿಗಳಾಗಲಿ, ರಾಜಾಸ್ಥಾನದ ಸರ್ಕಾರವಾಗಲಿ ಪ್ರತಿ ಮನೆಯಲ್ಲೂ ಸಮಾಜದಲ್ಲೂ ಮಹಿಳೆಯರೆಬಗ್ಗೆ ಇರುವ ಧೋರಣೆಗಿಂತ ಭಿನ್ನವಿಲ್ಲವೆಂದು ಅಭಿಪ್ರಾಯ ಪಟ್ಟು ಸಾತಿನ್ನರು ಧರಣಿಯನ್ನು ಮುಂದುವರೆಸುತ್ತೇವೆ ಹಾಗು ಜನರ ಮುಂದೆ ತಮ್ಮ ಮಾತುಗಳನ್ನು ಇಡುತ್ತೇವೆ ಎಂದು ತೀರ್ಮಾನಿಸಿದರು.

ತೀರ್ಮಾನಿಸಿದಂತೆ ಏಪ್ರಿಲ್ 3ರಿಂದ 7ರವರೆಗೆ ಬಡಿಚೌಪಟ್‌ನಲ್ಲಿ ಹಗಲು-ರಾತ್ರಿ ತಮ್ಮ ಧರಣಿಯನ್ನು ನಡೆಸಿದರು. ಹಾಡು, ನಾಟಕ, ಬೊಂಬೆಯಾಟ, ಭಾಷಣಗಳ ಮೂಲಕ ಸಾತಿನ್ನರು ತಮ್ಮ ಮಾತುಗಳನ್ನು ಹೇಳಿದರು. ಹಳ್ಳಿಯ ಮಹಿಳೆಯರ ಸ್ಥಿತಿಗಳ ಬಗ್ಗೆ ಹೇಳಿದರು. ತಾವು ಮಾಡುವ ಕೆಲಸದ ಉಪಯುಕ್ತತೆಯನ್ನು ಕುರಿತು ಮಾತನಾಡಿದರು. ಆ ಬಗ್ಗೆ ಅನೇಕ ಕತೆಗಳನ್ನು ಹೇಳಿದರು. ಮಹಿಳಾ ವಿಕಾಸ, ಗ್ರಾಮೀಣ ವಿಕಾಸ ಹಾಗು ಅದರಲ್ಲಿ ಸಾತಿನ್ನರ ಮೂಲಕ ಅರಿವು ಮೂಡಿರುವ ಬಗ್ಗೆ ತಿಳಿಸಿದರು. ಪ್ರತಿಯೊಬ್ಬ ಸಾತಿನ್ನಳು ಅನೇಕ ಸಂಕಷ್ಟಗಳನ್ನೆದುರಿಸಿಯೂ ಮಹಿಳಾ ವಿಕಾಸದ ಒಂದು ಜೀವಂತ ಉದಾಹರಣೆಯ ರೂಪದಲ್ಲಿ ಜೈಪುರದ ಜನತೆಯ ಮುಂದೆ ಪ್ರಕಟಗೊಂಡರು. ಅವರ ಜ್ಞಾನ, ಅರಿವು, ಆತ್ಮವಿಶ್ವಾಸ - ಇವೆಲ್ಲವೂ ಅವರ ಭಾಷಣಗಳಲ್ಲಿ ಕಂಡುಬರುತ್ತಿತ್ತು. ಜೈಪುರದ ಜನತೆಗೆ ಸರ್ಕಾರದ ಇಬ್ಬಗೆ ನೀತಿಯ ಅರಿವಾಗಿ ಸಾತಿನ್ನರ ಹೋರಾಟವನ್ನು ಸಮರ್ಥಿಸಿದರು. ನಾಲ್ಕು ದಿನಗಳ ಕಾಲ ಅವರ ಮಾತನ್ನು ಕೇಳಿದ ಜನತೆಯು ಅವರ ಹೋರಾಟವನ್ನು ಸಮರ್ಥಿಸಿತು. ಊಟ, ನೀರು, ಕಂಬಳಿ ಆದಿಯಾಗಿ ನೀಡಿ ಸಹಾಯ ಮಾಡಿದರು. ಹಣದ ನೆರವನ್ನು ನೀಡಿದರು. ಕೆಲವು ಯುವಕರು ಕವಿತೆ ರಚಿಸಿದರು, ಕೆಲವರು ಹಾಡನ್ನು ರಚಿಸಿದರು. ದಿಲ್ಲಿಯ ಪ್ರಸಿದ್ಧ ನಾಟಕ ತಂಡ 'ನಿಶಾಂತ್' ನವರು ಸಾತಿನ್ನರ, ಸರ್ಕಾರದವರ ನಿಜರೂಪವನ್ನು ನಾಟಕದ ಮೂಲಕ ತೋರಿದರು. ನಾಟಕ ಬಹಳ ಪ್ರಭಾವಶಾಲಿಯಾಗಿತ್ತು. ದೇಶದ ಮೂಲೆ ಮೂಲೆಗಳಿಂದ ಜನರು ಸಾತಿನ್ನರ ಹೋರಾಟಕ್ಕೆ ಬೆಂಬಲ ಸೂಚಿಸಿದರು. ಕೆಲವರು ಬಂದು ನೇರವಾಗಿ ಬೆಂಬಲ ಸೂಚಿಸಿದರೆ ಹಲವಾರು ಗುಂಪುಗಳು, ವ್ಯಕ್ತಿಗಳು, ಪತ್ರ, ಟೆಲಿಗ್ರಾಂ, ಫ್ಯಾಕ್ಸ್ ಮೂಲಕ ತಮ್ಮ ಬೆಂಬಲ ಸೂಚಿಸಿದರು. ಮಾಧ್ಯಮದವರ ಪ್ರತಿಕ್ರಿಯೆಯೂ ಉತ್ತಮವಾಗಿತ್ತು. ಸ್ಥಳೀಯ, ರಾಷ್ಟ್ರೀಯ ಪತ್ರಿಕೆಗಳು, ದೂರದರ್ಶನದವರು ಪ್ರಚಾರ ನೀಡಿದರು. ಟೆಂಟ್‌ಹೌಸಿನವರು ಮುಷ್ಕರವಿದ್ದರೂ ಸಹ ಸಾತಿನ್ನರಿಗೆ ಟೆಂಟ್ ಹಾಗು ಊಟದ ವ್ಯವಸ್ಥೆ ಮಾಡಿದರು.

ಭಾಗವಹಿಸಿದ ಸಂಘಟನೆಗಳು

ಶ್ರೀಮತಿ ಅಮರ್‌ಜೀತ್ ಕೌರ್ (ಐಟಕ್), ಶ್ರೀಮತಿ ಅರುಣಾರಾಯ್ (ಮಜ್ದೂರ್ ಕಿಸಾನ್ ಸಂಘಟನಾ), ಶ್ರೀಮತಿ ಪ್ರಮೀಳಾ ಲೂಂಬ (ರಾಷ್ಟ್ರೀಯ ಮಹಿಳಾ ಫೆಡರೇಶನ್), ಶ್ರೀಮತಿ ಬೃಂದಾಕಾರಟ್ (ಅಖಿಲ ಭಾರತ ಜನವಾದಿ ಮಹಿಳಾ ಸಮಿತಿ), ಶ್ರೀಮತಿ ಮೀರಾ ಕುಮಾರ್ (ಕಾಂಗ್ರೆಸ್ ಪಾರ್ಟಿ), ಶ್ರೀ ಅಶೋಕ್ ಗಹಲೋಕ್ (ಕಾಂಗ್ರೆಸ್ ಪಾರ್ಟಿ), ಶ್ರೀಮತಿ ಆರಾ ದೀಕ್ಷಿತ್ (ಅಖಿಲ ಭಾರತ ಮಹಿಳಾ ಪರಿಷತ್), ಶ್ರೀ ಚಂದರ್ ಮೆಹ್ತ (ಸಮತಾ ಪಾರ್ಟಿ), ಶ್ರೀ ಮಹೇಂದ್ರ ಚೌದರಿ (ಕಮ್ಯೂನಿಸ್ಟ್ ಪಾರ್ಟಿ ಎಂ.ಎಲ್), ಶ್ರೀ ಚಂಗಾನಿ (ಐಟಕ್), ಶ್ರೀಮತಿ ಅರುಣಾಸ್ವಾಮಿ (ಮಹಿಳಾ ಕಾಂಗ್ರೆಸ್), ಶ್ರೀಮತಿ ವೇದಕುಮಾರಿ (ಸರ್ವೋದಯಾ ನಾಯಕರು), ಶ್ರೀ ಹರೀಶ್ ಜದಾನಿ (ಕವಿಗಳು), ನಿಶಾಂತ್ ನಾಟಕ್ ಮಂಚ್, ದಿಲ್ಲಿ, ರಾಜಾಸ್ತಾನ್ ಕಿಸಾನ್ ಸಭಾ, ರಾಜಾಸ್ತಾನ್ ಶಿಕ್ಷಕರ ಸಂಘ, ಹಿಂದ್ ಮಜ್ದೂರ್ ಸಭಾ, ಎಸ್.ಎಫ್.ಐ., ಎ.ಇ.ಎಸ್., ಯುವ ಕಾಂಗ್ರೆಸ್, ಪ್ರಗತಿಶೀಲ ಲೇಖಕ್ ಸಂಘ, ರಾಜಾಸ್ತಾನ್ ಸಾಹಿತ್ಯಮಂಚ್, ರಾಜಾಸ್ತಾನ್ ನರ್ಸಸ್ ಅಸೋಸಿಯೇಷನ್, ಇಪ್ಟಾ, ರಾಜಾಸ್ತಾನ್ ವಿಶ್ವವಿದ್ಯಾಲಯ ಮಹಿಳಾ ಸಂಘಟನ, ಮಹಿಳಾ ಪುನರ್‌ವಾಸ್ ಸಮಿತಿ, ಮಹಿಳಾ ಅತ್ಯಾಚಾರ ವಿರೋಧಿ ಮಂಚ್, ಪಿ.ಯು.ಸಿ.ಎಲ್., ನಂದಿತಾ ಹಕ್ಸರ್ - ಸುಪ್ರೀಂ ಕೋರ್ಟ್ ಅಡ್ವೋಕೇಟ್, ಸಹೇಲಿ-ದಿಲ್ಲಿ, ರಾಷ್ಟ್ರೀಯ ಪ್ರೌಢ ಶಿಕ್ಷಣ ಸಂಸ್ಥಾನ, YWC, ನಾಗರೀಕ್ ಮೋರ್ಚಾ, ಜನ್ ಚೇತನ ವಿಕಾಸ ಪರಿಷತ್, ಪ್ರಗತಿಶೀಲ ಮಹಿಳಾ ಸಮಿತಿ, ನ್ಯಾಶನಲ್ ಮುಸ್ಲಿಂ ವುಮೆನ್ಸ್ ವೆಲ್‌ಫೇರ್ ಸೊಸೈಟಿ, ಭೋದ್ ಶಿಕ್ಷಣ್ ಸಮಿತಿ, ವಿಕಾಸ ಅಧ್ಯಯನ ಸಂಸ್ಥೆ, ಶಿಕ್ಷಾ ಸುಧಾರ್ ಮೋರ್ಚಾ, ಸಮಗ್ರ ಸೇವಾ ಸಂಘ್, ರಾಜಾಸ್ಥಾನ್ ಮಜ್ದೂರ್ ಕಿಸಾನ್ ಮೋರ್ಚಾ, ಅಖಿಲ ರಾಜಾಸ್ತಾನ್ ಸಂಯುಕ್ತ ಕರ್ಮಚಾರಿ ಮಹಾಸಂಘ, ಭಾರತೀಯ ಮಜ್ದೂರ್ ಸಂಘ, ಪ. ರೇಲ್ವೆ ಎಂಪ್ಲಾಯೀಸ್ ಯೂನಿಯನ್, ವಿಮಾ ಕರ್ಮಚಾರಿ ಯೂನಿಯನ್, ಹಿಂದ್ ಮಜ್ದೂರ್ ಕಿಸಾನ್ ಪಂಚಾಯತ್, ಅಂಗನವಾಡಿ ಯೂನಿಯನ್, ನಿರ್ಮಾಣ ಕಾರ್ಮಿಕರ ಪಾಂಚಾಯತ್ ಸಂಗಮ್, ಬಿಸ್ಲಾಪುರ್ ಬಂದ್ ಸಮನ್ವಯ ಸಮಿತಿ, ಜಲ್-ಜಂಗಲ್, ಜಮೀನ್ ಅಂದೋಲನ್, ಸಿಟಿಜನ್ಸ್ ಅಸೋಸಿಯೇಷನ್ ಫಾರ್ ರೈಟ್ಸ್, ಜೈಪುರ ಮಹಿಳಾ ವಿಕಾಸದ ಕೆಲಸಗಾರರು, ಮಹಿಳಾ ಸಮೂಹ - ಇನ್ನು ಅನೇಕ ಸಂಘಟನೆಗಳು, ಸಂಸ್ಥೆಗಳು, ವಿದ್ಯಾರ್ಥಿಗಳು, ಕಲಾವಿದರು, ಪತ್ರಕರ್ತರು, ಪ್ರಗತಿಶೀಲ ನಾಗರೀಕರು ಭಾಗವಹಿಸಿದ್ದರು.

●

ತಮಿಳುನಾಡು ಕಟ್ಟಡ ಕಾರ್ಮಿಕರ ಸಂಘಟನೆ

ನಿರ್ಮಾಣ ಕೈಗಾರಿಕೆಯ ಮನುಷ್ಯನ ಸಮಾಜದ ಬಹುಮುಖ್ಯ ಅವಶ್ಯಕತೆ. ರಸ್ತೆಗಳು, ಅಣೆಕಟ್ಟುಗಳು, ಸೇತುವೆಗಳು, ಕಾರ್ಖಾನೆಗಳು, ಕಟ್ಟಡಗಳು ಇತ್ಯಾದಿಯು ನಿರ್ಮಾಣವು ಆರ್ಥಿಕ ಅಭಿವೃದ್ಧಿಯ ಆಧಾರವೇ ಆದರೂ ನಿರ್ಮಾಣ ಕೆಲಸಕ್ಕೆ ಮನ್ನಣೆಯೇ ದೊರೆತಿಲ್ಲ. ರಾಜ್ಯ ಹಾಗು ಕೇಂದ್ರ ಸರ್ಕಾರಗಳು ಈ ಕ್ಷೇತ್ರದಲ್ಲಿ ದೊಡ್ಡ ಮಾಲೀಕರು ಹಾಗೂ ಪ್ರತೀ ವರ್ಷ ನಿರ್ಮಾಣಕ್ಕೆಂದೇ ಕೋಟ್ಯಾಂತರ ರೂಪಾಯಿಗಳನ್ನು ವ್ಯಯಿಸುತ್ತವೆ. ಆದರೂ ಕಾರ್ಮಿಕರನ್ನು ಕುರಿತಂತೆ ಈ ಕ್ಷೇತ್ರವು ಸಂಪೂರ್ಣವಾಗಿ ಕಡೆಗಣಿಸಲ್ಪಟ್ಟಿದೆ. ತಮಿಳುನಾಡಿನಲ್ಲೆ ಸುಮಾರು 25 ಲಕ್ಷ ಕಟ್ಟಡ ಕಾರ್ಮಿಕರಿದ್ದಾರೆ. ಇಡೀ ದೇಶದಲ್ಲಿ ಅಂದಾಜು 2 ಕೋಟಿ ಕಟ್ಟಡ ಕಾರ್ಮಿಕರಿದ್ದಾರೆ. ಈ ಕ್ಷೇತ್ರದಲ್ಲಿ ಅತ್ಯಂತ ಶೋಷಣೆಗೊಳ ಪಟ್ಟವರೆಂದರೆ, ಸಾಮಾಜಿಕವಾಗಿ ಹಿಂದುಳಿದಿರುವವರೆಂದರೆ ಮಹಿಳೆಯರು. ಅಲ್ಲದೆ ಈ ಕ್ಷೇತ್ರ ಅತ್ಯಂತ ಹೆಚ್ಚಿನ ಬಾಲ ಕಾರ್ಮಿಕರನ್ನು ಬಳಸಿಕೊಳ್ಳುತ್ತದೆ.

ನಿರ್ಮಾಣ ಕೆಲಸದಲ್ಲಿ ಎಲ್ಲೆಡೆಯು ಮಹಿಳೆಯರು ಕಡಿಮೆ ಕೂಲಿ ಪಡೆಯುತ್ತಾರೆ. ಇವರು ಬೆನ್ನು ಮುರಿಯುವ ದುಡಿತ, ಸೌಲಭ್ಯಗಳ ಕೊರತೆ ಹಾಗು ಸಾಮಾಜಿಕ ಅಭದ್ರತೆಯಿಂದ ನರಳುತ್ತಾರೆ. ಹೆಚ್ಚಿನ ಕೌಶಲ್ಯ ಪಡೆಯುವ ಅವಕಾಶದಿಂದಲೂ ಇವರು ವಂಚಿತರು. ಹೆಚ್ಚಿನ ಕೌಶಲ್ಯ ಪಡೆಯುವ ಅವಕಾಶ ಹೊಂದಿದ ಪುರುಷ ಕುಶಲತೆ ಪಡೆದಂತೆ ಹೆಚ್ಚಿನ ಸಂಬಳ ಪಡೆಯುತ್ತಾರೆ. ಗರ್ಭಾವಸ್ಥೆಯ ಕೊನೆ ಹಂತದವರೆಗೂ ಮಹಿಳೆಯರು ಹೊರೆ ಹೊರುವುದು ಸಾಮಾನ್ಯ. ಕೆಲ ಸಮಯ ನಿರ್ಮಾಣ ಸ್ಥಳದಲ್ಲೆ ಹೆರಿಗೆಯಾಗುವುದು ಸಾಮಾನ್ಯ. ಮಗು ಹಡೆದ ಒಂದು ತಿಂಗಳೊಳಗೆ ಪುನಃ ಕೆಲಸಕ್ಕೆ ಬರುತ್ತಾರೆ. ಹತ್ತಿರದ ಮರಕ್ಕೆ ತೂಗುಬಿಟ್ಟ ಬಟ್ಟೆ ತೊಟ್ಟಿಲಲ್ಲಿ ಮಕ್ಕಳನ್ನು ಮಲಗಿಸಿ ಕೆಲಸ ಮಾಡುವುದು ಸಾಮಾನ್ಯ ದೃಶ್ಯ. ನಿರ್ಮಾಣ ಕೆಲಸದ ಸುತ್ತಮುತ್ತಲು ಆಡಿಕೊಂಡೆ ಮಕ್ಕಳು ಬೆಳೆಯುತ್ತಾರೆ. ಯಾವುದೇ ಶಿಶುಪಾಲನೆಯ ಸೌಲಭ್ಯಗಳಿಲ್ಲದಿರುವುದರಿಂದ ದೊಡ್ಡ ಮಕ್ಕಳೆ ಸಣ್ಣ ಮಕ್ಕಳನ್ನು ನೋಡಿಕೊಳ್ಳುತ್ತಾರೆ. ಶಿಕ್ಷಣ ಪಡೆಯುವುದಂತು ದೂರದ ಮಾತು. ಸುತ್ತಮುತ್ತಲಿನ ಧೂಳು, ಕಲುಷಿತ ವಾತಾವರಣದಲ್ಲೆ ಮಕ್ಕಳು ಬೆಳೆಯುತ್ತಾರೆ. ಕುಡಿಯುವ ನೀರು, ಶೌಚಾಲಯದಂತ ಮೂಲಭೂತ ಸೌಲಭ್ಯಗಳು ನಿರ್ಮಾಣ ಕೆಲಸದ ಸಮೀಪ ಇರುವುದಿಲ್ಲ. ಸಾರ್ವಜನಿಕ ಉದ್ದಿಮೆಯಡಿ ಬರುವ ನಿರ್ಮಾಣಕಾರ್ಯದಲ್ಲೂ ಸಹ ಈ ಸೌಲಭ್ಯಗಳಿರುವುದಿಲ್ಲ. ನೈಸರ್ಗಿಕ ಕರೆಗೆ ಜನರಿಲ್ಲದ, ಕತ್ತಲು ಪ್ರದೇಶಗಳನ್ನು ಮಹಿಳೆಯರು ಹುಡುಕಿಕೊಂಡು ಹೋಗಬೇಕಾಗುತ್ತದೆ. ದಣಿವಿನಿಂದಾಗಿ ಕುತ್ತಿಗೆ ನೋವು, ಎದೆ ನೋವು ಹಾಗೂ ಜ್ವರದಿಂದ ನರಳುವುದು ಸಾಮಾನ್ಯ. ಯಾವುದೇ ವೈದ್ಯಕೀಯ ಸೌಲಭ್ಯವಿಲ್ಲದಿರುವುದರಿಂದ ತಮಗೆ ಸಿಗುವ ಕೂಲಿಯಲ್ಲೆ ಔಷಧಿಗೆಂದು ಖರ್ಚು ಮಾಡಬೇಕಾಗುತ್ತದೆ. ದುಡಿಯುವವರಿಗೆ ಮಾತ್ರ ಕೂಲಿ ಸಿಗುವುದರಿಂದ, ವಯಸ್ಸಾದ ಮಹಿಳೆಯರ ಸ್ಥಿತಿ ಶೋಚನೀಯ. ಐವತ್ತು ವರ್ಷಕ್ಕೆ ಸಂಪೂರ್ಣವಾಗಿ ದುಡಿಯುವ ಶಕ್ತಿಯನ್ನು ಕಳೆದುಕೊಂಡು ಬಿಡುತ್ತಾರೆ. ಗಂಡಸರು ದುಡಿದ ಹಣವನ್ನೆಲ್ಲ ಕುಡಿತಕ್ಕೆ ಹಾಕುವುದರಿಂದ ಕುಟುಂಬದ ಜವಾಬ್ದಾರಿಯ ಹೊರೆ ಹೊರುವವರು ಮಹಿಳೆಯರು. ಎಷ್ಟೋ ಕುಟುಂಬಗಳು ನಡೆಯುವುದು ಹೆಂಗಸರ, ಮಕ್ಕಳ ಕೂಲಿ ಆಧಾರದ ಮೇಲೆ.

ಯೂನಿಯನ್‌ನ ಇತಿಹಾಸ : ಕಳೆದ 15 ವರ್ಷಗಳಲ್ಲಿ ಕಟ್ಟಡ ಕಾರ್ಮಿಕರ ಚಳುವಳಿಯು ತಮಿಳುನಾಡಿನಲ್ಲಿ ರಾಜ್ಯಮಟ್ಟದ ಚಳುವಳಿಯಾಗಿ ಬೆಳೆದಿದೆ. 1979ರಲ್ಲಿ ನಿರ್ಮಾಣ ಕೈಗಾರಿಕೆಯು ತೀವ್ರ ಹೊಡೆತವನ್ನನುಭವಿಸಿತು. ಈ ಸಮಯದಲ್ಲೆ ಅನೇಕ ಕೆಲಸಗಾರರು ಕೆಲಸ ಕಳೆದುಕೊಂಡ ಕಾರಣ ಸಂಘಟಿತರಾಗುವ ಅವಶ್ಯಕತೆ ಮೂಡಿತು. ಮದ್ರಾಸಿನಲ್ಲಿ ಆ ವರ್ಷ ಸಿಮೆಂಟಿನ ತೀವ್ರ ಕೊರತೆ, ಕಾಳಸಂತೆಯಲ್ಲಿ ಸಿಮೆಂಟಿನ (ಜೊತೆಗೆ ಉಕ್ಕಿನ) ಮಾರಾಟ ಪ್ರಾರಂಭವಾಯ್ತು. ಸಾಮಾನ್ಯವಾಗಿ ತಮಿಳುನಾಡಿನಲ್ಲಿ ಜನವರಿ 15ರಿಂದ ಫೆಬ್ರವರಿ 15ರವರೆಗೆ ಅವಧಿಯನ್ನು ಕಟ್ಟಡ ನಿರ್ಮಾಣ ಪ್ರಾರಂಭಿಸಲು ಶುಭವೆಂದು ಪರಿಗಣಿಸಲಾಗುತ್ತದೆ. ಹೆಚ್ಚಿನ ನಿರ್ಮಾಣ ಕಾರ್ಯ ಪ್ರಾರಂಭ ವಾಗುವುದು ಆ ಅವಧಿಯಲ್ಲೆ. ಆದರೆ ಆ ವರ್ಷ ನಿರ್ಮಾಣ ಕಾರ್ಯ ಸ್ಥಗಿತಗೊಂಡಿತು. ಸಾವಿರಾರು ಕಟ್ಟಡ ಕಾರ್ಮಿಕರು ಒಟ್ಟಿಗೆ ಸೇರಿ ಸೇಂಟ್‌ಜಾರ್ಜ್ ಬಳಿ (ಆ ಸರ್ಕಾರದ ಕಛೇರಿ) ಧರಣಿ ನಡೆಸಿದರು. ಹೊಸದಾಗಿ ಚುನಾಯಿತಗೊಂಡಿದ್ದ DMK ಸರ್ಕಾರ ಬೇಡಿಕೆಗಳನ್ನು ಪರಿಗಣಿಸುವುದೆಂಬ ಆಶೆ ಇತ್ತು.

ಈ ಧರಣಿಯಿಂದಾಗಿ, ಕಟ್ಟಡ ಕಾರ್ಮಿಕರೊಂದಿಗೆ ಕೆಲಸ ಮಾಡುತ್ತಿದ್ದ ಚಳುವಳಿಗಾರರು ಟ್ರೇಡ್ ಯೂನಿಯನ್ ಅನ್ನು ಪ್ರಾರಂಭಿಸಲು ನಿರ್ಧರಿಸಿದರು. ಯೂನಿಯನ್ ಮುಖ್ಯ ಬೇಡಿಕೆಗಳೆಂದರೆ -

1. ಕನಿಷ್ಟ ವೇತನ ತೀರ್ಮಾನಿಸಲು ಆಯೋಗವೊಂದನ್ನು ಸ್ಥಾಪಿಸಬೇಕು.

2. ಇ.ಎಸ್.ಐ. ಸೌಲಭ್ಯ.

3. ನಿರ್ಮಾಣ ಸ್ಥಳದಲ್ಲಿ ಅಪಘಾತಕ್ಕೊಳಪಟ್ಟ ಪ್ರತಿ ವ್ಯಕ್ತಿಗೆ ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ರೂ. 10,000/-

4. ನಿರ್ಮಾಣ ಸ್ಥಳದಲ್ಲಿ ಕ್ರೆಚ್ ಸೌಲಭ್ಯ.

5. ಕಟ್ಟಡ ಕಾರ್ಮಿಕರಿಗೆ ಭದ್ರತೆ ಒದಗಿಸುವುದು. ಪ್ರತ್ಯೇಕ ಕಾಯಿದೆಯನ್ನು ಜಾರಿಗೊಳಿಸಬೇಕು.

6. ತಮಿಳುನಾಡು ಕೊಳಚೆ ನಿರ್ಮೂಲನ ಮಂಡಳಿಯಿಂದ ಶೇ. 25% ವಸತಿಯ ಕಾದಿರಿಸುವಿಕೆ.

7. ಉಚಿತ ಪರಿಕರಗಳು.

ಮುಂದಿನ ವರ್ಷಗಳಲ್ಲಿ ಹಲವಾರುಬಾರಿ ಧರಣಿ, ಪಿಕೇಟಿಂಗ್, ಉಪವಾಸ ಸತ್ಯಾಗ್ರಹವನ್ನು ಕಾರ್ಮಿಕರು ಮಾಡಿದರು. ಯೂನಿಯನ್‌ನಲ್ಲಿ ಮಹಿಳೆಯರ ಭಾಗವಹಿಸುವಿಕೆ ಹೆಚ್ಚಿತಲ್ಲದೆ ಮದ್ರಾಸ್ ಹಾಗು ಇತರ ಜಿಲ್ಲೆಗಳಲ್ಲಿ ಬಹುದೊಡ್ಡ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸತೊಡಗಿದರು.

ಸರ್ಕಾರವು ಮಹಿಳೆಯರಿಗೆಂದು ವಿಶೇಷ ಸೌಲಭ್ಯಗಳನ್ನು ರಾಜ್ಯ ಸರ್ಕಾರದ ಕಾಯಿದೆಯಡಿ ನೀಡಿತು. ಸೆಕ್ಷನ್ 27ರಲ್ಲಿ ಮಹಿಳೆಯರ ನೇಮಕಾತಿಯ ಮೇಲೆ ಕೆಲವು ನಿರ್ಬಂಧ ಹೇರಿತು. ಆ ಪ್ರಕಾರ ಸಂಜೆ 7ರ ನಂತರ ಮಹಿಳೆಯರು ಕೆಲಸ ಮಾಡುವಂತಿಲ್ಲ. ಈ ಸೌಲಭ್ಯವು ತಮ್ಮನ್ನು ರಕ್ಷಿಸುವ ಬದಲು ಅವಕಾಶ ವಂಚಿತ ರನ್ನಾಗಿಸುತ್ತದೆ ಎಂದು ಮಹಿಳೆಯರು ಭಾವಿಸಿದರು. ಉದಾಹರಣೆಗೆ ಕಾಂಕ್ರೀಟ್ ಹಾಕುವ ಕೆಲಸವನ್ನು ಬಿಡದೆ ಒಂದೆ ಸಲಕ್ಕೆ ಮಾಡಿ ಮುಗಿಸಬೇಕು. ಅಂತಹ ಸಮಯದಲ್ಲಿ ರಾತ್ರಿಯೂ ಕೆಲಸ ನಡೆಯುತ್ತದೆ. ಮಹಿಳೆಯರು 7ರ ನಂತರ ಕೆಲಸ ಮಾಡುವಂತಿಲ್ಲವೆಂದರೆ ಅವರ ಕೆಲಸವನ್ನು ಪುರುಷರ ಮಾಡುತ್ತಾರೆ. ಈ ಕಾಂಕ್ರಿಟಿಂಗ್ ಕೆಲಸವು ಹೆಚ್ಚು ಮಹಿಳೆಯರಿಗೆ ಕೆಲಸ ವನ್ನೊದಗಿಸುತ್ತದೆ. 7ರ ನಂತರ ಕೆಲಸ ಮಾಡಬಾರದೆನ್ನುವುದಕ್ಕಿಂತ ಸರಿಯಾದ ಹೆಚ್ಚಿನ ಪಾಳಿ ಕೂಲಿ ಅವರಿಗೆ ಬೇಕಾಗಿತ್ತು. ಒಟ್ಟಿಗೆ ಗುಂಪಿನಲ್ಲಿ ಕೆಲಸ ಮಾಡುವುದರಿಂದ ಕತ್ತಲಾದ ಮೇಲೆ ಸುರಕ್ಷತೆ ಏನೂ ಬೇಕಿರಲಿಲ್ಲ.

ಎರಡನೆ ಸೌಲಭ್ಯವು ಹೆರಿಗೆ ಸೌಲಭ್ಯಕ್ಕೆ ಸಂಬಂಧಿಸಿದ್ದು. ಕಾಯಿದೆಯು ಕಟ್ಟಡ ಕಾರ್ಮಿಕರಿಗೂ ಹೆರಿಗೆ ಸೌಲಭ್ಯವನ್ನು ವಿಸ್ತರಿಸಿತು. ಆದರೆ ಮಾಲೀಕರು ಹಾಗು ಕೆಲಸದ ಸ್ಥಳವು ಪದೇ ಪದೇ ಬದಲಾಗುವುದರಿಂದಾಗಿ ಈ ಸೌಲಭ್ಯವನ್ನು ಮಹಿಳೆಯರು ಪಡೆದುಕೊಳ್ಳಲಾಗುವುದಿಲ್ಲ. ಈ ಕಾಯಿದೆಯಿಂದಾಗಿ ಮಾಲೀಕರು ಮಹಿಳೆಯರನ್ನು ಕೆಲಸಕ್ಕೆ ತೆಗೆದುಕೊಳ್ಳಲು ಹಿಂಜರಿಯ ಬಹುದೆಂದು ಅವರು ಅಭಿಪ್ರಾಯಪಟ್ಟರು.

ಈ ಕಾಯಿದೆ ಮೂಲಕ, ನಿರ್ಮಾಣ ಕೈಗಾರಿಕೆ ನಿರ್ದಿಷ್ಟ ಸ್ಥಿತಿಯ ಕುರಿತು ಸರ್ಕಾರಕ್ಕಿರುವ ಅಜ್ಞಾನ ಸಾಬೀತಾಯಿತು.

ಯೂನಿಯನ್ ಮತ್ತು ಮಹಿಳೆಯರ ಪಾತ್ರ - ಹಳ್ಳಿ ಹಾಗು ನಗರ ಪ್ರದೇಶಗಳೆರಡರಲ್ಲೂ ಸಣ್ಣ ಹಾಗು ಮಧ್ಯಮ ಪ್ರಮಾಣದ ಗೃಹ ನಿರ್ಮಾಣ ಕೆಲಸಗಾರರ ಸದಸ್ಯತ್ವ ಹೆಚ್ಚಿದೆ. ಯೂನಿಯನ್, ರಾಷ್ಟ್ರೀಯ ಮಟ್ಟದಲ್ಲಿ ಆಂದೋಲನ ನಡೆಸುವುದರ ಜೊತೆಗೆ ಅಪಘಾತಗೊಂಡವರಿಗೆ ಪರಿಹಾರ ಒದಗಿಸುವ ಕಾರ್ಯದ ಬಗ್ಗೆ ದುಡಿಯುತ್ತಿದೆ. ಈ ನಿಟ್ಟಿನಲ್ಲಿ ಕಾನೂನಿನ ಹಾಗು ನೇರ ಕಾರ್ಯಾಚರಣೆಯ ಅಗತ್ಯವಿದೆ. ಇದಕ್ಕೆ ಸಂಬಂಧಪಟ್ಟ ಅನೇಕ ವ್ಯಾಜ್ಯಗಳಲ್ಲಿ ಮಹಿಳೆಯರು ಬಹುದೊಡ್ಡ ಪಾತ್ರ ವಹಿಸಿದ್ದಾರೆ. ಮಹಿಳೆಯರಿಗೆ ಕನಿಷ್ಠ ಕೂಲಿ ನಿರಾಕರಣೆ ವಿರುದ್ಧ ಯೂನಿಯನ್ ಹೋರಾಟ ನಡೆಸಿದೆ. ಕಾನೂನು ಸಲಹಾ ಕ್ಯಾಂಪ್ ಹಾಗು ನೇರ ಕಾರ್ಯಾಚರಣೆ ಮೂಲಕ ಈ ಕೆಲಸವನ್ನು ಯೂನಿಯನ್ ಮಾಡಿದೆ. ವಸತಿ ಹಾಗು ಪೋಲಿಸ್ ದೌರ್ಜನ್ಯದ ವಿರುದ್ಧವು ಕೆಲಸ ಮಾಡುತ್ತಿವೆ. ಯೂನಿಯನ್‌ನ ಒಟ್ಟು ಸದಸ್ಯರ ಸಂಖ್ಯೆ 20,000. ಅದರಲ್ಲಿ ಮಹಿಳೆಯರ ಸಂಖ್ಯೆ ಶೇ. 30. ಯೂನಿಯನ್‌ನಲ್ಲಿ ಮಹಿಳಾ ವಿಭಾಗವೊಂದನ್ನು ಪ್ರಾರಂಭಿಸಲಾಯಿತು. ಮಹಿಳಾ ವಿಭಾಗದ ಕಾರ್ಯದರ್ಶಿಯನ್ನು ಮಹಿಳೆಯರೇ ಚುನಾಯಿಸುತ್ತಾರೆ. ಯೂನಿಯನ್ ಚಟುವಟಿಕೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸುವ ಸಲುವಾಗಿ ಮಹಿಳಾ ವಿಂಗ್ ಅನ್ನು ಪ್ರಾರಂಭಿಸಲಾಯ್ತು. ಬೇರೆಲ್ಲೆಡೆಗಿಂತ ಮದ್ರಾಸಿನಲ್ಲಿ ಮಹಿಳೆಯರ ಭಾಗವಹಿಸುವಿಕೆ ಹೆಚ್ಚು. ಮದ್ರಾಸಿನ ಯೂನಿಯನಲ್ಲಿ ಒಟ್ಟು ಸದಸ್ಯತ್ವದಲ್ಲಿ ಶೇ. 40ರಷ್ಟು ಮಹಿಳೆಯರದು. ತಿಂಗಳ ಸಭೆ, ಜನರಲ್ ಕೌನ್ಸಿಲ್‌ಗಳಲ್ಲಿ ಮಹಿಳೆಯರು ಕ್ರಿಯಾಶೀಲರಾಗಿ ಭಾಗವಹಿಸುತ್ತಾರೆ. ಆದರೂ ಕೆಲವು ಘಟಕಗಳನ್ನು ಬಿಟ್ಟರೆ ಯೂನಿಯನ್‌ನಲ್ಲಿ ಸಾಮಾನ್ಯ ಸ್ಥಾನಗಳಿಗೆ ಮಹಿಳೆಯರು ಚುನಾಯಿತರಾಗುವುದೇ ಇಲ್ಲ. ಮಹಿಳೆಯರು ಹೆಚ್ಚು ಮಿಲಿಟೆಂಟ್ ಆಗಿದ್ದರೂ ಹಾಗೂ ಮನೆ ಹಾಗು ಕೆಲಸದ ಸ್ಥಳಗಳಲ್ಲಿನ ತಮ್ಮ ಸಮಸ್ಯೆಗಳನ್ನೂ ಅಭಿವ್ಯಕ್ತಿಸಲು ಯೂನಿಯನ್ ಸಹಾಯ ಮಾಡಿದ್ದರೂ ಸಹ ಮುಂದಾಳತ್ವದಲ್ಲಿ ಅವರ ಸಂಖ್ಯೆ ಬಹಳ ಕಡಿಮೆ.

ಕೆಲಸದ ಸ್ಥಳದಲ್ಲಿ ಸಮಸ್ಯೆಗಳ ಜೊತೆಗೆ ಕೌಟುಂಬಿಕ ಸಮಸ್ಯೆಗಳಿಗೂ ಯೂನಿಯನ್ ಕೆಲಸ ಮಾಡಿದೆ. ವಿವಾಹ, ವಿಚ್ಛೇದನ, ಸಾವು ನೋವುಗಳಂತ ಕೌಟುಂಬಿಕ ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನಿಸಿದೆ. ಮಹಿಳೆಯರು ಸಂಘಟನೆಯ ಹಾದಿಯಲ್ಲಿ ಸಾಕಷ್ಟು ಕ್ರಮಿಸಿದ್ದರೂ ಅವರಿಗೆ ಕನಿಷ್ಟ ವೇತನವಾಗಲಿ, ಹೆಚ್ಚಿನ ಕೌಶಲ್ಯ ಪಡೆಯುವ ಅವಕಾಶವಾಗಿ ದೊರೆತಿಲ್ಲ. ಪುರುಷರ ಕೂಲಿ ಶೀಘ್ರವಾಗಿ ಹೆಚ್ಚಿದ್ದರು ಮಹಿಳೆಯರ ಕೂಲಿಯನ್ನು ಅವರು ಕುಶಲ ಕಾರ್ಮಿಕರಲ್ಲವೆಂದು ಹೆಚ್ಚಿಸುವುದಿಲ್ಲ. ಸದ್ಯ ಈ ವಿಷಯ ಯೂನಿಯನ್‌ನಲ್ಲಿ ಮುಖ್ಯ ಸಮಸ್ಯೆಯಾಗಿದೆ. ಯಾವ ಕೆಲಸವನ್ನು ಕುಶಲ ಕೆಲಸವಲ್ಲವೆನ್ನುತ್ತಾರೊ ಆ ಕೆಲಸದಲ್ಲಿರುವ ಕೌಶಲ್ಯಕ್ಕೆ ಮನ್ನಣೆ ದೊರೆತಿಲ್ಲ. ಈ ಕೌಶಲ್ಯವನ್ನು ಗುರುತಿಸುವ ಮನ್ನಣೆ ನೀಡುವ ಕೆಲಸವನ್ನು ಮಾಲೀಕರು, ಕಾರ್ಮಿಕರು ಇಬ್ಬರೂ ಮಾಡಿಲ್ಲ. ಉದಾ.ಗೆ ಮೇಸ್ತ್ರಿಗೆ ಸಹಾಯ ಮಾಡುವ, ಅವನಿಗೆ ಬಿರಾರುವಾಕ್ಯಾಗಿ ಬೇಕಾಗುವ ಸಿಮೆಂಟು ಇಟ್ಟಿಗೆಯನ್ನು ತಲುಪಿಸುವುದು, ತಲೆ ಮೇಲೆ ಭಾರ ಹೊತ್ತು ಸಮತೋಲನದಿಂದ ಅಟ್ಟಣೆಯನ್ನು ಹತ್ತುವುದು ಇಲ್ಲೆಲ್ಲ ಮಹಿಳೆಯರ ಕೌಶಲ್ಯವಿದೆ. ಆದರೆ ಇವನ್ನು ಕೌಶಲ್ಯವೆಂದು ಪರಿಗಣಿಸಿಲ್ಲ.

ಗೀತಾ

ಕೃಪೆ : *A Space within the struggle*

ಸಂಪಾದಕರು : ಇಲೀನ ಸೆನ್

ಛತ್ತೀಸ್‌ಘರ್ ಕಾರ್ಮಿಕರ ಹೋರಾಟದಲ್ಲಿ ಮಹಿಳಾ ಮುಕ್ತಿ ಮೋರ್ಚಾದ ಪಾತ್ರ

ಕಳೆದ ೩೦-೩೩ ವರ್ಷಗಳಲ್ಲಿ ಚತ್ತಿಸ್‌ಘರ್ ಕಾರ್ಮಿಕರ ಚಳುವಳಿಯಲ್ಲಿ ಮಹಿಳೆಯರ ಪಾತ್ರ ಹಿರಿದು. ಚಳುವಳಿಯು ಟ್ರೇಡ್ ಯೂನಿಯನ್ ಚಟುವಟಿಕೆಯಾಗಿ ಪ್ರಾರಂಭಗೊಂಡು, ಅದರಾಚೆಗೂ ಬೆಳೆದಿದೆ. ಇಡಿ ಚಳುವಳಿ ರಾಜ್ಯ ಹಾಗು ರಾಷ್ಟ್ರೀಯ ರಾಜಕೀಯದಲ್ಲಿ 'ಛತ್ತಿಸ್‌ಘರ್ ಪ್ರಶ್ನೆ'ಯ ಅನುಭವದಿಂದ ಸಶಕ್ತಗೊಂಡಿದೆ ಅಲ್ಲದೆ ಅದನ್ನು ಶಕ್ತಗೊಳಿಸಿದೆ ಕೂಡ.

ಮಧ್ಯ ಪ್ರದೇಶದ ಪೂರ್ವದಲ್ಲಿನ ರಾಯ್‌ಪುರ, ಬಿಲಾಸ್‌ಪುರ, ದರ್ಗ್, ರಾಜ್‌ನಂದ್‌ಗಾವ್, ರಾಯ್‌ಗರ್, ಸರ್‌ಗುಜ ಹಾಗು ಬಸ್ತಾರ್ ಜಿಲ್ಲೆಗಳನ್ನೊಳಗೊಂಡ ಪ್ರದೇಶವನ್ನು ಚತ್ತಿಸ್‌ಘರ್ ಎಂದು ಕರೆಯಲಾಗುತ್ತದೆ. ಈ ಪ್ರದೇಶವನ್ನು ಆಡಳಿತಾತ್ಮಕ ದೃಷ್ಟಿಯಿಂದಲೂ, ಹಾಗು ಸಾಮಾಜಿಕ-ಸಾಂಸ್ಕೃತಿಕ ಮತ್ತು ಭಾಷಾವಾರು ಆಧಾರದ ಮೇಲೂ ವಿಭಾಗಿಸಲಾಗಿದೆ. ಆದಿವಾಸಿ ಪಂಗಡಗಳು ತಮ್ಮ ತಮ್ಮದೆ ಭಾಷೆಯನ್ನು ಉಳಿಸಿಕೊಂಡಿದ್ದರೂ ಎಲ್ಲರೂ ಸಾಮಾನ್ಯವಾಗಿ ಆಡುವ ಭಾಷೆ 'ಚತ್ತಿಸ್‌ಘರಿ'. ಈ ಪ್ರದೇಶದಲ್ಲಿ ಶೇ. 80ರಷ್ಟು ಸ್ಥಳೀಯ ಆದಿವಾಸಿ ಪಂಗಡಗಳೊಂದಿಗೆ ಉತ್ತರ ಪ್ರದೇಶ, ಮಹಾರಾಷ್ಟ್ರದಿಂದ ವಲಸೆ ಬಂದ ಜನರೂ ಇದ್ದಾರೆ. ದೇಶದ ಅತ್ಯುತ್ತಮ ಖನಿಜ ಸಂಪತ್ತು ಈ ಪ್ರದೇಶದಲ್ಲಿದೆ. ಕಲ್ಲಿದ್ದಲು, ಕಬ್ಬಿಣದ ಅದಿರು, ಬಾಕ್ಸೈಟ್, ಟಿನ್, ಯುರೇನಿಯಂ, ಸುಣ್ಣದ ಕಲ್ಲು, ಕ್ವಾಂಟ್‌ಜೈಟ್, ಹಾಲೊಮೈಟ್ ಗಣಿಗಳು ಈ ಪ್ರದೇಶದಲ್ಲಿವೆ. ಖನಿಜ ಸಂಪತ್ತಿನಿಂದಾಗಿ ಸ್ವಾತಂತ್ರ್ಯ ನಂತರ ಗಣಿ ಕೈಗಾರಿಕೆ, ಖನಿಜ ಕೈಗಾರಿಕೆಗಳು ಇಲ್ಲಿ ಪ್ರಾರಂಭಗೊಂಡವು. ಅತಿ ದೊಡ್ಡ ಸಾರ್ವಜನಿಕ ಉದ್ದಿಮೆಗಳಾದ ಭಿಲೈನಲ್ಲಿ ಭಿಲೈ ಸ್ಟೀಲ್ ಪ್ಲಾಂಟ್, ಕೊರ್‌ಬಾದಲ್ಲಿ ಭಾರತ್ ಅಲ್ಯುಮಿನಿಯಂ ಕಂಪನಿ, ನ್ಯಾಶನಲ್ ಥರ್ಮಲ್ ಪವರ್ ಕಾರ್ಪೊರೇಷನ್ ಘಟಕಗಳನ್ನು ಸ್ಥಾಪಿಸಲಾಯಿತು. ಸ್ಥಳೀಯ ಜನರಿಗಿಂತ ಹೆಚ್ಚಿನ ವಿದ್ಯಾಭ್ಯಾಸ ಹೊಂದಿದ್ದ ಕಾರಣ, ದೇಶದ ಇತರೆ ಪ್ರದೇಶಗಳಿಂದ ವಲಸೆ ಬಂದ ಜನರು ಹೆಚ್ಚಿನ ಹಾಗು ಉತ್ತಮ ಉದ್ಯೋಗಾವಕಾಶಗಳನ್ನು ಪಡೆದರು. ಸ್ಥಳೀಯ ಜನರು ಹೆಚ್ಚಿನ ಒತ್ತಡಕ್ಕೊಳಪಟ್ಟರು. ಅಲ್ಲದೆ ಅನೇಕ ವರ್ಷಕಾಡಿದ ಬರದಿಂದಾಗಿ ಹೆಚ್ಚಿನ ಜನಸಂಖ್ಯೆ ಹೊರಗೆ ವಲಸೆ ಹೋಗುವಂತಾಯಿತು.

ಈ ಹಿನ್ನೆಲೆಯಲ್ಲಿ 1977ರಲ್ಲಿ ದಗ್‌ಜಿಲ್ಲೆಯ ದಲ್ಲಿರಾಜ್ ಹರಾದಲ್ಲಿ 'ಛತ್ತೀಸ್‌ಘರ್ ಗಣಿ ಕಾರ್ಮಿಕರ ಸಂಘ'ವು ರೂಪುಗೊಂಡಿತು. ಇಲ್ಲಿನ ಕಬ್ಬಿಣದ ಅದಿರು ಗಣಿಯು 1956ರಿಂದಲೂ ಸೋವಿಯತ್ ಅನುದಾನ ಪಡೆದ ಬಿಲೈನ್ ಸ್ಟೀಲ್ ಪ್ಲಾಂಟ್‌ನ ಹಿಡಿತಕ್ಕೊಳಪಟ್ಟಿದೆ. ಗಣಿಯ ಕೆಲಭಾಗ ಯಾಂತ್ರಿಕೃತಗೊಂಡಿದ್ದರೆ, ಕೆಲಭಾಗ ಕಾರ್ಮಿಕ ಸಂಪನ್ಮೂಲ ವನ್ನವಲಂಭಿಸಿದೆ. ಕೇಂದ್ರ ಕಾರ್ಮಿಕ ಸಂಘಟನೆಯ ವಿರುದ್ಧ ಇಲ್ಲಿನ ಕೈದುಡಿಮೆ (Manual) ಗಣಿ ಕಾರ್ಮಿಕರು ನಡೆಸಿದ ಪ್ರತಿಭಟನೆಯ ಅಂಗವಾಗಿ ಚತ್ತಿಸ್‌ಘರ್ ಗಣಿ ಕಾರ್ಮಿಕರ ಸಂಘವು ಪ್ರಾರಂಭವಾಯಿತು. ಸಂಘವು ವರ್ಗ ಹಾಗು ಉಪ-ರಾಷ್ಟ್ರೀಯ ಹಿತಾಸಕ್ತಿಗಳ ಪ್ರಬಲ ಪರಂಪರೆಯನ್ನು ಹೊಂದಿದೆ. ಈ ಗುಣದ ಆಧಾರದ ಮೇಲೆಯೇ ಸಂಘದ ರಚನೆ ರೂಪುಗೊಂಡಿದೆ. ಸಂಘದ ಮೊದಲ ಹೋರಾಟವು ಪ್ರಾರಂಭಗೊಂಡದ್ದು ಗುತ್ತಿಗೆ ಕಾರ್ಮಿಕರ ವಸತಿ ಹಾಗು ವಸತಿ ಭತ್ಯೆಯ ಬೇಡಿಕೆಯಿಂದ. ಹೋರಾಟದ ಫಲವಾಗಿ 1977ರಲ್ಲಿ 4 ರೂ. ಕೂಲಿ ಇದ್ದದ್ದು 1983-84ರಲ್ಲಿ ರೂ. 29 ಆಯಿತು. ಸಂಘವು ದಲ್ಲಿರಾಜ್ ಹರಾದಲ್ಲೆ ಸುಮಾರು 80,000 ಕಾರ್ಮಿಕರನ್ನು ಹೊಂದಿದೆ. ಯಾಂತ್ರೀಕೃತ ಗಣಿಗಳಲ್ಲಿನ ಕಾರ್ಮಿಕರಿಗೂ, ಕೈದುಡಿಮೆ ಆಧರಿಸಿದ ಗಣಿ ಕಾರ್ಮಿಕರಿಗೂ ಕೆಲಸದ ಪರಿಸ್ಥಿತಿ ಹಾಗು ಸಂಬಳ ಸೌಲಭ್ಯಗಳಲ್ಲಿ ಸಾಕಷ್ಟು ವ್ಯತ್ಯಾಸವಿತ್ತು. ಯಾಂತ್ರೀಕೃತ ಗಣಿಗಳಲ್ಲಿ ಕಾರ್ಮಿಕರು ನೇರವಾಗಿ ಕೆಲಸ ಮಾಡಿದರೆ ಕೈದುಡಿಮೆ ಗಣಿಗಳಲ್ಲಿ ಕಾಂಟ್ರಾಕ್ಟರುಗಳ ಮೂಲಕ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದರು. ಇವರು ಯಾಂತ್ರೀಕೃತ ಗಣಿಗಳಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ಹೊಂದಿದ್ದ ಯಾವುದೇ ಸೌಲಭ್ಯಗಳನ್ನು ಹೊಂದಿರಲಿಲ್ಲ. ಗುತ್ತಿಗೆ ಕಾರ್ಮಿಕರು ಸುತ್ತಮುತ್ತಲಿನ ಜಮೀನಿಲ್ಲದ, ಬಡ ರೈತ ಸಮುದಾಯದಿಂದ ಬಂದರೆ, ಯಾಂತ್ರೀಕೃತ ಗಣಿ ಕಾರ್ಮಿಕರು ಮಧ್ಯಮ/ಕೆಳ ಮಧ್ಯಮ ವರ್ಗದಿಂದ ಬಂದವರು.

ಛತ್ತಿಸ್‌ಗರ್ ಕಾರ್ಮಿಕ ಸಂಘವು ರಾಜ್ಯ ಹಾಗು ಆಡಳಿತ ವರ್ಗದವರಿಂದ ತೀವ್ರ ಹಗೆತನ, ದಮನವನ್ನೆದುರಿಸಿದೆ. 1977ರಲ್ಲಿ ನಡೆದ ಕಾರ್ಮಿಕರ ಧರಣಿಯಲ್ಲಿ 11 ಜನ ಕಾರ್ಮಿಕರು ಪೋಲಿಸರಿಗೆ ಬಲಿಯಾದರು. 1981ರಲ್ಲಿ ನ್ಯಾಶನಲ್ ಸೆಕ್ಯೂರಿಟಿ ಆಕ್ಟ್‌ನಡಿ ಪ್ರಮುಖ ಕಾರ್ಮಿಕ ನಾಯಕರುಗಳು ಬಂಧಿಸಲ್ಪಟ್ಟರು. ಎಲ್ಲವನ್ನು ಎದುರಿಸಿಯೂ ಸಂಘ ಶಕ್ತವಾಗಿ ಬೆಳೆದಿದೆ. ಸಂಘದ ಚಟುವಟಿಕೆಗಳು ಕೆಲಸದ ಸ್ಥಳಕ್ಕಷ್ಟೆ ಸೀಮಿತವಾಗದೆ ಅದರಾಚೆಗೂ ವಿಸ್ತರಿಸಿದ್ದು ಗಮನಿಸಬೇಕಾದ ಅಂಶ. ಅನಾರ್ಥಿಕ ವಿಶಯಗಳನ್ನು ಕಾರ್ಯಕ್ರಮಗಳಲ್ಲಿ ಒಳಗೊಳ್ಳಿಸಲಾಯ್ತು. ಆರೋಗ್ಯ ಕಾರ್ಯಕ್ರಮ, ಸರಾಯಿ ವಿರೋಧಿ ಆಂದೋಲನ, ಸಾಂಸ್ಕೃತಿಕ ಮಂಡಳಿ ಇತ್ಯಾದಿಯನ್ನು ಸಂಘವು ಹಮ್ಮಿಕೊಂಡಿತು.

ಚಳುವಳಿಯಲ್ಲಿ ಮಹಿಳೆಯರು ಬಹುಮುಖ್ಯ ಪಾತ್ರ ವಹಿಸಿದರು. ದಲ್ಲಿರಾಜ್‌ಹರಾದ ಕೈದುಡಿಮೆ ಗಣಿಗಳಲ್ಲಿ ಹೆಚ್ಚು ಕಡಿಮೆ ಅರ್ಧದಷ್ಟು ಕಾರ್ಮಿಕರು ಮಹಿಳೆಯರು. ಅಲ್ಲಿನ ಕೆಲಸದ ಸ್ವಭಾವವು ಜೊತೆಯಾಗಿ (Pairs) ಕೆಲಸ ಮಾಡಲು ಅನುಕೂಲವಾಗಿದೆ. ಆ ಕಾರಣ ಗಂಡ ಹೆಂಡತಿಯರು ಜೊತೆಯಾಗಿ ಕೆಲಸ ಮಾಡುವುದು ಸಾಮಾನ್ಯ. ಇಲ್ಲಿನ ಕಾರ್ಮಿಕರು ಸುತ್ತಮುತ್ತಲಿನ ಸಣ್ಣ ಹಾಗು ಮಧ್ಯಮ ರೈತ ಮನೆಗಳಿಂದ ಬಂದವರು. ಕೃಷಿಯಲ್ಲೂ ಸಹ ಮಹಿಳೆಯರು ಸಮಾನವಾಗಿ ದುಡಿಯುತ್ತಾರೆ. ಈ ಪರಿಸ್ಥಿತಿ ಯಾಂತ್ರೀಕೃತ ಗಣಿಗಳಲ್ಲಿ ಇಲ್ಲ. ಕೌಶಲ್ಯ ಹಾಗು ವಿದ್ಯಾಭ್ಯಾಸದ ಅವಶ್ಯಕತೆಗಳು ಮಹಿಳೆಯರನ್ನು ಯಾಂತ್ರೀಕೃತ ಗಣಿಗಳಿಂದ ದೂರವಿರಿಸಿವೆ.

ಚತ್ತಿಸ್‌ಘರ್ ಗಣಿ ಕಾರ್ಮಿಕ ಚಳುವಳಿಯ ಎಲ್ಲಾ ಹೋರಾಟಗಳಲ್ಲೂ, ಕಾರ್ಯ ಚಟುವಟಿಕೆಗಳಲ್ಲೂ ಮಹಿಳೆಯರು ಸಕ್ರೀಯವಾಗಿ ಪಾಲ್ಗೊಂಡಿದ್ದಾರೆ. 1977ರಲ್ಲಿ ನಡೆದ ಮೊದಲ ಮುಷ್ಕರ ಹಾಗು 1981ರಲ್ಲಿ ನ್ಯಾಶನಲ್ ಸೆಕ್ಯೂರಿಟಿ ಆಕ್ಟ್‌ನಡಿ ಬಂಧಿತರಾದ ನಾಯಕರುಗಳ ಬಿಡುಗಡೆಗಾಗಿ ನಡೆದ ಹೋರಾಟದಲ್ಲಿ ಮಹಿಳೆಯರು ಪ್ರಮುಖ ಪಾತ್ರ ವಹಿಸಿದ್ದಾರೆ. ಸರಾಯಿ ವಿರೋಧಿ ಆಂದೋಲನದಲ್ಲಿ ಮಹಿಳೆಯರು ಮಂಚೂಣಿಯಲ್ಲಿದ್ದು ಕೆಲಸ ಮಾಡಿದ್ದಾರೆ. ಆಂದೋಲನದ ಹಿಂದಿನ ತಾತ್ವಿಕತೆಯನ್ನು ಸಾರುವಲ್ಲಿ/ತಪ್ಪಿತಸ್ಥರನ್ನು ಹುಡುಕಿ ಶಿಕ್ಷೆ ನೀಡಲು ಮೊಹಲ್ಲಾಗಳಲ್ಲಿ ಕಮಿಟಿಗಳನ್ನು ಸಂಘಟಿಸುವಲ್ಲಿ ಪುರುಷರಿಗಿಂತ ಮಹಿಳೆಯರೇ ಹೆಚ್ಚು ದುಡಿದಿದ್ದಾರೆ.

ಪ್ರಾರಂಭದ ಹಂತದಲ್ಲಿ ಮಹಿಳೆಯರೆ ಅನುಭವಿಸುತ್ತಿದ್ದ ಲೈಂಗಿಕ ಕಿರುಕುಳಕ್ಕೆ ಗಮನ ನೀಡಲಾಯ್ತು. ಚಳುವಳಿಗೆ ಮೊದಲು ಕಂಟ್ರಾಕ್ಟರುಗಳು ಮತ್ತವರ ಅನುಯಾಯಿಗಳಿಂದ ಅನುಭವಿಸುತ್ತಿದ್ದ ಲೈಂಗಿಕ ಕಿರುಕುಳ, ಲೈಂಗಿಕ ಕಿರುಕುಳವನ್ನು ಒಂದು ಸಾಧನ ಮಾಡಿಕೊಂಡು ಮಹಿಳೆಯರನ್ನಲ್ಲದೆ ಅವರ ಗಂಡಂದಿರನ್ನು ಅಧೀನ ಮಾಡಿಕೊಳ್ಳುತ್ತಿದ್ದಂತಹ ಭಯಾನಕ ಕತೆಗಳನ್ನು ಮಹಿಳೆಯರು ಹೇಳುತ್ತಾರೆ. ಮಹಿಳೆಯರು ಚಳುವಳಿಯಲ್ಲಿ ತಾವು ಪಡೆದುಕೊಂಡ ಹೊಸ ಶಕ್ತಿಯಿಂದ ಲೈಂಗಿಕ ಕಿರುಕುಳವನ್ನು ಪ್ರಬಲವಾಗಿ ವಿರೋಧಿಸಲು ಸಿದ್ಧರಾದರು ಮತ್ತು ಬಿಡುಗಡೆಯನ್ನು ಪಡೆದುಕೊಂಡರು. 1980ರಲ್ಲಿ CISF ಸೈನಿಕರು ಆದಿವಾಸಿ ಹುಡುಗಿಯೊಬ್ಬಳ ಬಲಾತ್ಕಾರಕ್ಕೆ ಪ್ರಯತ್ನಿಸಿದ್ದನ್ನು ಸಂಘಟನೆಯ ಮಹಿಳೆಯರು ಪ್ರಬಲವಾಗಿ ವಿರೋಧಿಸಿದರು. ಅವರ ಪ್ರಯತ್ನದಿಂದಾಗಿಯೇ ಆರೋಪಿಗಳ ವಿರುದ್ಧ ಕಾನೂನಿನ ಕ್ರಮ ಜರುಗಿಸಲಾಯ್ತು.

ಈ ರೀತಿಯ ಅನುಭವಗಳೇ 1980-81ರಲ್ಲಿ ಮಹಿಳಾ ಮುಕ್ತಿ ಮೋರ್ಚಾದ ಪ್ರಾರಂಭಕ್ಕೆ ಬುನಾದಿಯಾಯ್ತು. ಹೆಂಡತಿಯನ್ನು ಥಳಿಸುವುದು, ಮಹಿಳೆಯರನ್ನು ತೊರೆದು ಹೋಗುವುದು, ವೈವಾಹಿಕ ಜಗಳಗಳು ಇತ್ಯಾದಿ ಸ್ತ್ರೀ ಸಂಬಂಧಿ ವಿಶಯಗಳನ್ನು ಕುರಿತು ಹೋರಾಡಲು ಮ.ಮು.ಮೊ.ವನ್ನು ರಚಿಸಲಾಯ್ತು. ಕಾರ್ಮಿಕ ಚಳುವಳಿಯ ಸಮುದಾಯವನ್ನು ಸಂಘಟಿಸುವ ಪ್ರಬಲ ಶಕ್ತಿಯಾಗಿ ಬೆಳೆಯುತ್ತಿದ್ದಂತೆ ಮೇಲೆ ತಿಳಿಸಿದ ಅನೇಕ ಸಮಸ್ಯೆಗಳನ್ನು ಸಂಘಟನೆಯು ಹೆಚ್ಚಿನ ಸಂಖ್ಯೆಯಲ್ಲಿ ಎದುರಿಸಬೇಕಾಯ್ತು. ಬಗೆಹರಿಸುವುದು ಸಂಘಟನೆಯ ರಚನೆಗೆ ಸಾಧ್ಯವಾಗಲಿಲ್ಲ. ಅಲ್ಲದೆ ಚಳುವಳಿಯಲ್ಲಿ ಮುಂದಾಳತ್ವ ವಹಿಸಲು ಮಹಿಳೆಯರು ಮುಂದೆ ಬರುತ್ತಿರಲಿಲ್ಲ. ಅವರದೆ ಒಂದು ವೇದಿಕೆಯಾದರೆ ಅವರ ಸಾಂಸ್ಕೃತಿಕ ಹಾಗು ಸಾಮಾಜಿಕ ಹಿಂದುಳುವಿಕೆಯನ್ನು ಮೀರಲೂ ಸಾಧ್ಯವಾಗಬಹುದು. ವೇದಿಕೆಯ ನಿತ್ಯದ ಸಂಘಟಿಸುವ ಅನುಭವದ ಮೂಲಕ, ಸಾರ್ವಜನಿಕ ಭಾಷಣಗಳ ಮೂಲಕ ಮಹಿಳಾ ನಾಯಕತ್ವದ ಸಾಧ್ಯತೆಗಳು ಮೂಡಬಹುದು. ಇವೆಲ್ಲದರ ಪರಿಣಾಮವಾಗಿ ಮ.ಮು.ಮೊ. ಪ್ರಾರಂಭವಾಯಿತು.

1980-81ರಿಂದ 1986-87ರವರೆಗೆ ಮ.ಮು.ಮೊ. ಒಂದು ಸಾಮಾಜಿಕ ಶಕ್ತಿಯಾಗಿ ಅಸಂಘಟಿತ ಕಾರ್ಮಿಕರು, ಗುತ್ತಿಗೆ ಕೆಲಸಗಾರರು ಇದ್ದ ದಲ್ಲಿರಾಜ್‌ಹರಾದಲ್ಲಿ ಕೆಲಸ ಮಾಡಿತು. ಸಾರಾಯಿ ವಿರೋಧಿ ಆಂದೋಲನವನ್ನು ಮಹಿಳೆಯರು ಕೈಗೆತ್ತಿಕೊಂಡರು. ಸಾರಾಯಿ ಅಂಗಡಿಗಳ ಮುಂದೆ ಪಿಕೇಟಿಂಗ್, ಅಪರಾಧಿಗಳನ್ನು ಮೊಹಲ್ಲದಲ್ಲಿ ಕಂಡುಹಿಡಿಯುವಂತಹ ಕೆಲಸಗಳನ್ನು ಮಮು.ಮೊ. ಮಾಡಿತು. ಸಾರ್ವಜನಿಕ ಬೆಂಬಲ ಹಾಗು ಆಡಳಿತ ಕ್ರಮಗಳನ್ನು ಒತ್ತಾಯಿಸಿ ಬಸ್‌ಸ್ಟ್ಯಾಂಡುಗಳಲ್ಲಿ ಪ್ರತ್ಯೇಕ ಪಾಯಿಖಾನೆ, ಸಿನಿಮಾ ಹಾಲುಗಳಲ್ಲಿ ಮಹಿಳೆಯರಿಗೆ ಕಿರುಕುಳ ನೀಡುತ್ತಿದ್ದ ಪುಂಡರನ್ನು ದಂಡಿಸುವಂತಹ ಅನೇಕ ಕೆಲಸಗಳನ್ನು ಮ.ಮು.ಮೊ. ಮಾಡಿತು. ಇದರಿಂದಾಗಿ ಸಿನಿಮಾ ಹಾಲುಗಳಲ್ಲಿ ಮಹಿಳೆಯರಿಗೆ ಪ್ರತ್ಯೇಕ ಸ್ಥಾನವನ್ನು ಕಾದಿರಿಸುವಂತಾಯಿತು. ಛ.ಗ.ಕಾ.ಸಂ ಹಾಗು ಮ.ಮು.ಮೊ. ಕೈಗೊಂಡ ಹೋರಾಟಗಳಲ್ಲಿ ಪಾಲ್ಗೊಳ್ಳಲು ಮಹಿಳೆಯರನ್ನು ಸಂಘಟಿಸುವ ಕೆಲಸವನ್ನು ಮ.ಮು.ಮೊ. ಮಾಡಿತು. ನಾದಿಯ ದೇವಸ್ಥಾನದ ಜಮೀನನ್ನು ಅಲ್ಲಿನ ಮುಖ್ಯಸ್ಥನೊಬ್ಬ ಸ್ವಂತ ಲಾಭಕ್ಕಾಗಿ ಬಳಸಿಕೊಳ್ಳುವುದನ್ನು ವಿರೋಧಿಸಿ, 1982 ಸೆಪ್ಟೆಂಬರ್‌ನಲ್ಲಿ ಮಹಿಳೆಯರ ಬಹು ದೊಡ್ಡ ರ್‍ಯಾಲಿಯನ್ನು ಮ.ಮು.ಮೊ. ಸಂಘಟಿಸಿತು. ತನ್ನ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಮಹಿಳೆಯರು ಪಾಲ್ಗೊಳ್ಳಲು ಮ.ಮು.ಮೊ.ವು ಹಳ್ಳಿ ಹಳ್ಳಿಗೆ ಹೋಗಿ ಮಹಿಳೆಯರನ್ನು ಸಂಘಟಿಸಿತು. ಸಂಘಟನಾ ಸಭೆಗಳನ್ನು ನಿಯಮಿತವಾಗಿ ಕಾರ್ಯನಿರ್ವಾಹಕ ಮಂಡಳಿಯ ಹಾಗು

ಛ.ಗ.ಕಾ.ಸಂ. ದ ಕಾರ್ಯನಿರ್ವಾಹಕ ಮಂಡಳಿಯ ಮಹಿಳೆಯರು ನಡೆಸಿದರು. ಅನೇಕ ಮಹಿಳಾ ಚಳ್ಳುವಳಿಯ ಕಾರ್ಯಕರ್ತೆಯರೊಂದಿಗೆ 'ಮಹಿಳಾ ಪ್ರಶ್ನೆ' ಕುರಿತು ಅನೇಕ ಚರ್ಚೆ ಹಾಗು ಸೈದ್ಧಾಂತಿಕ ವಿಶ್ಲೇಷಣೆಯನ್ನು ಕಾರ್ಯ ನಿರ್ವಾಹಕ ಮಂಡಳಿ ನಡೆಸಿತು.

ಮ.ಮು.ಮೊ.ದ ಬಹು ಮುಖ್ಯ ಸಾಧನೆಯೆಂದರೆ ಕಾರ್ಮಿಕರಾಗಿ ಮಹಿಳೆಯರು ಸಮಾನ ಹಾಗು ಜನ್ಮಸಿದ್ಧ ಹಕ್ಕುಗಳನ್ನು ಕಾರ್ಯ ರೂಪದಲ್ಲಿ, ಸೈದ್ಧಾಂತಿಕವಾಗಿ ಬಲವಾಗಿ ಪ್ರತಿಪಾದಿಸಿದ್ದು. ಕಾರ್ಮಿಕ ಚಳುವಳಿಯು ಪ್ರಭಾವಶಾಲಿಯಾಗಿ ಬೆಳೆದಿದ್ದರೂ, ವೇತನಕ್ಕೆ ಸಂಬಂಧಪಟ್ಟಂತೆ ಮಹಿಳೆಯರು ತಾರತಮ್ಯವನ್ನನುಭವಿಸಿದ್ದರು. ಹೆರಿಗೆ ರಜೆ, ಹೆರಿಗೆ ಸೌಲಭ್ಯಗಳು, ಮಕ್ಕಳಿಗಾಗಿ, ಕೆಲಸ ಮಾಡುವ ಸ್ಥಳಗಳಲ್ಲಿ ಕ್ರೆಶ್‌ಗಳು ಅವರಿಗೆ ಲಭ್ಯವಿರಲಿಲ್ಲ. ಕಾರ್ಮಿಕ ಚಳುವಳಿಯ ಮಹಿಳೆಯರು ಮತ್ತು ಪುರುಷರು ನಡೆಸಿದ ಹೋರಾಟದ ಫಲ 1980ರಲ್ಲಿ ಮೇಲೆ ಹೇಳಿದ ಸೌಲಭ್ಯಗಳು ಅವರಿಗೆ ದೊರೆತವು. ಮುಂದೆ ಯಾಂತ್ರೀಕರಣವನ್ನು ವಿರೋಧಿಸುವುದು ಮ.ಮು.ಮೊ. ಹಾಗು ಛ.ಗ.ಕಾ.ಸಂ. ದ ಆದ್ಯತೆಯಾಯಿತು. 1975ರ ನಂತರ ಉಕ್ಕಿನ ಉತ್ಪಾದನೆಯು ಹೆಚ್ಚಿ ಸ್ಥಿರತೆಯನ್ನು ಪಡೆದಾಗ, ಗಣಿಗಳನ್ನು ಯಾಂತ್ರೀಕೃತಗೊಳಿಸುವ ಯೋಜನೆಗಳು ಪ್ರಾರಂಭವಾದವು. ಇದರಿಂದಾಗಿ 20 ವರ್ಷಕ್ಕೂ ಹೆಚ್ಚು ಗುತ್ತಿಗೆ ಕೆಲಸಗಾರರಾಗಿ ಕೆಲಸ ಮಾಡುತ್ತಿದ್ದವರಿಗೆ ದೊಡ್ಡ ಹೊಡೆತ ಬಿತ್ತು. ಗುತ್ತಿಗೆ ಕೆಲಸಗಾರರನ್ನು ಖಾಯಂಗೊಳಿಸುವ ಮೂಲಕ ಯಾಂತ್ರೀಕರಣವನ್ನು ವಿರೋಧಿಸುವುದು ಚಳುವಳಿಯ ಉದ್ದೇಶವಾಗಿತ್ತು. ಕಾರ್ಮಿಕರ ಹೋರಾಟವನ್ನು ಮುರಿಯಲು ಆಡಳಿತ ವರ್ಗ ಅನೇಕ ತಂತ್ರಗಳನ್ನು ರೂಪಿಸಿತು. ತಂತ್ರದ ಒಂದು ಅಂಗವಾಗಿ ಸ್ವಯಂ ನಿವೃತ್ತಿ ಯೋಜನೆಯನ್ನು ಜಾರಿಗೆ ತಂದಿತು. 15 ವರ್ಷಕ್ಕೂ ಹೆಚ್ಚು ಕೆಲಸ ಮಾಡಿರುವ ಮಹಿಳೆಯರು ನಿವೃತ್ತಿ ಪಡೆದರೆ ಆಕರ್ಷಕ ಪರಿಹಾರ ಧನವನ್ನು ನೀಡುವುದಾಗಿ ಘೋಷಿಸಲಾಯ್ತು. ಈ ಹೊತ್ತಿಗಾಗಲೆ ಯಾಂತ್ರೀಕರಣವು ನೀಡಬಹುದಾದ ಹೊಡೆತದ ಸಂಪೂರ್ಣ ಅರಿವು ಮಹಿಳೆಯರಲ್ಲಿ ಮೂಡಿತ್ತು. ಸ್ವಯಂ ನಿವೃತ್ತಿಯ ವಿರುದ್ಧ ಮ.ಮು.ಮೊ. ಹಾಗು ಛ.ಗ.ಕಾ.ಸಂಗಳು ದೃಢ ನಿರ್ಧಾರ ಕೈಗೊಂಡವು. ಭಿಲಾಸ್‌ಪುರದ ಗಣಿಗಳಲ್ಲಿ ಆಡಳಿತ ವರ್ಗದವರು ಹೆಚ್ಚಿನ ಆಮಿಷ ಒಡ್ಡಿದರು. ಮಹಿಳೆಯರು ಸ್ವಯಂ ನಿವೃತ್ತಿ ತೆಗೆದುಕೊಂಡರೆ ಅವರ ಗಂಡಂದಿರಿಗೆ 100 ಕಿ.ಮೀ. ದೂರದ ಬಿಲ್ಲೈನ ಮುಖ್ಯ ಘಟಕದಲ್ಲಿ ಖಾಯಂ ನೌಕರಿ ನೀಡುವುದಾಗಿ ಹೇಳಿತು. ದಲ್ಲಿರಾಜ್ ಹರಾದಿಂದ ಸುಮಾರು 300 ಮಹಿಳೆಯರು ಹಿರ್ರಿಗೆ ಹೋಗಿ ಚರ್ಚೆಗಳನ್ನು, ಸಭೆಗಳನ್ನು ನಡೆಸಿದರು. 1987ರಲ್ಲಿ 'ಯಾಂತ್ರೀಕರಣ ಹಾಗು ಮಹಿಳೆ' ಎಂಬ ವಿಷಯ ಕುರಿತು ಬಹುದೊಡ್ಡ ಮಹಿಳಾ ಕೆಲಸಗಾರರ ಸಮಾವೇಶವನ್ನು ನಡೆಸಲಾಯ್ತು.

ಮ.ಮು.ಮೊ.ವನ್ನು ಟ್ರೇಡ್ ಯೂನಿಯನ್ ಅನುಭವದ ಮೇಲೆ ಬೆಳೆಸಲಾಯ್ತು. ಛ.ಗ.ಕಾ.ಸಂ. ಹಾಗು ಮ.ಮು.ಮೋದ ನಡುವೆ ನಿಕಟ ಸಂಬಂಧವಿದೆ. ಮೋರ್ಚಾದ ಸದಸ್ಯರು ಸಂಘದ ಸದಸ್ಯರು ಅಥವಾ ಸಂಘದ ಕುಟುಂಬಗಳಿಗೆ ಸಂಬಂಧಪಟ್ಟವರು. ಸದಸ್ಯತ್ವ ಕಟ್ಟುನಿಟ್ಟಿನ ಕಟ್ಟಳೆಗಳಿಗೊಳಪಟ್ಟಿಲ್ಲ. 1982ರ ಮ.ಮು.ಮೊ. ಚುನಾವಣೆಯಲ್ಲಿ ಪದಾಧಿಕಾರಿಗಳಾಗಿ ಚುನಾಯಿಸಲ್ಪಟ್ಟವರಲ್ಲಿ ಹಲವರು ಛ.ಗ.ಕಾ.ಸಂದ ಮಹಿಳಾ ಪದಾಧಿಕಾರಿಗಳು. ಮೋರ್ಚಾದ ಸಭೆಗಳನ್ನು ಸಂಘದ ಕಛೇರಿಯಲ್ಲೆ ನಡೆಸಲಾಗುತ್ತದೆ. ಹಣ ಸಂಗ್ರಹಿಸಲು, ಕಾರ್ಯಕ್ರಮ ಆಯೋಜಿಸಲು ಸಹ ಸಂಘದ ರಚನೆಯನ್ನೆ ಉಪಯೋಗಿಸಿಕೊಳ್ಳಲಾಗುತ್ತದೆ. ಎರಡರ ನಡುವಿನ ನಿಕಟ ಸಂಬಂಧವು ಲಾಭದಾಯಕವಾಗಿದೆ. ಮೋರ್ಚಾದ ಎಲ್ಲಾ ಚಟುವಟಿಕೆಗಳಿಗೆ ಸಂಗವು ಬೆಂಬಲ ನೀಡುತ್ತದೆ. ತನ್ನ ಪತ್ರಿಕೆಯಲ್ಲಿ ಮೋರ್ಚಾದ ಲೇಖನಗಳನ್ನು ನಿಯಮಿತವಾಗಿ ಪ್ರಕಟಿಸುತ್ತದೆ. ಲಾಭವಾಗುವುದರ ಜೊತೆಗೆ ಸ್ವತಂತ್ರ ಬೆಳವಣಿಗೆಗೆ ಅಡ್ಡಿಯಾಗುವ ತೊಂದರೆಯೂ ಇದೆ. ಮ.ಮು.ಮೊ.ವು ತನ್ನದೆ ಸ್ಪಷ್ಟ ಐಡೆಂಟಿಯನ್ನಾಗಲಿ ಅಥವಾ ತನ್ನದೆ ಸಂಸ್ಥೆಯನ್ನಾಗಲಿ ಹೊಂದಿಲ್ಲ. ಮಹಿಳಾ ನಾಯಕತ್ವವನ್ನು ಬೆಳೆಸುವ ನಿಟ್ಟಿನಲ್ಲೂ, ಸಂಗ ದೊಂದಿಗಿನ ನಿಕಟಕತೆಯಿಂದಾಗಿ ಮೋರ್ಚಾ ತೊಂದರೆ ಯನ್ನನುಭವಿಸಿದೆ. ಕೆಲವು ಮಹಿಳೆಯರಿಗೆ ಮೋರ್ಚಾದ ಕೆಲಸ, ಜೊತೆಗೆ ಸಂಘದ ಕೆಲಸವೂ ಸೇರಿ ಹೊರೆಯಾಗಿರುವುದು ಕಂಡುಬರುತ್ತದೆ. ಮೋರ್ಚಾದಲ್ಲಿ ತಮ್ಮದೆ ನಿರ್ದಿಷ್ಟ ವಿಷಯ ಗಳಿಗಾಗಿ ನಡೆಸುವ ಹೋರಾಟಗಳಲ್ಲಿ ಪಾಲ್ಗೊಳ್ಳಲೇಬೇಕಾದ ಅವಶ್ಯಕತೆಯು ಛತ್ತಿಸ್‌ಘರ್‌ದ ಇತರೆ ಚಳುವಳಿಯ ಮೇಲೂ ಪರಿಣಾಮ ಬೀರಿದೆ.

ಮಹಿಳಾ ಮೋರ್ಚಾವು ಮಹಿಳಾ ಪ್ರಶ್ನೆಯ ಬಗ್ಗೆ ತನ್ನದೇ ಸಿದ್ಧಾಂತ ಹಾಗು ಕಾರ್ಯಗಳನ್ನು ವರ್ಗ ಹಾಗು ಅಲ್ಲಿನ ನಿರ್ದಿಷ್ಟ ಪರಿಸ್ಥಿತಿಯನ್ನಾಧರಿಸಿ ಬೆಳೆಸಿಕೊಂಡಿದೆ. ಮೋರ್ಚಾದ ಮಹಿಳೆಯರು ಕಾರ್ಮಿಕ ಸಮಸ್ಯೆಗಿಂತ ಭಿನ್ನವಾದ ವರದಕ್ಷಿಣೆಯಂತಹ ಸಮಸ್ಯೆಗಳಿಗೆ ತಮ್ಮ ಬಲವಾದ ಸಹಭಾಗಿತ್ವ ತೋರಿಸುತ್ತಾರೆ. ಕಾರ್ಮಿಕ ವರ್ಗದ ಕುಟುಂಬಗಳಲ್ಲಿರುವ ಅಸಮಾನ ಅಧಿಕಾರಿ ಸಂಬಂಧಗಳ ಬಗ್ಗೆಯೂ ಅವರು ಪ್ರಬಲ ನಿಲುವು ಹೊಂದಿದ್ದಾರೆ.

ಇಲೀನ ಸೆನ್

ಕೃಪೆ : Space with in the struggle.

ಸಂಪಾದಕಿ : ಇಲೀನ ಸೆನ್

ಓದುಗರ ವಿಭಾಗ

'ಮೀಸಲಾತಿ ಕುರಿತ ಸಂಚಿಕೆ' - ಒಂದು ಪ್ರತಿಕ್ರಿಯೆ

೧೯೯೭ನೆಯ ಫೆಬ್ರವರಿ-ಮಾರ್ಚ್ ತಿಂಗಳ 'ಮಾನಸ' ಪತ್ರಿಕೆಯಲ್ಲಿ ಮಹಿಳಾ ಮೀಸಲಾತಿ ಕುರಿತು ಒಂದಿಷ್ಟು ಚರ್ಚೆಯನ್ನು ಮಾಡಲಾಗಿದೆ. ಈ ಸಂಚಿಕೆಯ ಲೇಖನಗಳು ಸಂಘಟನೆಗಳ, ಸಮಾಜಶಾಸ್ತ್ರಜ್ಞರ, ವಕೀಲರ, ಗಣ್ಯರ ಅನಿಸಿಕೆಗಳನ್ನು, ವಿಚಾರ ಸಂಕಿರಣದಲ್ಲಿ ಮೂಡಿಬಂದ ಅಭಿಪ್ರಾಯಗಳನ್ನು ಹಾಗೂ ಸಂದರ್ಶನಗಳನ್ನು ಒಳಗೊಂಡಿವೆ.

ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದಲೂ ಮಹಿಳೆಯರಿಗೆ ರಾಜಕೀಯ ಮೀಸಲಾತಿ ನೀಡಬೇಕೆಂದು ಎಲ್ಲ ವರದಿಗಳೂ ಒತ್ತಾಯಿಸಿದ್ದರೂ, ಅದು ಫಲಪ್ರದವಾಗದಂತೆ ಪುರುಷಪ್ರಧಾನ ವ್ಯವಸ್ಥೆ ಒಂದಲ್ಲ ಒಂದು ನೆವದಲ್ಲಿ ಅಡೆತಡೆಯೊಡ್ಡುತ್ತ ಬಂದಿರುವುದನ್ನು ಈ ಲೇಖನಗಳಲ್ಲಿ ಸವಿಸ್ತಾರವಾಗಿ ವಿಮರ್ಶಿಸಲಾಗಿದೆ. 'ಮೀಸಲಾತಿ ಮತ್ತು ಮಹಿಳಾ ಚಳುವಳಿ' ಎಂಬ ಲೇಖನವು ಮೀಸಲಾತಿಯ ಇತಿಹಾಸವನ್ನು ತಿಳಿಸುತ್ತ ಮೀಸಲಾತಿಯಿಂದ ಅಧಿಕಾರ ಪಡೆದ ಮಹಿಳೆಯರು ಪುರುಷ ಪ್ರಧಾನ ಮೌಲ್ಯದ ವಕ್ತಾರರಾಗದಂತೆ ಎಚ್ಚರಿಕೆಯಿಂದಿರಬೇಕಾದ ಅಗತ್ಯವನ್ನು ಹೇಳುತ್ತದೆ. 'ಸಮಾನತೆಯತ್ತ ಒಂದು ಹೆಜ್ಜೆ' ಸಮಾನತೆಯಲ್ಲಿ ಮಹಿಳಾ ಚಳುವಳಿಯ ಬೇಡಿಕೆಯಿಂದಾಗಿ ಮಹಿಳೆಯರಿಗೆ ಕೆಲವು ಕಾನೂನಿನ ಸವಲತ್ತುಗಳು ದೊರೆತಿರುವುದಾಗಿ ತಿಳಿಸುತ್ತ, ಮೀಸಲಾತಿಯ ಅಗತ್ಯವನ್ನು ಒತ್ತಿ ಹೇಳಲಾಗಿದೆ. ಈ ಎರಡು ಲೇಖನಗಳಲ್ಲಿ ಕ್ರಮವಾಗಿ 'ಮಾನಸ' ಮತ್ತು 'ವಿಮಲ' (ಜನವಾದಿ ಸಂಘಟನೆ) ಅಭಿಪ್ರಾಯ ವ್ಯಕ್ತವಾಗಿದೆ. ವಕೀಲರಾದ ಪ್ರೊ. ರವಿವರ್ಮ ಕುಮಾರ್ ಅವರು 'ಮಹಿಳೆಯರಿಗೆ ಮೀಸಲಾತಿ ಸಮಯ ಬರಬೇಕು' ಎನ್ನುವ ಲೇಖನದಲ್ಲಿ ಮೀಸಲಾತಿ ಮಸೂದೆಗೆ ಕೆಲವು ತಿದ್ದುಪಡಿಗಳನ್ನು ಸೂಚಿಸಿ, ಈ ಮಸೂದೆಯ ಅಂಗೀಕಾರವನ್ನು ಪಟ್ಟಭದ್ರ ಹಿತಾಸಕ್ತಿಗಳು ವಿರೋಧಿಸುತ್ತಿರುವುದಾಗಿ ಅಭಿಪ್ರಾಯ ಪಡುತ್ತಾರೆ. ಜೊತೆಗೆ, ಹಿಂದುಳಿದ ಕೋಮಿನವರಿಗೆ ಮೀಸಲಾತಿಯಲ್ಲಿ ಪ್ರಾಧಾನ್ಯ ದೊರಕಬೇಕೆಂದು ಹೇಳುತ್ತಾರೆ. ಹೆಸರಾಂತ ವಕೀಲರಾದ ಹೇಮಲತಾ ಮಹಿಷಿಯವರು 'ಮಹಿಳೆಯರಿಗೆ ಮೀಸಲಾತಿ-ರಾಜಕೀಯ ಸಮಾನತೆ' ಎಂಬ ಲೇಖನದಲ್ಲಿ ಮಹಿಳೆ ದೇಶದ ಆಗು-ಹೋಗುಗಳಲ್ಲಿ ಭಾಗವಹಿಸಲು ಮೀಸಲಾತಿ ಅತ್ಯವಶ್ಯ ಎಂದು ಹೇಳುತ್ತ ಪುರುಷರ ಸಾಂಪ್ರದಾಯಿಕ ಮನೋಭಾವವೇ ಮೀಸಲಾತಿಯನ್ನು ತರುವಲ್ಲಿ ಅಡ್ಡಿಯಾಗಿರುವುದಾಗಿಯೂ, ಜಾತಿ, ಕೋಮುಗಳ ಹೆಸರಿನಲ್ಲಿ ಮಸೂದೆಯನ್ನು ಅಂಗೀಕರಿಸಲು ಮೀನ-ಮೇಷ ಎಣಿಸುತ್ತಿದ್ದಾರೆಂದು ಕಟುವಾಗಿ ಟೀಕಿಸಿದ್ದಾರೆ. ಸಮಾಜ ಶಾಸ್ತ್ರಜ್ಞರಾದ ಡಾ. ಆರ್. ಇಂದಿರಾ ಅವರು 'ರಾಜಕೀಯ ಮತ್ತು ಮಹಿಳೆಯರಿಗೆ ಮೀಸಲಾತಿ-ಹಲವು ಪ್ರಶ್ನೆಗಳು' ಲೇಖನದಲ್ಲಿ ಮೀಸಲಾತಿ ಕುರಿತಂತೆ ಎದ್ದಿರುವ ಗೊಂದಲಗಳಿಗೆ ಸಮಾಜದಲ್ಲಿ ಆಳವಾಗಿ ಬೇರೂರಿದ ಲಿಂಗ-ತಾರತಮ್ಯವೇ ಕಾರಣವೆಂದು ವಿಶ್ಲೇಷಿಸುತ್ತಾರೆ. ಇಂತಹ ಮನೋಭಾವ ಪ್ರಜಾಪ್ರಭುತ್ವಕ್ಕೇ ಒಡ್ಡಿದ ಸವಾಲೆಂದು ತಿಳಿಸಿ, ಜೈವಿಕ ವ್ಯತ್ಯಾಸದ ಸಾಮರ್ಥ್ಯ ಪ್ರಶ್ನೆಯನ್ನು ಅಲ್ಲಗಳೆದು ಮೀಸಲಾತಿ ಪಡೆದ ಮಹಿಳೆಯರು ಪುರುಷರ ಕೈನ ದಾಳವಾಗಬಾರದೆಂದು ಎಚ್ಚರಿಸುತ್ತಾರೆ. ವಕೀಲರಾದ ರಾಧಾ, ಮೈಥಿಲಿಯವರು (ಪಕ್ಷ ರಾಜಕೀಯದಲ್ಲಿದ್ದವರು) ಚುನಾವಣೆ ವ್ಯವಸ್ಥೆ, ಹಣ, ಹೆಂಡ, ಗೂಂಡಾಗಿರಿ, ಜಾತೀಯತೆಗಳ ಮೇಲೆ ನಿಂತಿರುವುದರಿಂದ ಮಹಿಳೆಗೆ ರಾಜಕೀಯ ಅಧಿಕಾರ ಸಿಗಬೇಕಾದರೆ ಮಹಿಳಾ ಮೀಸಲಾತಿ ಬೇಕೇ ಬೇಕೆಂದು ಒತ್ತಾಯಿಸುತ್ತಾರೆ. ಮಹಿಳೆಯರು ರಾಜಕೀಯವಾಗಿ ಹಿಂದುಳಿಯಲು ಪಿತೃಪ್ರಧಾನ ವ್ಯವಸ್ಥೆಯೇ ಕಾರಣ ಎನ್ನುವ ಪ್ರೊ. ಕೆ. ರಾಮದಾಸ ಅವರು ಮೀಸಲಾತಿಯು ಸಮಾಜದಲ್ಲಿ ಮಹಿಳೆಯ ಸ್ಥಾನವನ್ನು ಉತ್ತಮಪಡಿಸಲು ಸಹಕಾರಿಯಾಗುತ್ತದೆಂದು ನಂಬುತ್ತಾರೆ. ಕರ್ನಾಟಕದಲ್ಲಿ ಸ್ಥಾನಿಕ ಮಟ್ಟದಲ್ಲಿ ಮಹಿಳೆಯರಿಗೆ ಮೀಸಲಾತಿ ಸೌಲಭ್ಯ ದೊರೆತಿರುವುದು ಅದರಲ್ಲಿ ಸಾಕಷ್ಟು ಆತ್ಮವಿಶ್ವಾಸ ಮೂಡಿರುವುದನ್ನು ಉದಾಹರಿಸಿ, ಹೋರಾಟದ ಮನೋಭಾವವಿರುವ ಮಹಿಳೆಯರಿಗೆ ರಾಜಕೀಯ ಅಧಿಕಾರ ಸಿಗಬೇಕೆಂದು ಬಯಸುತ್ತಾರೆ. ಮಹಿಳೆಯರ ಅಭಿವೃದ್ಧಿಗೆ ಮೀಸಲಾತಿ ಒಂದು ಸಣ್ಣ ಕಿಂಡಿಯಾಗಬಹುದೆಂದು ಉತ್ತನೂರು ರಾಜಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಕೊಳೆತು ನಾರುತ್ತಿರುವ ರಾಜಕೀಯ ವ್ಯವಸ್ಥೆಯಲ್ಲಿ ಮೀಸಲಾತಿಯಿಂದ ಮಹಿಳೆಯರ ಬದುಕಿನ ಮೇಲೆ ಯಾವ ಪರಿಣಾಮ ಉಂಟಾಗಬಹುದೆನ್ನುವ ಕಾಳಜಿಯೊಂದಿಗೆ ರಾಜಕೀಯದಲ್ಲಿ ಮಹಿಳೆಯರ ಬರಿಯ ಹಾಜರಾತಿ ಏನನ್ನೂ ಸಾಧಿಸದು. ಅದು ಮಹಿಳಾ ಚಳುವಳಿಯ ಅಲ್ಪಾವಧಿ ಮತ್ತು ದೀರ್ಘಾವಧಿಯ ತಂತ್ರದ ಒಂದು ಭಾಗವಾಗಬೇಕೆಂದು ಸಹೇಲಿ ಬಯಸುತ್ತದೆ.

ಮೇಲಿನ ಈ ಹನ್ನೊಂದು ಲೇಖನಗಳು ಮೀಸಲಾತಿಯ ವಿಭಿನ್ನ ಮುಖಗಳನ್ನು ವಿಶ್ಲೇಸಿಸುತ್ತವೆ. ಮೀಸಲಾತಿಯಿಂದ ಮಹಿಳೆಯರ ಎಲ್ಲ ಸಮಸ್ಯೆಗಳು ಪರಿಹಾರವಾಗುತ್ತದೆನ್ನುವ ಭ್ರಮೆಯನ್ನು ಇವು ಹುಟ್ಟು ಹಾಕದಿರುವುದು ಆರೋಗ್ಯಕರವಾದ ಲಕ್ಷಣ. ಮೀಸಲಾತಿ ಬೇಕೆನ್ನುವಾಗಲೂ ಅದರಿಂದುಂಟಾಗಬಹುದಾದ ದುಷ್ಪರಿಣಾಮದ ಬಗೆಗೂ ಚಿಂತನೆ ನಡೆದಿರುವುದು ಸ್ತುತ್ಯಾರ್ಹ. ಮೀಸಲಾತಿಯನ್ನು ಅನುಷ್ಠಾನಗೊಳಿಸುವಾಗ ತೆಗೆದುಕೊಳ್ಳಬೇಕಾದ ಎಚ್ಚರಿಕೆಯನ್ನು ಕುರಿತು ಪ್ರಸ್ತಾಪಿಸಿರುವುದು ಸೂಕ್ತ ಎನಿಸುತ್ತದೆ. ಜೊತೆಗೆ, ಸಮಾಜದ ವಿವಿಧ ಕ್ಷೇತ್ರಗಳ ಇನ್ನಷ್ಟು ಗಣ್ಯರ ಅಭಿಪ್ರಾಯಗಳನ್ನು, ಸಾಮಾನ್ಯ ಜನರ ಅಭಿಪ್ರಾಯಗಳನ್ನು ಹಾಗೂ ಈಗಾಗಲೇ ಮೀಸಲಾತಿಯ ಫಲಾನುಭವಿಗಳಾಗಿರುವ ಒಬ್ಬಿಬ್ಬರ ಸಂದರ್ಶನಗಳನ್ನು ಸೇರಿಸಿದ್ದರೆ ಈ ಸಂಚಿಕೆ ಇನ್ನು ಹೆಚ್ಚು ಪರಿಪೂರ್ಣ ಎನಿಸುತ್ತಿತ್ತು; ಮೌಲ್ಯ ಹೆಚ್ಚುತ್ತಿತ್ತು.

ಚಂದ್ರಮತಿ ಸೋಂದಾ

ಫೆಬ್ರವರಿ ಹಾಗೂ ಮಾರ್ಚ್ ಸಂಚಿಕೆಯಲ್ಲಿ ಮೀಸಲಾತಿಯ ಬಗ್ಗೆ ಪಾಜಿಟೀವ್ ಹಾಗೂ ನೆಗಟೀವ್ ಅಂಶಗಳನ್ನು ತುಂಬಾ ಚೆನ್ನಾಗಿ ವಿಶ್ಲೇಷಿಸಲಾಗಿದೆ. ಮೀಸಲಾತಿಯ ಬಗ್ಗೆ ಒಂದು ಆಳವಾದ ನೋಟವನ್ನು ಬೀರಿದೆ. ನನಗೆ ಗೊತ್ತಿಲ್ಲದ, ಹಾಗೂ ಯೋಚಿಸದಂತಹ ಎಷ್ಟೋ ವಿಷಯಗಳು ನನಗೆ ಅದರಿಂದ ದೊರೆತವು.

*ಹೇಮಲತಾ **H. M.**, ಮೈಸೂರು.*

ಮಾನಸ ಪತ್ರಿಕೆ ಯಾವ ಸಂಸ್ಥೆಯ, ಸರ್ಕಾರದ ನೆರವಿಲ್ಲದೇ ಪ್ರಕಟವಾಗುತ್ತಿರುವ ಮಹಿಳೆಯರೇ ನಡೆಸುತ್ತಿರುವ ಸ್ವತಂತ್ರ ಪತ್ರಿಕೆ. ಓದುಗರು ಹಾಗೂ ಸಹೃದಯರು ನೀಡುವ ಆರ್ಥಿಕ ನೆರವೇ ಪತ್ರಿಕೆಯ ಜೀವಾಳ. ಚಂದಾದಾರರಿಗೆ ಚಂದಾ ಅವಧಿ ಮುಕ್ತಾಯವಾದುದರ ಬಗ್ಗೆ ಸೂಚನೆಯನ್ನು ನೀಡಲಾಗುತ್ತದೆ. ಓದುಗರು ತಕ್ಷಣ ಚಂದಾ ನವೀಕರಿಸಬೇಕೆಂದು ಕೋರುತ್ತೇವೆ. ಪತ್ರಿಕೆಯು ಉಳಿದು ಬೆಳೆಯಬೇಕಾದರೆ ಓದುಗರ ಸಹಕಾರ ಅತ್ಯಗತ್ಯ.

ವಾರ್ಷಿಕ ಚಂದಾ : 40 ರೂ.

ಸಂಸ್ಥೆಗಳಿಗೆ : 75 ರೂ.

ಸಂ. ಮಂಡಳಿ

REGD NO. KRNA 271

BOOK-POST
PRINTED MATTER

ವಿಳಾಸ :
ಮಾನಸ
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು - 560 067